ಬೆಂಗಳೂರು ಸಂಪುಟ: 16 ಸಂಚಿಕೆ: 62 ಪುಟ: 06 ಬುಧವಾರ 29-01-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh



ಒಂದಲ್ಲ, ಎರಡಲ್ಲ, 8 ಕನ್ನಡ ಚಿತ್ರಗಳು ರಿಲೀಸ್!

ಪ್ರೀತಿ ಖಚಿತಪಡಿಸಿದ ರಶ್ಮಿಕಾ ಮಂದಣ್ಣ

'ವೀರ ಸಿಂಧೂರ ಲಕ್ಷ್ಮಣ'ದ ಅಪ್‌ಡೇಟ್ ಸುಧೀರ್

ಪುಟ 6

# ಕಾಲ್ತುಳಿತ: 15ಕ್ಕೂ ಹೆಚ್ಚು ಸಾವು

## ಮೌನಿ ಅಮಾವಾಸ್ಯೆ ವೇಳೆ ತ್ರಿವೇಣಿ ಸಂಗಮದಲ್ಲಿ ನೂಕು ನುಗ್ಗಲು

**ಪ್ರಯಾಗ್‌ರಾಜ್:** ಮಹಾಕುಂಭ ಮೇಳದ ಮೌನಿ ಅಮಾವಾಸ್ಯೆ ವೇಳೆ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಮಂಗಳವಾರ ಮಧ್ಯರಾತ್ರಿಯ ಬಳಿಕ ನೂಕು ನುಗ್ಗಲಿನಿಂದಾಗಿ ಕಾಲ್ತುಳಿತ ಉಂಟಾಗಿದ್ದು, ಈ ವೇಳೆ 50ಕ್ಕೂ ಹೆಚ್ಚು ಮಂದಿ ಗಾಯಗೊಂಡು, 15ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದಾರೆ.

ಮಹಾಕುಂಭ ಮೇಳಕ್ಕೆ ಈ ಬಾರಿ ಅತ್ಯಧಿಕ ಸಂಖ್ಯೆಯ ಭಕ್ತರು ಆಗಮಿಸುತ್ತಿದ್ದು, ಇದುವರೆಗೆ ಸುಮಾರು 15 ಕೋಟಿ ಮಂದಿ ಸಂಗಮಕ್ಷೇತ್ರದಲ್ಲಿ ಪವಿತ್ರಸ್ನಾನ ಕೈಗೊಂಡಿದ್ದಾರೆ.

ಎರಡನೇ ಅಮೃತಸ್ನಾನದ ದಿನವಾದ ಬುಧವಾರ ಲಕ್ಷಾಂತರ ಭಕ್ತರು ಪ್ರಯಾಗ್ರಾಜ್ ಯಾತ್ರೆ ಕೈಗೊಂಡಿರುವುದರಿಂದ ಭಾರಿ ಜನದಟ್ಟಣೆ ಕಂಡುಬಂದಿದೆ.

ಕಾಲ್ತುಳಿತದಲ್ಲಿ ಗಾಯಗೊಂಡಿರುವ ಹಲವರ ಪೈಕಿ ಕೆಲವರು ಸಾವನ್ನಪ್ಪಿದ್ದಾರೆ . ಕಾಲ್ತುಳಿತ ಘಟನೆ ವರದಿಯಾದ ಬೆನ್ನಲ್ಲೇ 2ನೇ ಅಮೃತಸ್ನಾನಕ್ಕೆ ತಾತ್ಕಾಲಿಕ ತಡೆ ನೀಡಲಾಗಿದೆ ಎಂದು ಅಖಿಲ ಭಾರತೀಯ ಅಖಾರಾ ಪರಿಷತ್ ಅಧ್ಯಕ್ಷ ಶ್ರೀ ಮಹಾಂತ ರವೀಂದ್ರ ಅವರು ಹೇಳಿದ್ದಾರೆ.

ಅಮೃತಸ್ನಾನಕ್ಕೆ ಆಗಮಿಸದಂತೆ ಆಡಳಿತಯಂತ್ರ ನಮಗೆ ಮನವಿ ಮಾಡಿಕೊಂಡಿದೆ. ಶ್ರೀಗಳು ಮತ್ತು ನಾಗಾ ಸಾಧುಗಳ ಮೆರವಣಿಗೆ ಮುಂದೆ ಸಾಗುವ ಸಿದ್ಧತೆ ನಡೆದಿದ್ದರೂ, ನಾವು ಪ್ರಸ್ತುತ ಹಿಂದಿರುಗಿದ್ದೇವೆ. ಸದ್ಯಕ್ಕೆ ಅಮೃತಸ್ನಾನ ತಡೆಹಿಡಿಯಲಾಗಿದೆ. ಶೀಘ್ರವೇ ಮುಂದಿನ ಕ್ರಮ ಕೈಗೊಳ್ಳುತ್ತೇವೆಂದು ಅಧಿಕಾರಿಗಳೂ ತಿಳಿಸಿದ್ದಾರೆ.

ಸ್ಥಳದಲ್ಲಿ ಹಾಕಲಾಗಿದ್ದ ಬ್ಯಾರಿಕೇಡ್ ಗಳನ್ನು ತಳ್ಳಿ, ಮುರಿಯುವಂತೆ ಮಾಡಿದ್ದಾರೆ. ಇದರಿಂದ ಕಾಲ್ತುಳಿತ ಎದುರಾಗಿ ಕೆಲವರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು, ಪರಿಸ್ಥಿತಿ ಗಂಭೀರವಾಗಿಲ್ಲ ಎಂದು ಹೇಳಿದ್ದಾರೆ.

ಘಟನೆ ಬೆನ್ನಲ್ಲೇ ಪ್ರಯಾಗ್ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭಮೇಳದ ಪರಿಸ್ಥಿತಿಯನ್ನು ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಪುಟ 2



## ಮೃತರ ಕುಟುಂಬಕ್ಕೆ ಮೋದಿ ಸಂತಾಪ



**ನವದೆಹಲಿ:** ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ ತಮ್ಮ ಕುಟುಂಬ ಸದಸ್ಯರನ್ನು ಕಳೆದುಕೊಂಡವರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬುಧವಾರ ತೀವ್ರ ಸಂತಾಪ ಸೂಚಿಸಿದ್ದಾರೆ.ಸಾಮಾಜಿಕ ಜಾಲತಾಣ ಪುಟ 2



ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯ ಶಾಸಕರುಗಳ ಜತೆ ಡಿಸಿಎಂ ಡಿ ಕೆ ಶಿವಕುಮಾರ್ ಅವರು ನಿಗಮದ ಕಚೇರಿಯಲ್ಲಿ ಬುಧವಾರ ಸಭೆ ನಡೆಸಿದರು. ಶಾಸಕರಾದ ರುದ್ರಪ್ಪ ಲಮಾಣಿ, ಶಿವಣ್ಣ, ಅಶೋಕ್ ಪಟ್ಟಣ, ವಿನಯ್ ಕುಲಕರ್ಣಿ, ಜಿ ಎಸ್ ಪಾಟೀಲ್, ಬಣಕಾರ್, ಪ್ರಕಾಶ್ ಕೋಳಿವಾಡ್, ಶ್ರೀನಿವಾಸ್ ಮಾನೆ, ಸಯ್ಯದ್ ಯಾಸೀರ್ ಪಠಾಣ್, ರಾಜೂ ಗೌಡ, ಕೋನರೆಡ್ಡಿ, ಶಿವಗಂಗಾ, ವಿಶ್ವಾಸ್ ವೈದ್ಯ, ಚಿಮ್ಮಣಕಟ್ಟಿ, ಬಸವಂತಪ್ಪ, ಅಶೋಕ್ ರೈ, ಚನ್ನರಾಜ್ ಹಟ್ಟಿಹೊಳಿ, ರಾಜೇಶ್ ಅಮ್ಮಿನ್ ಬಾವಿ, ಡಿಸಿಎಂ ತಾಂತ್ರಿಕ ಸಲಹೆಗಾರ ಜೈಪ್ರಕಾಶ್ ಮತ್ತಿತರರು ಭಾಗವಹಿಸಿದ್ದರು.

## ಮೃತಪಟ್ಟವರಿಗೆ ಸಿಎಂ ತೀವ್ರ ಸಂತಾಪ

**ಬೆಂಗಳೂರು:** ಪ್ರಯಾಗ್ ರಾಜ್‌ನ ಮಹಾಕುಂಭಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಸಿಎಂ ಸಿದ್ದರಾಮಯ್ಯ ತೀವ್ರ ಸಂತಾಪ ಸೂಚಿಸಿದ್ದಾರೆ.



ಈ ಕುರಿತು ಟ್ವೀಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ಪ್ರಯಾಗ್ ರಾಜ್ ನ ಮಹಾಕುಂಭಮೇಳದಲ್ಲಿ ಇಂದು ಮುಂಜಾನೆ ಸಂಭವಿಸಿದ ಕಾಲ್ತುಳಿತದಲ್ಲಿ ಹಲವರು ಸಾವಿಗೀಡಾದ ಸುದ್ದಿ ತಿಳಿದು ದುಃಖವಾಯಿತು. ಮೃತರ ಆತ್ಮಗಳಿಗೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ. ಘಟನೆಯಲ್ಲಿ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸುತ್ತೇನೆ ಎಂದಿದ್ದಾರೆ ಕಾಲ್ತುಳಿತದಲ್ಲಿ ರಾಜ್ಯದ ಕೆಲವರು ಗಾಯಗೊಂಡಿರುವ ಮಾಹಿತಿಯಿದೆ. ಪುಟ 2

## ಕಳಪೆ ವ್ಯವಸ್ಥೆ ಕಾಲ್ತುಳಿತಕ್ಕೆ ಕಾರಣ



**ನವದೆಹಲಿ:** ಪ್ರಯಾಗ್ರಾಜ್ ಮಹಾಕುಂಭ ಮೇಳದಲ್ಲಿ ನಡೆಸಿರುವ ಅರ್ಧಂಬರ್ಧ ವ್ಯವಸ್ಥೆ, ವಿಐಪಿ ಸಂಸ್ಕೃತಿ, ಸರಿಯಾದ ನಿರ್ವಹಣೆಯ ಹೊರತಾಗಿಯೂ ಸ್ವಯಂಪ್ರಚಾರ ನಡೆಸಿದ್ದರಿಂದಾಗಿ ಕಾಲ್ತುಳಿತ ಸಂಭವಿಸಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

ಈ ಕುರಿತು ಎಕ್ಸಲ್ಲಿ ಪೋಸ್ಟ್ ಮಾಡಿರುವ ಅವರು, ಮಹಾಕುಂಭದಲ್ಲಿ ತೀರ್ಥರಾಜ್ ಸಂಗಮದ ದಡದಲ್ಲಿ ಉಂಟಾದ ಕಾಲ್ತುಳಿತದಲ್ಲಿ ಅನೇಕರು ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿರುವ ವರದಿ ಕೇಳಿ ಬೇಸರವಾಯಿತು. ಅಗಲಿದ ಭಕ್ತರ ಕುಟುಂಬಕ್ಕೆ ನನ್ನ ತೀವ್ರ ಸಂತಾಪಗಳು. ಹಾಗೆಯೇ ಗಾಯಾಳುಗಳು ಶೀಘ್ರ ಚೇತರಿಕೆಗೆ ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

ಇದೇ ವೇಳೆ ಕಾಲ್ತುಳಿತಕ್ಕೆ ವ್ಯವಸ್ಥೆಯ ಕೊರತೆ, ವಿಐಪಿಗಳ ಹೆಚ್ಚಿನ ಆಗಮನ ಮತು ಸೂಕ್ತ ನಿರ್ವಹಣೆ ಹೊರತಾಗಿ ಸ್ವಯಂ ಪ್ರಚಾರಕ್ಕೆ ಮುಂದಾಗಿರುವುದೇ ಕಾರಣವಾಗಿದೆ. ಸಾವಿರಾರು ಕೋಟಿ ರೂ ವ್ಯಯಿಸಿದ ಬಳಿಕವೂ ಈ ರೀತಿಯ ಅವ್ಯವಸ್ಥೆಗಳನ್ನು ಸಹಿಸಲಸಾಧ್ಯ. ಮಹಾಕುಂಭದಲ್ಲಿನ ವಿಐಪಿ ಸಂಸ್ಕೃತಿಯನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಪವಿತ್ರ ಸ್ನಾನಕ್ಕೆ ಇನ್ನೂ ಹಲವು ಪ್ರಮುಖ ದಿನಗಳಿವೆ. ಹೀಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಲೇ ಎಚ್ಚೆತ್ತು, ಭವಿಷ್ಯದಲ್ಲಿ ಇಂಥ ಅಹಿತಕರ ಘಟನೆಗಳು ಸಂಭವಿಸದಂತೆ ವ್ಯವಸ್ಥೆಯಲ್ಲಿ ಸುಧಾರಣೆ ಮಾಡಬೇಕಿದೆ. ಭಕ್ತರಿಗೆ ನೀಡುತ್ತಿರುವ ಸೌಲಭ್ಯ, ಆಹಾರ, ಪ್ರಥಮ ವೈದ್ಯಕೀಯ ಚಿಕಿತ್ಸೆಯನ್ನು ವಿಸ್ತರಿಸಬೇಕು. ಇದನ್ನೇ ಇಲ್ಲಿನ ಸಂತರು ಕೇಳುತ್ತಿರುವುದು. ನಮ್ಮ ಕಾಂಗ್ರೆಸ್ ಕಾರ್ಯಕರ್ತರು ಕೂಡ ಸಂತ್ರಸ್ತರಿಗೆ ಎಲ್ಲಾ ರೀತಿಯ ಸಾಧ್ಯವಿರುವ ಸಹಾಯವನ್ನು ನೀಡಲು ಮುಂದಾಬೇಕು ಎಂದು ಮನವಿ ಮಾಡಿದರು.

ಏತನ್ಮಧ್ಯೆ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕೂಡ ಭಕ್ತರಿಗೆ ಮನವಿ ಮಾಡಿದ್ದು, ನಿಮಗೆ ಸಮೀಪದ ಘಾಟ್ಗಳಲ್ಲಿ ಪವಿತ್ರ ಸ್ನಾನ ಮಾಡಿ, ಪುಟ 2

## ಅವಘಡ: 100 ವಾಹನಗಳು ಭಸ್ಮ

**ಬೆಂಗಳೂರು:** ಜಕ್ಕರಾಯನಕೆರೆ ಬಳಿಯ ಜೆಡಿಎಸ್ ಕಚೇರಿ ಪಕ್ಕದ ಮೈದಾನದಲ್ಲಿ ಅಗ್ನಿ ಅವಘಡ ಸಂಭವಿಸಿ ಪೊಲೀಸರು ಜಪ್ತಿ ಮಾಡಿದ್ದ 100ಕ್ಕೂ ಹೆಚ್ಚು ವಾಹನಗಳು ಬೆಂಕಿಗಾಹುತಿಯಾಗಿದೆ. ಜಪ್ತಿ ಮಾಡಿದ್ದ ವಾಹನಗಳನ್ನು ಪೊಲೀಸರು ಶೇಷಾದ್ರಿಪುರಂ ಬಳಿಯ ಜಕ್ಕರಾಯನ ಕೆರೆ ಮೈದಾನದಲ್ಲಿ ನಿಲುಗಡೆ ಮಾಡಿದ್ದರು. ಈ ಜಾಗಕ್ಕೆ ಇಂದು ಬೆಳಗ್ಗೆ ಬೆಂಕಿ ಬಿದ್ದು ಬೆಂಕಿಯಿಂದ ಐದು ಕಾರು, ಐದು ಆಟೋ, 50 ಕ್ಕೂ ಹೆಚ್ಚು ಬೈಕ್‌ಗಳು ಸುಟ್ಟು ಹೋಗಿವೆ. ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ಧಾವಿಸಿದ ನಾಲ್ಕು ಅಗ್ನಿಶಾಮಕ ವಾಹನಗಳು ಬೆಂಕಿ ನಂದಿಸಿದ್ದು,ಮತ್ತಷ್ಟು ವಾಹನಗಳಿಗೆ ಬೆಂಕಿ ಹೊತ್ತಿಕೊಳ್ಳುವುದು ತಪ್ಪಿದೆ. ಮೈದಾನದಲ್ಲಿ ಹುಲ್ಲು,ಗಿಡ ಬೆಳೆದುಕೊಂಡಿತ್ತು. ಪುಟ 2

## ಕಿರುಕುಳ ನೀಡಿದವರ ವಿರುದ್ಧ ಸುಮೋಟೋ

**ಬೆಂಗಳೂರು :** ಸಾಲ ವಸೂಲಿಗಿಳಿದು ಕಿರುಕುಳ ನೀಡುವ ಮೈಕ್ರೋ ಫೈನಾನ್ಸ್ ಗಳ ವಿರುದ್ಧ ಸುಮೋಟೋ ಕೇಸ್ ದಾಖಲಿಸಲಾಗುವುದು ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು. ಈ ಕುರಿತು ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮೈಕ್ರೋ ಫೈನಾನ್ಸ್ ಕಿರುಕುಳ ತಡೆಗೆ ಸುಗ್ರಿವಾಜ್ಞೆ ಹೊರಡಿಸಲಾಗುವುದು. ಕಿರುಕುಳ ನೀಡಿದವರ ವಿರುದ್ಧ ಸುಮೋಟೊ ಕೇಸ್ ದಾಖಲಿಸಲಾಗುತ್ತದೆ. ಕಿರುಕುಳದ ಬಗ್ಗೆ ಎಸ್ ಪಿ ಡಿಸಿಗೆ ದೂರು ಕೊಡಬಹುದು.

ಜನರು ದೂರು ನೀಡಿದ ತಕ್ಷಣವೇ ಕ್ರಮ ಕೈಗೊಳ್ಳಲಾಗುತ್ತದೆ . ಈ ಸಂಬಂಧ ರಾಜ್ಯಾದ್ಯಂತ ಸಹಾಯವಾಣಿ ಪ್ರಾರಂಭಿಸಲಾಗಿದೆ. ಸುಗ್ರೀವಾಜ್ಞೆ ಕುರಿತು ಸಭೆಯಲ್ಲಿ ಚರ್ಚಿಸುತ್ತೇವೆ ಎಂದು ತಿಳಿಸಿದರು.

## ಭೂಪರಿವರ್ತನೆ ಅನಗತ್ಯ ವಿಳಂಬ ಸಹಿಸಲ್ಲ: ಸಿಎಂ ಎಚ್ಚರಿಕೆ

**ಬೆಂಗಳೂರು:** ಭೂಪರಿವರ್ತನೆಯ ಪ್ರಕರಣಗಳಲ್ಲಿ ಜನಸಾಮಾನ್ಯರಿಗೆ ಯಾವುದೇ ಕಿರುಕುಳ ಅನಗತ್ಯ ವಿಳಂಬವಾಗಬಾರದು. ಶೀಘ್ರದಲ್ಲೇ ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು ಎಂದು ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಎಚ್ಚರಿಕೆ ನೀಡಿದ್ದಾರೆ.

ನಗರ ಪ್ರದೇಶಗಳಲ್ಲಿ ಮಾಸ್ಟರ್ ಪ್ಲಾನ್ ಸಕಾಲಕ್ಕೆ ನವೀಕರಣವಾಗಬೇಕು ಎಂದು ಅವರು ತಾಕೀತು ಮಾಡಿದರು. ಗೃಹ ಕಛೇರಿ ಕೃಷ್ಣಾದಲ್ಲಿ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಭೂ ಪರಿವರ್ತನೆ ಸಂಪೂರ್ಣ ಪ್ರಕ್ರಿಯೆಯನ್ನು ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು. ಮಾಸ್ಟರ್ ಪ್ಲಾನ್ ಆಗಿರುವ ಕಡೆ ಮತ್ತೆ ಭೂಪರಿವರ್ತನೆ ಅಗತ್ಯವಿಲ್ಲ. ಈಗಾಗಲೇ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಈ ಸಂಬಂಧ ಶೀಘ್ರ ಆದೇಶ ಹೊರಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಕಂದಾಯ ನ್ಯಾಯಾಲಯಗಳಲ್ಲಿ ತ್ವರಿತವಾಗಿ ಪ್ರಕರಣಗಳು ವಿಲೇವಾರಿಯಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳಿಗೆ ಕಂದಾಯ ಸಚಿವ ಕೃಷ್ಣ ಭೈರೆಗೌಡ ಸಭೆಯಲ್ಲಿ ದಾಖಲೆ ಸಹಿತ ಮಾಹಿತಿ ಒದಗಿಸಿದರು. ಇದಕ್ಕೆ ಹರ್ಷ ವ್ಯಕ್ತಪಡಿಸಿದ ಸಿದ್ದರಾಮಯ್ಯ ಹತ್ತು ವರ್ಷ ಹಾಗೂ ಐದು ವರ್ಷಕ್ಕೂ ಅಧಿಕ ಅವಧಿಯಿಂದ ಬಾಕಿ ಉಳಿದಿದ್ದ ಬಹುತೇಕ ಪ್ರಕರಣಗಳಿಗೆ ಒಂದುವರೆ ವರ್ಷದಲ್ಲಿ ಮುಕ್ತಿ ದೊರಕಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗ ಹತ್ತು ಸಾವಿರಕ್ಕೂ ಅವಧಿ ಮೀರಿದ ಪ್ರಕರಣಗಳಿದ್ದವು. ಈಗ ಕೇವಲ 369 ಪ್ರಕರಣಗಳು ಮಾತ್ರ ತಹಸಿಲ್ದಾರ್ ನ್ಯಾಯಾಲಯಗಳಲ್ಲಿವೆ ಎಂಬ ಮಾಹಿತಿಯನ್ನು ಕಂದಾಯ ಸಚಿವರು ನೀಡಿದರು.

ಖಾತೆ ಬದಲಾವಣೆ ಪ್ರಕ್ರಿಯೆಯನ್ನು ಶೇ. 65 ಪ್ರಕರಣಗಳಲ್ಲಿ ಒಂದು ದಿನದ ಒಳಗಾಗಿ ವಿಲೇವಾರಿಯಾಗುತ್ತಿರುವುದು ಸಂತಸದ ವಿಚಾರ. ಇದು ಆಟೋಮ್ಯೂಟೇಶನ್ ಮೂಲಕ ಸಾಧ್ಯವಾಗಿದೆ ಎಂದರು.

ಆಯಾ ಕೋರ್ಟ್‌ಗಳಲ್ಲಿ ಪ್ರಕರಣಗಳು ಸಮರೋಪಾದಿಯಲ್ಲಿ ಇತ್ಯರ್ಥವಾಗುತ್ತಿವೆ. ಆದರೆ ಉಪವಿಭಾಗಾಧಿಕಾರಿ ಪುಟ 2


## 100ನೇ GSLV F15 ಉಪಗ್ರಹ ಉಡಾವಣೆ ಯಶಸ್ವಿ



**ಶ್ರೀಹರಿಕೋಟಾ:** ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಇಲ್ಲಿಂದ ತನ್ನ 100ನೇ ಉಡಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇಂದು ಬೆಳಗ್ಗೆ ಬೆಳಿಗ್ಗೆ 6:23ಕ್ಕೆ ಉಖಐಗಿ–ಈ15 ರಾಕೆಟ್ ಮೂಲಕ ಓಗಿಖ-02 ಉಪಗ್ರಹವನ್ನು ಉಡಾಯಿಸಲಾಗಿದೆ. ಸ್ವದೇಶಿ ನಿರ್ಮಿತ ಕ್ರಯೋಜನಿಕ್ ಎಂಜಿನ್ ಹೊಂದಿರುವ ಜಿಯೋಸಿಂಕ್ರೋನಸ್ ಉಪಗ್ರಹ ಉಡ್ಡಯನ ವಾಹನ(ಜಿಎಸ್‌ಎಲ್‌ವಿ)ನ 17ನೇ ಉಡ್ಡಯನ ಇದಾಗಿದೆ. ಈ ಉಪಗ್ರಹವು ನ್ಯಾವಿಗೇಷನ್ ಸೆಟಲೈಟ್ ಎನ್‌ವಿಎಸ್–02 (ಎರಡನೇ ತಲೆಮಾರಿನ ಪುಟ 2

## 10 ಕೋಟಿ ಜನ ಬಂದಿದ್ದಾರೆ, ವದಂತಿಗಳಿಗೆ ಕಿವಿಗೊಡಬೇಡಿ: ಯೋಗಿ

**ಲಕ್ನೋ:** 'ಬ್ಯಾರಿಕೇಡ್‌ಗಳನ್ನು ದಾಟಲು ಭಕ್ತರು ಪ್ರಯತ್ನಿಸಿ ಗಾಯಗೊಂಡರು. ಘಟನಾ ಸ್ಥಳದಲ್ಲಿ ನಮ್ಮ ಸಂಪೂರ್ಣ ಆಡಳಿತವಿದೆ. ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸುತ್ತಿರುವಾಗ ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ', ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ, ಮಹಾಕುಂಭ ಪ್ರದೇಶದ ಬಳಿ ಇನ್ನೂ ಹೆಚ್ಚಿನ ಭಕ್ತರು ಇದ್ದಾರೆ ಎಂದು ತಿಳಿಸಿದ್ದಾರೆ.



'ಬ್ಯಾರಿಕೇಡ್‌ಗಳನ್ನು ದಾಟಲು ಭಕ್ತರು ಪ್ರಯತ್ನಿಸಿ ಗಾಯಗೊಂಡರು. ಘಟನಾ ಸ್ಥಳದಲ್ಲಿ ನಮ್ಮ ಸಂಪೂರ್ಣ ಆಡಳಿತವಿದೆ. ಬ್ಯಾರಿಕೇಡ್‌ಗಳನ್ನು ದಾಟಲು ಪ್ರಯತ್ನಿಸುತ್ತಿರುವಾಗ ಕೆಲವರು ಗಂಭೀರವಾಗಿ ಗಾಯಗೊಂಡಿದ್ದಾರೆ', ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದರು, ಮಹಾಕುಂಭ ಪ್ರದೇಶದ ಬಳಿ ಇನ್ನೂ ಹೆಚ್ಚಿನ ಭಕ್ತರು ಇದ್ದಾರೆ ಎಂದು ತಿಳಿಸಿದರು.

ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಕಾಲ್ತುಳಿತದಘಟನೆ ಸಂಭವಿಸಿದ್ದು, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಪರಿಸ್ಥಿತಿ "ನಿಯಂತ್ರಣದಲ್ಲಿದೆ" ಮತ್ತು 'ಮೌನಿ ಅಮಾವಾಸ್ಯೆ' ಸಂದರ್ಭದಲ್ಲಿ 'ಅಮೃತ ಸ್ನಾನ' ಪುನರಾರಂಭಗೊಳ್ಳಲಿದೆ ಎಂದು ಹೇಳಿದರು. ನಗರದಲ್ಲಿ ಸುಮಾರು 10 ಕೋಟಿ ಭಕ್ತರಿದ್ದು, ಕುಂಭಮೇಳ ಸ್ಥಳದಲ್ಲಿ ಭಾರೀ ಜನದಟ್ಟಣೆ ಇದೆ ಎಂದು ಸಿಎಂ ತಿಳಿಸಿದರು.

ಭಕ್ತರ ಸಂಖ್ಯೆಯನ್ನು ವಿವರಿಸಿದ ಯೋಗಿ ಆದಿತ್ಯನಾಥ್, ಪ್ರಸ್ತುತ ನಗರದಲ್ಲಿ ಸುಮಾರು 10 ಕೋಟಿ ಜನರು ಇದ್ದಾರೆ ಎಂದು ಹೇಳಿದರು. 'ಮುಖ್ಯ ಸಂಗಮಕ್ಕೆ ಹೋಗುವ ಯಾತ್ರಾರ್ಥಿಗಳ ಸಂಖ್ಯೆ ಹೆಚ್ಚಾಗಿದ್ದು, ಆಡಳಿತವಿದೆ ಸಜ್ಜಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಘಟನಾ ಸ್ಥಳದ ಮೇಲೆ ನಿಗಾ ಇಟ್ಟಿದ್ದು, ಬೆಳಗ್ಗೆಯಿಂದ ನಾಲ್ಕು ಬಾರಿ ಕರೆ ಮಾಡಿ ಪರಿಸ್ಥಿತಿ ಅವಲೋಕಿಸಿದ್ದಾರೆ. ಪುಟ 2

## ಏರ್ ಶೋ: ಫೆ.13 ಮತ್ತು 14 ರಂದು ರಜೆ

**ಬೆಂಗಳೂರು:** ಫೆಬ್ರವರಿ 13, 14ರಂದು ಏರ್ ಶೋ ಹಿನ್ನೆಲೆಯಲ್ಲಿ ಬೆಂಗಳೂರಿನ ಯಲಹಂಕ ವಾಯುನೆಲೆ ಸುತ್ತಮುತ್ತಲಿನ ಸರ್ಕಾರಿ ಪ್ರಥಮ ದರ್ಜೆ, ಖಾಸಗಿ ಅನುದಾನಿತ ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ.

ಕಾಲೇಜು ಶಿಕ್ಷಣ ಇಲಾಖೆ ಈ ಆದೇಶ ಹೊರಡಿಸಿದ್ದು, ಏರ್ ಫೋರ್ಸ್ ಸ್ಟೇಷನ್ ಮತ್ತು ಯಲಹಂಕದ ಸುತ್ತಮುತ್ತಲಿನ ಕಾಲೇಜುಗಳಿಗೆ ಈ ಆದೇಶ ಅನ್ವಯವಾಗಲಿದೆ. ಫೆಬ್ರವರಿ 13 ಮತ್ತು 14ರಂದು ಬೆಂಗಳೂರಿನ ಯಲಹಂಕ ವಾಯುಪಡೆ ನಿಲ್ದಾಣದಲ್ಲಿ ಏಷ್ಯಾದ ಅತಿದೊಡ್ಡ ಏರ್ ಶೋ ನಡೆಯಲಿದ್ದು, ಈ ಏರ್ ಶೋ ವೀಕ್ಷಿಸಲು ದೇಶ-ವಿದೇಶಗಳಿಂದ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಮತ್ತು ಗಣ್ಯರು ಆಗಮಿಸುತ್ತಾರೆ.

ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಸರ್ಕಾರಿ ಪ್ರಥಮ ದರ್ಜೆ, ಖಾಸಗಿ ಅನುದಾನಿತ ಕಾಲೇಜುಗಳ ವಿದ್ಯಾರ್ಥಿಗಳ ತರಗತಿಗಳನ್ನು ರದ್ದುಪಡಿಸಲು ಶಿಕ್ಷಣ ಇಲಾಖೆ ಪುಟ 2

## ಜೆಪಿಸಿ ಸಭೆ ಮುಕ್ತಾಯ: 14–11 ಮತಗಳ ಅಂತರದಿಂದ ಪಾಸ್

ನವದೆಹಲಿ: ರಾಷ್ಟ್ರ ರಾಜಧಾನಿಯಲ್ಲಿ ಬುಧವಾರ ನಡೆದ ವಕ್ಫ್ ಜಂಟಿ ಸಂಸದೀಯ ಸಮಿತಿ (ಜೆಪಿಸಿ) ಸಭೆಯಲ್ಲಿ ವಕ್ಫ್ ಕರಡು ಮಸೂದೆಯನ್ನು ಸ್ವೀಕರಿಸಲಾಗಿದೆ. ಮಸೂದೆಯ ಪರವಾಗಿ 14 ಹಾಗೂ ವಿರುದ್ಧ 11 ಮತಗಳು ಚಲಾವಣೆಯಾದವು. ಜೆಪಿಸಿಯ ವಿರೋಧ ಪಕ್ಷದ ಸದಸ್ಯರು ಇಂದು (ಜ.29) ಸಂಜೆ 4 ಗಂಟೆಯೊಳಗೆ ತಮ್ಮ ಭಿನ್ನಾಭಿಪ್ರಾಯಗಳನ್ನು ದಾಖಲಿಸಬಹುದು.

ಸಭೆಗೂ ಮುನ್ನ ಮಾತನಾಡಿದ ವಕ್ಫ್ (ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸುತ್ತಿರುವ ಸಂಸತ್ತಿನ ಜಂಟಿ ಸಮಿತಿಯ ಅಧ್ಯಕ್ಷ ಜಗದಾಂಬಿಕಾ ಪಾಲ್, ಸಮಿತಿಯ ಕರಡು ವರದಿ ಮತ್ತು ಪ್ರಸ್ತಾವಿತ ಕಾನೂನಿನ ತಿದ್ದುಪಡಿ ಆವೃತ್ತಿಯನ್ನು ಬುಧವಾರದ ಸಭೆಯಲ್ಲಿ ಅಂಗೀಕರಿಸಲಾಗುವುದು ಎಂದು ಹೇಳಿದ್ದರು. ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ (ಎನ್ಡಿಎ) ಸದಸ್ಯರು ಪುಟ 2

ಮೊದಲ ಪುಟದಿಂದ

## ವಾಹನಗಳು ಭಸ್ಮ

ಇಂದು ಯಾರೋ ಸಿಗರೇಟ್‌ಗಾಗಿ ಬೆಂಕಿ ಕಡ್ಡಿ ಗೀರಿ ಎಸೆದು ಹೋಗಿದ್ದರಿಂದ ಈ ಅವಘಡ ಸಂಭವಿಸಿದ್ದು ಪ್ರಕರಣ ದಾಖಲಿಸಿರುವ ಶೇಷಾದ್ರಿಪುರಂ ಪೊಲೀಸರು ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

## ಕಿವಿಗೊಡಬೇಡಿ: ಯೋಗಿ

ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಕೂಡ ಕರೆ ಮಾಡಿದ್ದಾರೆ ಎಂದು ಸಿಎಂ ಯೋಗಿ ತಿಳಿಸಿದ್ದಾರೆ.

ಉದ್ವಿಗ್ನ ಪರಿಸ್ಥಿತಿಯ ನಡುವೆ, ಸಿಎಂ ಯೋಗಿ ಭಕ್ತರು 'ತ್ರಿವೇಣಿ ಸಂಗಮ' ನದಿಯತ್ತ ಧಾವಿಸದೆ ಪ್ರಯಾಗರಾಜ್‌ನ ಹಲವಾರು ಸ್ಥಳಗಳಲ್ಲಿ ನಿರ್ಮಿಸಲಾದ 'ಸ್ನಾನ್' ಘಾಟ್‌ಗಳಲ್ಲಿ ಪವಿತ್ರ ಸ್ನಾನ ಮಾಡಿ ಎಂದು ಮನವಿ ಮಾಡಿದರು. ವದಂತಿಗಳಿಗೆ ಕಿವಿಗೊಡಬೇಡಿ ಎಂದು ಅವರು ಜನರಿಗೆ ಮನವಿ ಮಾಡಿದರು. ಬೃಹತ್ ಉತ್ಸವದಲ್ಲಿ ಸಾವಿರಾರು ಹಿಂದೂಗಳು ನದಿಯಲ್ಲಿ ಪವಿತ್ರ ಸ್ನಾನ ಮಾಡಲು ಧಾವಿಸುತ್ತಿರುವುದನ್ನು ಡ್ರೋನ್ ದೃಶ್ಯಗಳು ತೋರಿಸಿವೆ. ನಿನ್ನೆ 5.5 ಕೋಟಿ ಜನರು ಪುಣ್ಯಸ್ನಾನ ಮಾಡಿದರು. ಇಂದು ಬೆಳಗ್ಗೆ 8:30ರವರೆಗೆ ಸುಮಾರು 3 ಕೋಟಿ ಭಕ್ತರು ಸ್ನಾನ ಮಾಡಿದ್ದಾರೆ ಎಂದು ಮುಖ್ಯಮಂತ್ರಿಗಳು ಖಚಿತಪಡಿಸಿದರು.

## ಫೆ.13 ಮತ್ತು 14 ರಂದು ರಜೆ

ಆದೇಶಿಸಿದೆ. ಬೆಂಗಳೂರು ಏರ್ ಶೋ 'ಏರೋ ಇಂಡಿಯಾ 2025'ಗೆ ಸಿದ್ಧತೆಗಳು ಭರದಿಂದ ಸಾಗಿವೆ. ಮತ್ತೊಂದೆಡೆ, ಏರ್ ಶೋ ವೇಳೆ ಅತ್ತ ಕೆಂಪೇಗೌಡ ಏರ್ಪೋರ್ಟ್ ನಲ್ಲಿ ಪ್ರಯಾಣಿಕ ವಿಮಾನಗಳ ಹಾರಾಟದಲ್ಲಿ ತುಸು ವ್ಯತ್ಯಯಕ್ಕೂ ಕಾರಣವಾಗಲಿದೆ.

ಸಮರೋಪಾದಿಯಲ್ಲಿ ಪ್ರಕರಣಗಳ ವಿಲೇವಾರಿ: ಸಿಎಂ ಮೆಚ್ಚುಗೆ

ಬೆಂಗಳೂರು; '10'ವರ್ಷ ಕ್ಕೂ ಅಧಿಕ ಅವಧಿಯಿಂದ ಬಾಕಿ ಇದ್ದ ಮುಕ್ಕಾಲು ಪ್ರಕರಣಗಳಿಗೆ ಒಂದೂವರೆ ವರ್ಷದಲ್ಲಿ ಮುಕ್ತಿ ಸಿಕ್ಕಿರುವ ಬಗ್ಗೆ ತೃಪ್ತಿ ಇದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದ್ದಾರೆ. ಅವರು ಗೃಹಕಚೇರಿ 'ಕೃಷ್ಣಾ'ದಲ್ಲಿ ನಡೆಸಿದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತಾನಾಡಿದ ಇತರೆ ಈ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಖಾತೆ ಬದಲಾವಣೆ ಪ್ರಕ್ರಿಯೆಯ ಶೇ.65 ಪ್ರಕರಣಗಳನ್ನು ಒಂದು ದಿನದ ಒಳಗಾಗಿ ಮಾಡಲಾಗುತ್ತಿರುವುದು ಒಳ್ಳೆಯ ಸಂಗತಿ, ಆಟೋ ಮ್ಯುಟೇಶನ್ ಮೂಲಕ ಇದು ಸಾಧ್ಯವಾಗಿದೆ, ಭೂ ಪರಿವರ್ತನೆ ಸಂಪೂರ್ಣ ಪ್ರಕ್ರಿಯೆಯನ್ನು ಒಂದು ತಿಂಗಳ ಒಳಗಾಗಿ ಪೂರ್ಣಗೊಳಿಸಬೇಕು, ಮಾಸ್ಟರ್ ಪ್ಲಾನ್ ಆದ ಕಡೆ ಮತ್ತೆ ಭೂ ಪರಿವರ್ತನೆ ಅಗತ್ಯವಿಲ್ಲ ಎಂದು ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ, ಈ ಕುರಿತು ಆದೇಶವನ್ನು ಆದಷ್ಟು ಬೇಗನೆ ಹೊರಡಿಸಲು ಸಿಎಂ ಸೂಚನೆ ನೀಡಿದರು.

ನಗರ ಪ್ರದೇಶಗಳಲ್ಲಿ ಮಾಸ್ಟರ್ ಪ್ಲಾನ್ ಕಾಲದಿಂದ ಕಾಲಕ್ಕೆ ನವೀಕರಿಸಬೇಕು. ಮ್ಯುಟೇಶನ್, ಭೂ ಪರಿವರ್ತನೆ ಪ್ರಕರಣಗಳಲ್ಲಿ ಜನಸಾಮಾನ್ಯರಿಗೆ ಯಾವುದೇ ಕಿರುಕುಳ, ಅನಗತ್ಯ ವಿಳಂಬವಾಗದಂತೆ ಎಚ್ಚರಿಕೆ ವಹಿಸಿ ಎಂದು ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ ಸಿದ್ಧರಾಮಯ್ಯ ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡಬೇಕು, ವಿಳಂಬಕ್ಕೆ ಅವಕಾಶ ಇರಬಾರದು, ತಹಶೀಲ್ದಾರ್ ನ್ಯಾಯಾಲಯಗಳಲ್ಲಿ ಮೂರು ತಿಂಗಳ ಒಳಗಾಗಿ ಪ್ರಕರಣಗಳ ವಿಲೇವಾರಿ ಮಾಡಬೇಕು, ನಮ್ಮ ಸರ್ಕಾರ ಬಂದಾಗ 10 ಸಾವಿರಕ್ಕೂ ಮಿಕ್ಕಿ ಅವಧಿ ಮೀರಿದ ಪ್ರಕರಣಗಳು ಇದ್ದವು, ಈಗ ಕೇವಲ 369 ಪ್ರಕರಣಗಳು ಮಾತ್ರ ತಹಶೀಲ್ದಾರ್ ನ್ಯಾಯಾಲಯಗಳಲ್ಲಿವೆ. ಪ್ರಕರಣಗಳ ವಿಲೇವಾರಿ ತ್ವರಿತಗೊಳಿಸುವ ಜತೆಗೆ ನ್ಯಾಯದಾನದ ಗುಣಮಟ್ಟ ಸಹ ಸುಧಾರಿಸಬೇಕು ಎಂದರು.

ತಹಶೀಲ್ದಾರ್ ಕೋರ್ಟ್ ಗಳಲ್ಲಿ ಪ್ರಕರಣಗಳು ಸಮರೋಪಾದಿಯಲ್ಲಿ ವಿಲೇವಾರಿ ಆಗುತ್ತಿದೆ. ಆದರೆ ಉಪ ವಿಭಾಗಾಧಿಕಾರಿ ನ್ಯಾಯಾಲಯಗಳಲ್ಲಿ ವಿಲೇವಾರಿ ವೇಗ ಕಡಿಮೆ ಇರುವುದನ್ನು ತಾಂತ್ರಿಕ ಕಾರಣಗಳ ಸಮೇತ ಸಚಿವ ಕೃಷ್ಣಬೈರೇಗೌಡರ ಮುಖ್ಯಮಂತ್ರಿಗಳಿಗೆ ವಿವರಿಸಿದರು. ಇದನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಬೇಕು. ಉಪವಿಭಾಗಾಧಿಕಾರಿ ನ್ಯಾಯಾಲಯಗಳ ಕಾರ್ಯವೈಖರಿ ಸುಧಾರಿಸಬೇಕು, ವಿಲೇವಾರಿ ಆದರೆ ಮಾತ್ರ ಮೇಲ್ಮನವಿಗಳಿಗೆ ಬ್ರೇಕ್ ಬೀಳುತ್ತದೆ, ಈ ದಿಕ್ಕಲ್ಲಿ ಹೆಚ್ಚಿನ ಗಮನ ಹರಿಸಿ, ಈ ಬಗ್ಗೆ ಉಪ ವಿಭಾಗಾಧಿಕಾರಿಗಳಿಗೆ ಕೊನೆಯ ಎಚ್ಚರಿಕೆ ಕೊಡಿ ಎಂದು ಸಿಎಂ ಸೂಚಿಸಿದರು.

ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ 9947 ಒಂದು ವರ್ಷಕ್ಕೂ ಅಧಿಕ ಅವಧಿಯಿಂದ ಬಾಕಿಯಿತ್ತು, ಈಗ ಇದರ ಪ್ರಮಾಣ ಕೇವಲ 6 ಸಾವಿರಕ್ಕೆ ಇಳಿದಿದೆ, ಬೆಂಗಳೂರು ವ್ಯಾಪ್ತಿಯಲ್ಲಿ ಪ್ರಕರಣಗಳ ತ್ವರಿತ ವಿಲೇವಾರಿಗೆ 18 ವಿಶೇಷ ಉಪವಿಭಾಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ, ಜಮೀನು ಖಾತೆಗೆ ಆಧಾರ್ ಸೀಡಿಂಗ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 2.22 ಕೋಟಿ ಖಾತೆಗಳಿಗೆ ಆಧಾರ ಸೀಡಿಂಗ್ ಮಾಡಲಾಗಿದ್ದು, ಇದರಿಂದ ನಕಲಿ ದಾಖಲೆ ಸೃಷ್ಟಿಸುವುದನ್ನು ತಡೆಯಲು ಸಾಧ್ಯವಾಗಿದೆ, ಭೂ ಪರಿವರ್ತನೆಯಾಗದೆ ವಾಣಿಜ್ಯ ಉದ್ದೇಶಗಳಿಗೆ ಜಮೀನು ಬಳಕೆ ಪ್ರಕರಣಗಳನ್ನು ಪತ್ತೆ ಹಚ್ಚಲು ಇದರಿಂದ ಸಾಧ್ಯವಾಗಿದೆ, ಅನಧಿಕೃತ ಬಡಾವಣೆಗಳಿಗೆ ಖಾತಾ ನೀಡುವುದನ್ನು ಸ್ಥಗಿತಗೊಳಿಸಲು ಈಗಾಗಲೇ ಸೂಚನೆ ನೀಡಿದ್ದೇವೆ, ಒಂದು ಅವಧಿಗೆ ಬಿ ಖಾತಾ ನೀಡುವ ಪ್ರಕ್ರಿಯೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ, ಇನ್ನು ಮುಂದೆ ಅನಧಿಕೃತ ಬಡಾವಣೆಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕು ಎನ್ನುವ ಸೂಚನೆ ನೀಡಿದರು

ರಾಜ್ಯದಲ್ಲಿ ಹಲವು ಪ್ರಕರಣಗಳಲ್ಲಿ ಜಮೀನುಗಳ ಖಾತೆ ಇನ್ನೂ ನಿಧನ ಹೊಂದಿದವರ ಹೆಸರಿನಲ್ಲಿಯೇ ಇದೆ, ಪೌತಿ ಖಾತೆ ಅಭಿಯಾನದ ಮೂಲಕ ಮಾಲಿಕರ ಹೆಸರಿಗೆ ಜಮೀನು ಮಾಡುವ ನೋಂದಣಿ ಮಾಡುವ ಕಾರ್ಯವನ್ನು ತ್ವರಿತಗೊಳಿಸಬೇಕು, ಭೂ ದಾಖಲೆಗಳ ರಕ್ಷಣೆಗೆ, ದಾಖಲೆ ತಿದ್ದಲು ಅವಕಾಶ ಆಗದಂತೆ "ಭೂ ಸುರಕ್ಷಾ" ಪರಿಣಾಮಕಾರಿಯಾಗಿ ಜಾರಿಯಾಗಲಿ ಎನ್ನು ಸೂಚನೆಯನ್ನು ಸಿಎಂ ನೀಡಿದರು.

ಈಗಾಗಲೇ 8 ಕೋಟಿ ಮೂಲ ದಾಖಲೆಗಳ ಕಂಪ್ಯೂಟರೀಕರಣವಾಗಿದೆ, ಖದೀಮರು ತಿದ್ದಲು ಅವಕಾಶ ಆಗದಂತೆ ದಾಖಲೆಗಳಿಗೆ ಡಿಜಿಟಲ್ ಭದ್ರತೆ ಒದಗಿಸಲಾಗಿದೆ, ಎಲ್ಲಾ 31 ಜಿಲ್ಲೆಗಳಲ್ಲಿ ದಾಖಲೆಗಳ ಕಂಪ್ಯೂಟರೀಕರಣ ಕಾರ್ಯ ನಡೆಯುತ್ತಿದೆ, ನಮ್ಮ ಸರ್ಕಾರ ಬಂದಾಗ 10 ಸಾವಿರಕ್ಕೂ ಮಿಕ್ಕಿ ಅವಧಿ ಮೀರಿದ ಪ್ರಕರಣಗಳು ಇದ್ದವು. ಈಗ ಕೇವಲ 369 ಪ್ರಕರಣಗಳು ಮಾತ್ರ ತಹಶೀಲ್ದಾರ್ ನ್ಯಾಯಾಲಯಗಳಲ್ಲಿವೆ ಎಂದು ಸಿಎಂ ಗೆ ದಾಖಲೆ ಸಮೇತ ಸಚಿವ ಕೃಷ್ಣಬೈರೇಗೌಡ ವಿವರಿಸಿದರು.

ತಂತ್ರಾಂಶವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕಂದಾಯ ವ್ಯವಸ್ಥೆಯಲ್ಲಿ ಸುಧಾರಣಾ ಕಾರ್ಯ ಕೈಗೊಳ್ಳಲಾಗಿದೆ, ನಕ್ಷಾ ಯೋಜನೆ ಮೂಲಕ ನಗರ ಪ್ರದೇಶದಲ್ಲಿ ಡ್ರೋನ್ ಸರ್ವೆ ಮೂಲಕ ಪ್ರಾಪರ್ಟಿ ಕಾರ್ಡು ನೀಡುತ್ತಿದ್ದೇವೆ, 21 ಜಿಲ್ಲೆಗಳಲ್ಲಿ ಡ್ರೋನ್ ಮೂಲಕ ಸರ್ವೇ ಕಾರ್ಯವನ್ನು ಕೈಗೊಳ್ಳಲಾಗಿದೆ, ಉಳಿದ ಜಿಲ್ಲೆಗಳಲ್ಲೂ ಡ್ರೋನ್ ಸರ್ವೆ ಆರಂಭಿಸಬೇಕು ಎಂದು ಸಿಎಂ ಹೇಳಿದರು.

ಹಲವು ವರ್ಷಗಳಿಂದ ಸರ್ಕಾರಿ ಜಮೀನು ಸಾಗುವಳಿ ಮಾಡುತ್ತಿರುವ ರೈತರಿಂದ ಸದರಿ ಜಮೀನು ಸ್ವಾಧೀನಪಡಿಸುವ ಸಂದರ್ಭದಲ್ಲಿ ಎಕ್ಸ್ ಗ್ರೇಷಿಯಾ ನೀಡುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಸೂಚಿಸಿದರು.

## ಸಿಎಂ ತೀವ್ರ ಸಂತಾಪ

ಅವರೆಲ್ಲರನ್ನು ಕ್ಷೇಮವಾಗಿ ರಾಜ್ಯಕ್ಕೆ ಕರೆತರಲು ಅಧಿಕಾರಿಗಳನ್ನು ನಿಯೋಜಿಸಿದ್ದು, ನಮ್ಮವರ ರಕ್ಷಣೆಗೆ ಸರ್ಕಾರ ಎಲ್ಲ ರೀತಿಯ ಪ್ರಯತ್ನವನ್ನು ನಡೆಸುತ್ತಿದೆ. ಕುಂಭಮೇಳದಲ್ಲಿ ಪಾಲ್ಗೊಂಡಿರುವ ಕನ್ನಡಿಗರು ಸ್ವಲ್ಪ ಜಾಗರೂಕತೆಯಿಂದಿರಿ ಎಂದು ಸಿಎಂ ಸಿದ್ದರಾಮಯ್ಯ ಕಿವಿಮಾತು ಹೇಳಿದ್ದಾರೆ.

## ಮಂಡ್ಯದಲ್ಲಿ ನೂತನ ಕೃಷಿ, ತೋಟಗಾರಿಕೆ ವಿವಿ ಸ್ಥಾಪನೆಗೆ ಸರ್ಕಾರದ ಅಧಿಕೃತ ಅನುಮೋದನೆ

**ಮಂಡ್ಯ:** ವಿ.ಸಿ ಫಾರಂನಲ್ಲಿ ನೂತನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ (ಸಮಗ್ರ) ಸ್ಥಾಪನೆಗೆ ರಾಜ್ಯ ಸರ್ಕಾರ ತಾತ್ವಿಕ ಅನುಮೋದನೆ ನೀಡಿ ಆದೇಶ ಹೊರಡಿಸಿದ್ದು, ಮಂಡ್ಯ ಜಿಲ್ಲೆ ಸೇರಿದಂತೆ ಮೈಸೂರು ವಿಭಾಗದ ಜನರ ಬಹುದಿನಗಳ ಕನಸು ಈಡೇರಿದೆ.

2024-25ನೇ ಸಾಲಿನ ಬಜೆಟ್ ಭಾಷಣದ ಕಂಡಿಕೆ-42ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ಮಂಡ್ಯ ಕೃಷಿ ವಿಶ್ವವಿದ್ಯಾಲಯ ಸ್ಥಾಪನೆಯ ಸಾಧ್ಯತೆ ಕುರಿತು ಪರಿಶೀಲನೆಗೆ ಸಮಿತಿ ರಚಿಸುವುದಾಗಿ ಘೋಷಣೆ ಮಾಡಿದ ಒಂದು ವರ್ಷದೊಳಗೆ ವಿವಿ ಪ್ರಾರಂಭಕ್ಕೆ ಆದೇಶ ಹೊರಬಿದ್ದಿದೆ. ಕೃಷಿ ಸಚಿವರ ವಿಶೇಷ ಕಾಳಜಿ, ನಿರಂತರ ಪರಿಶ್ರಮ ಶೀಘ್ರವೇ ಫಲ ನೀಡಿದೆ.

ಇದಕ್ಕಾಗಿ ಚಲುವರಾಯಸ್ವಾಮಿರವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಸಂಪುಟದ ಸಹೋದ್ಯೋಗಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ನೂತನ ಬಜೆಟ್ ಘೋಷಣೆಯಂತೆ ಬೆಂಗಳೂರು ಕೃಷಿ ವಿ.ವಿಯ ವಿಶ್ರಾಂತಿ ಕುಲಪತಿ ಡಾ॥ರಾಜೇಂದ್ರಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿ ರಚಿಸಲಾಗಿತ್ತು. ಈ ತಂಡವು ಹಲವು ಭಾರಿ ಸ್ಥಳ ಪರಿಶೀಲಿಸಿ, ಸಭೆಗಳನ್ನು ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು.ಈ ಸಮಿತಿಯು ನೂತನ ಕೃಷಿ ವಿಶ್ವವಿದ್ಯಾಲಯಕ್ಕೆ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಮೈಸೂರು ಜಿಲ್ಲೆಯ ಸಂಸ್ಥೆಗಳಾದ : ಸಾವಯವ ಕೃಷಿ ಸಂಶೋಧನಾ ಕೇಂದ್ರ, ನಾಗೇನಹಳ್ಳಿ, ಮೈಸೂರು, ವಿಸ್ತರಣಾ ಶಿಕ್ಷಣ ಘಟಕ, ನಾಗೇನಹಳ್ಳಿ, ಮೈಸೂರು



ಹಾಸನ ಜಿಲ್ಲೆಯ ಸಂಸ್ಥೆಗಳಾದ; ಕಾರೆಕೆರೆಯ ಕೃಷಿ ಮಹಾವಿದ್ಯಾಲಯ, ಃ.ಖಿಛಿ (ಊಖಿಛಿ). ಕೃಷಿ ಃ.ಖಿಜಛಿ (ಏಂ ಖಿಜಛಿಟಿಂಟರಥಿ), ಃ.ಖಿಜಛಿ (ಈಂಂಜ ಖಿಜಛಿಟಿಂಟರಥಿ), ಕಂದಲಿ ಕೃಷಿ ವಿಜ್ಞಾನ ಕೇಂದ್ರ (ಏಗಿಏ), ಕೃಷಿ ಸಂಶೋಧನಾ ಕೇಂದ್ರ, ಗುಂಜೇವು, ಹೊಳೆನರಸೀಪುರ ತಾಲ್ಲೂಕು, ಕೃಷಿ ಸಂಶೋಧನಾ ಕೇಂದ್ರ, ಮಡೆನೂರು (ಹಾಸನ), ಜೈವಿಕ ಇಂಧನ ಸಂಶೋಧನಾ ಕೇಂದ್ರ, ಹಾಸನ

ಚಾಮರಾಜನಗರ ಜಿಲ್ಲೆಯ ಸಂಸ್ಥೆಗಳು: ಕೃಷಿ ಮಹಾವಿದ್ಯಾಲಯ, ಚಾಮರಾಜನಗರ (ಹರದನಹಳ್ಳಿ), ಕೃಷಿ ವಿಜ್ಞಾನ ಕೇಂದ್ರ(ಕೆವಿಕೆ), ಚಾಮರಾಜನಗರ, ಂಖಅಖಕ (ಹತ್ತಿ), ಂಖಅಖಕ (ಜೋಳ), ಜೈವಿಕ ಇಂಧನ ಮಾಹಿತಿ ಕೇಂದ್ರ, ಚಾಮರಾಜನಗರ

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ: ತೋಟಗಾರಿಕೆ ಕಾಲೇಜು, ಮೈಸೂರು, ಊಖಇಅ, ಮೈಸೂರು, ಂಖಅಖಕ (ತಾಳೆಗಳು), ಅರಸೀಕೆರೆ, ತೋಟಗಾರಿಕೆ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ(ಊಖಇಅ), ಅರಸೀಕೆರೆ, ಊಖಇಅ, ಸೋಮನಹಳ್ಳಿ ಕಾವಲ್ (ಹಾಸನ), ಂಖಅಖಕ (ಆಲೂಗಡ್ಡೆ), ಹಾಸನ

ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕೊಡಗು ಜಿಲ್ಲೆಯ ಸಂಸ್ಥೆಗಳಾದ: ಅರಣ್ಯ ಮಹಾವಿದ್ಯಾಲಯ ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಪೊನ್ನಂಪೇಟೆ, ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಮಡಿಕೇರಿ, ವಿಸ್ತರಣಾ ಶಿಕ್ಷಣ ಘಟಕ, ಮಡಿಕೇರಿ ಕೇಂದ್ರಗಳನ್ನು ಮಂಡ್ಯ ವಿ.ಸಿ ಫಾರಂ ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿಸುವಂತೆ ವರದಿಯಲ್ಲಿ ಶಿಫಾರಸ್ಸು ಮಾಡಲಾಗಿತ್ತು.

ಸಮಿತಿಯ ಅಭಿಪ್ರಾಯವನ್ನು ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮುಂದಿಟ್ಟು ಅನುಮೋದನೆ ಪಡೆದ ನಂತರ ಸರ್ಕಾರ ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಕಾಲುವ ಫಾರಂನಲ್ಲಿ ನೂತನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯು (ಸಮಗ್ರ) ಸ್ಥಾಪಿಸಲು ತಾತ್ವಿಕ ಅನುಮೋದನೆ ನೀಡಿದೆ.

ಆರ್ಥಿಕ ಇಲಾಖೆ ಕೂಡ ಮಂಡ್ಯದ ವಿಸಿ ಫಾರಂನಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಬಳಸಿಕೊಂಡು ಮಂಡ್ಯ ಕೃಷಿ ವಿಶ್ವವಿದ್ಯಾಲಯ ಪ್ರಾರಂಭಿಸಲು ತಾತ್ವಿಕ ಅನುಮತಿ ನೀಡಿ ವಿಶ್ವವಿದ್ಯಾಲಯಕ್ಕೆ ಹಂತ ಹಂತವಾಗಿ ಅವಶ್ಯಕವಿರುವ ಮೂಲಭೂತ ಸೌಕರ್ಯಗಳಿಗೆ ಮಾತ್ರ ವಿಸ್ತೃತ ಅಂದಾಜು ಹಾಗೂ ಆವರ್ತಕ ವೆಚ್ಚದ ಅಂದಾಜನ್ನು ಸಲ್ಲಿಸಲು ತಿಳಿಸಿದೆ.

ಈ ಎಲ್ಲಾ ಅಂಶಗಳ ಆಧಾರದ ಮೇರೆಗೆ ಸರ್ಕಾರವು ಮಂಡ್ಯ ಜಿಲ್ಲೆಯ ವಿಸಿ ಫಾರಂನಲ್ಲಿ ನೂತನ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ (ಸಮಗ್ರ) ಸ್ಥಾಪಿಸಲು ಅನುಮೋದನೆ ನೀಡಿದೆ. ಷರತ್ತು ನಿಬಂಧನೆಗಳು ಹಾಗೂ ಆಡಳಿತಾತ್ಮಕ ಅನುಮೋದನೆಗಳನ್ನು ಮುಂದಿನ ಆದೇಶದಲ್ಲಿ ಹೊರಡಿಸಲಾಗುವುದೆಂದು ತಿಳಿಸಲಾಗಿದೆ.

ಶೀಘ್ರವೇ ವಿಶೇಷಾಧಿಕಾರಿಗಳನ್ನು ನೇಮಿಸಿ ಪ್ರಸಕ್ತ ಸಾಲಿನಲ್ಲಿಯೇ ವಿ.ವಿ ಕಾರ್ಯಾರಂಭ ಮಾಡಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು ಎಂದು ಕೃಷಿ ಸಚಿವರಾದ ಚಲುವರಾಯಸ್ವಾಮಿ ತಿಳಿಸಿದ್ದಾರೆ.

## ರೇವಂತ್ ರೆಡ್ಡಿ ವಿರುದ್ಧ ಬಿಜೆಪಿ ಆಕ್ರೋಶ

**ನವದೆಹಲಿ:** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಮಹಮದ್ ಘಜ್ನಿ ಅವರಿಗೆ ಹೋಲಿಕೆ ಮಾಡಿರುವ ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಅವರ ವಿರುದ್ಧ ಬಿಜೆಪಿ ತಿರುಗಿಬಿದ್ದಿದೆ.

ನೀಡಿರುವ ಹೇಳಕೆ ವಾಪಸ್ ಪಡೆದು ಮೋದಿ ಅವರ ಕ್ಷಮೆ ಕೇಳಬೇಕು ಇಲ್ಲದಿದ್ದರೆ ಪರಿಣಾಮ ನೆಟ್ಟಗಿರಲ್ಲ ಎಂದು ಬಿಜೆಪಿ ನಾಯಕರುಗಳು ಒತ್ತಾಯಿಸಿದ್ದಾರೆ. ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಆಯೋಜಿಸಿದ್ದ ರ್ಯಾಲಿಯಲ್ಲಿ ರೆಡ್ಡಿ ಅವರು, ಪ್ರಧಾನಿ ನರೇಂದ್ರ ಮೋದಿಯನ್ನು ಮಧ್ಯಕಾಲೀನ ಯುಗದ ಟರ್ಕಿ ದಾಳಿಕೋರ ಮಹಮದ್ ಘಜ್ನಿ ಅವರಿಗೆ ಹೋಲಿಕೆ ಮಾಡಿ ಮಾತನಾಡಿದ್ದರು. ಪ್ರಧಾನಿ ಮೋದಿ ಸಂವಿಧಾನವನ್ನು ಬದಲಾಯಿಸಲು ಮತ್ತು ಉದ್ಯೋಗ ಮೀಸಲಾತಿಯನ್ನು ರದ್ದುಗೊಳಿಸಲು ಪ್ರಯತ್ನಿಸುವ ಮೂಲಕ ಘಜ್ನಿ ನೀತಿ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಘಜ್ನಿ ಭಾರತವನ್ನು ಲೂಟಿ ಮಾಡಲು ಮತ್ತು ವಶಪಡಿಸಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನಿಸಿದ್ದನ್ನು ನಾವು ಇತಿಹಾಸದಲ್ಲಿ ಓದಿದ್ದೇವೆ. ಈ ಹೇಳಿಕೆಯು ಬಿಜೆಪಿಯಿಂದ ವ್ಯಾಪಕ ಖಂಡನೆಗೆ ಗುರಿಯಾಯಿತು, ಹಲವಾರು ನಾಯಕರು ಮತ್ತು ಸಚಿವರು ಇದನ್ನು ನಾಚಿಕೆಗೇಡಿನ ವಿಷಯ ಎಂದು ಕರೆದರು. ಭಾರತ ಮಾತ್ರವಲ್ಲದೆ ವಿಶ್ವದ ಅತ್ಯಂತ ಜನಪ್ರಿಯ ನಾಯಕ, ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿ ಜಿ ಅವರನ್ನು ವಿದೇಶಿ ದರೋಡೆಕೋರ ಮತ್ತು ಆಕ್ರಮಣಕಾರ ಘಜ್ನಿ ಅವರಿಗೆ ಹೋಲಿಸುವ ಮೂಲಕ ಕಾಂಗ್ರೆಸ್ ನಾಯಕ ರೇವಂತ್ ರೆಡ್ಡಿ ತಮ ದ್ವೇಷದ ಮನಸ್ಥಿತಿಯನ್ನು ತೋರಿಸಿದ್ದಾರೆ ಎಂದು ಟ್ವೀಟ್ ಮಾಡಿದ್ದಾರೆ.

## ಪೊಲೀಸರೊಂದಿಗೆ ಅನುಚಿತ ವರ್ತನೆ: ನಾಲ್ವರು ಯುವಕರು

**ತುಮಕೂರು:** ದ್ವಿಚಕ್ರ ವಾಹನದಲ್ಲಿ ನಾಲ್ವರು ಪ್ರಯಾಣಿಸುತ್ತಿದ್ದುದನ್ನು ಕಂಡು ದಂಡ ವಿಧಿಸಲು ತೆರಳಿದ್ದ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ನಾಲ್ವರು ಯುವಕರನ್ನು ಬಂಧಿಸಲಾಗಿದೆ.

ತುಮಕೂರು ನಗರದ ರಾಣಿ ಚೆನ್ನಮ್ಮ ಸರ್ಕಲ್ ಸಮೀಪದ ರಿಂಗ್ ರಸ್ತೆಯಲ್ಲಿ ಜನವರಿ 27ರಂದು ಸಂಜೆ 7.30ರ ಹೊತ್ತಿಗೆ ಘಟನೆ ನಡೆದಿದೆ. ತುಮಕೂರು ನಗರದ ಮೊಹಮದ್ ಇಸ್ಮಾಯಿಲ್, ಮೊಹಮದ್ ಅಬ್ಬಾಸ್, ಅದ್ನಾನ್ ಅಹಮದ್, ಮೊಹಮದ್ ಅಲೀ ಬಂಧಿತರು.

ತಿಲಕ್ ಪಾರ್ಕ್ ಪೊಲೀಸ್ ಠಾಣೆ ಮಹಿಳಾ ಪಿಎಸ್‌ಐ ಟಿ.ಎಸ್.ಚಂದ್ರಕಲಾ ಮತ್ತು ಎಎಸ್‌ಐ ಮೋಹನ್ ಕುಮಾರ್ ಕೆ. ಹಾಗೂ ಸಿಬ್ಬಂದಿ ತಮ್ಮರಾಯ ಮಾಡಕರಿ ರಾಣಿ ಚೆನ್ನಮ್ಮ ಸರ್ಕಲ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ವೇಳೆ ಸರ್ವೀಸ್ ರಸ್ತೆಯಿಂದ ರಿಂಗ್ ರಸ್ತೆಗೆ ಏಂ-06-ಇಗಿ-3695 ನಂಬರ್‌ನ ಹೋಂಡಾ ಅಕ್ಟಿವಾ ಸ್ಕೂಟರ್ ಒಂದರಲ್ಲಿ ನಾಲ್ವರು ಯುವಕರು ಕುಳಿತುಕೊಂಡು, ಯಾವುದೇ ಹೆಲ್ಮೆಟ್ ಧರಿಸದೆ, ತಪ್ಪಾದ ರೂಟ್‌ನಲ್ಲಿ ಬರುತ್ತಿದ್ದರು.

ರಸ್ತೆ ಸಂಚಾರ ನಿಯಮಗಳನ್ನು ಉಲ್ಲಂಘಿಸಿದವರನ್ನು ತಡೆದು ನಿಲ್ಲಿಸಿ ದಂಡ ಪಾವತಿಸುವಂತೆ ಸೂಚಿಸಿದಾಗ, ಯುವಕರು ಕರ್ತವ್ಯದಲ್ಲಿದ್ದ ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ಬೈದು, ಬೆದರಿಕೆ ಹಾಕಿದ್ದರು. ಪೊಲೀಸರನ್ನು ತಳ್ಳಿ ಕೆಳಗೆ ಬೀಳಿಸಿ ದುರ್ನಡತೆ ತೋರಿ ಮತ್ತೆ ತಮ್ಮ ಮೊಬೈಲ್ ಫೋನ್‌ಗಳಲ್ಲಿ ವಿಡಿಯೋ ಮಾಡಿ ಸೋಶಿಯಲ್ ಮೀಡಿಯಾಗಳಲ್ಲಿ ತಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಸುಳ್ಳು ಮಾಹಿತಿ ವೈರಲ್ ಮಾಡಿದ್ದರು. ವಿನಾಕಾರಣ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸುವ ಕಿಡಿಗೇಡಿಗಳ ವಿರುದ್ಧ ಕಾನೂನು ರೀತಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ತುಮಕೂರು ಜಿಲ್ಲಾ ಪೊಲೀಸ್ ಅಧೀಕ್ಷಕರು ಎಚ್ಚರಿಕೆ ನೀಡಿದ್ದಾರೆ.



ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿಯವರು ಇಂದು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಸುತ್ತೂರು ಮಹಾಸಂಸ್ಥಾನ ಮಠದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಈ ಸಂದರ್ಭದಲ್ಲಿ ಸುತ್ತೂರು ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಮಾಜಿ ಸಚಿವರಾದ ಸಿ.ಸಿ.ಪಾಟೀಲ್, ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಹಾಗೂ ಮತ್ತಿತರರು ಹಾಜರಿದ್ದರು.

## 100ನೇ GSLV F15 ಉಪಗ್ರಹ ಉಡಾವಣೆ ಯಶಸ್ವಿ

ಎನ್‌ವಿಎಸ್ ಉಪಗ್ರಹ)ವನ್ನು ನಭಕ್ಕೆ ಹೊತ್ತೊಯ್ದಿದೆ. ಈ ಎನ್‌ವಿಎಸ್ ಸ್ಯಾಟಲೈಟ್ ಭಾರತದ ನ್ಯಾವಿಗೇಷನ್(ಸ್ವದೇಶಿ ಜಿಪಿಎಸ್) ಉಪಗ್ರಹಗಳ ಜಾಲದ ಎರಡನೇ ತಲೆಮಾರಿನ ಉಪಗ್ರಹವಾಗಿದೆ. ಇದು ಭಾರತೀಯ ಉಪಖಂಡ(ಜತೆಗೆ ಅದರಾಚೆಗಿನ 1500 ಕಿ.ಮೀ. ದೂರದವರೆಗೆ)ದ ಬಳಕೆದಾರರಿಗೆ ನಿಖರ ಸಮಯ, ಸ್ಥಾನ ಮತ್ತು ವೇಗವನ್ನು ನೀಡುವ ಗುರಿ ಹೊಂದಿದೆ. ಈ ಹಿಂದೆ ಜಿಎಸ್‌ಎಲ್‌ವಿ-ಎಫ್12 ರಾಕೆಟ್ ಎನ್‌ವಿಎಸ್-01 ಉಪಗ್ರಹವನ್ನು ಮೇ 29, 2023ರಂದು ಯಶಸ್ವಿಯಾಗಿ ಗಗನಕ್ಕೆ ಕೂರಿಸಿತ್ತು. ಇದೀಗ 50.9 ಮೀಟರ್ ಎತ್ತರದ ಜಿಎಸ್‌ಎಲ್‌ವಿ-ಎಫ್15 ರಾಕೆಟ್ ಎರಡನೇ ತಲೆಮಾರಿನ ಎನ್‌ವಿಎಸ್ ಉಪಗ್ರಹದೊಂದಿಗೆ ಯಶಸ್ವಿಯಾಗಿ ಉಡಾವಣೆ ಮಾಡಿದೆ.

ಈ ಎನ್‌ವಿಎಸ್-02 ಉಪಗ್ರಹವನ್ನು ಯು.ಆರ್.ಸ್ಯಾಟಲೈಟ್ ಸೆಂಟರ್ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಿದೆ. ಈ ಉಪಗ್ರಹವು 2,250 ಕೆ.ಜಿ.ಭಾರವಿದ್ದು, ಎಲ್1, ಎಲ್5 ನ್ಯಾವಿಗೇಷನ್ ಪೇ ಲೋಡ್ ಮತ್ತು ಸಿ ಬ್ಯಾಂಡ್ ಜೊತೆಗೆ ಹೆಚ್ಚುವರಿಯಾಗಿ ಎಸ್ ಬ್ಯಾಂಡ್‌ಗಳನ್ನು ಹೊಂದಿದೆ. ಈ ಉಪಗ್ರಹವು

ಭೂಮಿ, ವಾಯು ಮತ್ತು ಸಾಗರ ಸಂಚಾರ, ಕೃಷಿ, ನೌಕೆಗಳ ನಿರ್ವಹಣೆ, ಮೊಬೈಲ್ ಲೊಕೇಷನ್ ಆಧಾರಿತ ಸೇವೆಗಳು, ಸ್ಯಾಟಲೈಟ್‌ಗಳ ಕಕ್ಷೆಯ ನಿರ್ಧಾರ, ಇಂಟರ್ನೆಟ್ ಆಫ್ ಥಿಂಗ್ಸ್ ಆಧಾರಿತ ಅಪ್ಲಿಕೇಷನ್‌ಗಳು, ತುರ್ತು ಮತ್ತು ಸಮಯಾಧಾರಿತ ಸೇವೆಗಳಿಗೆ ನೆರವು ನೀಡಲಿದೆ.

ಭಾರತೀಯ ಪ್ರಾದೇಶಿಕ ಸಂಚರಣೆ ಉಪಗ್ರಹ ವ್ಯವಸ್ಥೆಯ ಉಪಗ್ರಹ ತಾರಾಮಂಡಲವು ಒಟ್ಟು 7 ಉಪಗ್ರಹಗಳನ್ನು ಹೊಂದಿರುತ್ತದೆ. 100ನೇ ಉಡಾವಣೆಯೊಂದಿಗೆ, ಭಾರತವು ಈಗ 7 ರಲ್ಲಿ 5 ಅನ್ನು ಬಾಹ್ಯಾಕಾಶದಲ್ಲಿ ಹೊಂದಿದೆ. ನ್ಯಾವಿಗೇಷನ್ ವಿಥ್ ಇಂಡಿಯನ್ ಕಾನ್ಸ್ಟೆಲೇಷನ್ ಭಾರತದ ಸ್ವತಂತ್ರ ಪ್ರಾದೇಶಿಕ ಸಂಚರಣೆ ಉಪಗ್ರಹ ವ್ಯವಸ್ಥೆಯಾಗಿದ್ದು, ಭಾರತದಲ್ಲಿ ಮತ್ತು ಭಾರತೀಯ ಭೂಪ್ರದೇಶದಿಂದ ಸುಮಾರು 1500 ಕಿ.ಮೀ.ವರೆಗೆ ವಿಸ್ತರಿಸಿರುವ ಪ್ರದೇಶದಲ್ಲಿ ಬಳಕೆದಾರರಿಗೆ ನಿಖರವಾದ ಸ್ಥಾನ, ವೇಗ ಮತ್ತು ಸಮಯ (ಕಗಿಖ) ಸೇವೆಯನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ.

## ಜೆಪಿಸಿ ಸಭೆ ಮುಕ್ತಾಯ: ಪಾಸ್

ಪ್ರಸ್ತಾಪಿಸಿದ 14 ತಿದ್ದುಪಡಿಗಳೊಂದಿಗೆ ವಕ್ಫ್ ತಿದ್ದುಪಡಿ ಮಸೂದೆಯನ್ನು ಜೆಪಿಸಿ ಸೋಮವಾರ ಅಂಗೀಕರಿಸಿತ್ತು. ವಿರೋಧ ಪಕ್ಷದ ಸಂಸದರು 44 ಬದಲಾವಣೆಗಳನ್ನು ಪ್ರಸ್ತಾಪಿಸಿದ್ದರು. ಆದರೆ, ಅವುಗಳನ್ನು ತಿರಸ್ಕರಿಸಲಾಯಿತು. ಇದು ರಾಜಕೀಯ ಪಕ್ಷಗಳ ಕೋಲಾಹಲಕ್ಕೆ ಕಾರಣವಾಗಿತ್ತು. ಸದ್ಯ ಪ್ರಸ್ತಾವಿತ ಬದಲಾವಣೆಗಳ ಮೇಲೆ ಬುಧವಾರ ಮತದಾನ ನಡೆಯಿತು.

ದೇಶಾದ್ಯಂತ ವಕ್ಫ್ ಮಂಡಳಿಗಳನ್ನು ನಿರ್ವಹಿಸುವ ವಿಧಾನದಲ್ಲಿ ಸುಧಾರಣೆಗಳನ್ನು ತರಲು ಉದ್ದೇಶಿಸಲಾದ ವಕ್ಫ್ ತಿದ್ದುಪಡಿ ಮಸೂದೆಯನ್ನು ಸೋಮವಾರ ಜೆಪಿಸಿ 16:10 ಸದಸ್ಯರ ಮತಗಳ ಅಂತರದಿಂದ (ಎನ್ಡಿಎಯಿಂದ 16 ಮತ್ತು ವಿರೋಧ ಪಕ್ಷಗಳಿಂದ 10) ಅಂಗೀಕರಿಸಿತ್ತು.

ಪ್ರಸ್ತಾವಿತ ಮಸೂದೆಯಲ್ಲಿನ ಒಂದು ತಿದ್ದುಪಡಿಯು ಆಸ್ತಿಯು ವಕ್ಫ್ ಆಸ್ತಿಯೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸಲು ಅಧಿಕಾರಿಯೊಬ್ಬರನ್ನು ನೇಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುವ ಗುರಿ ಹೊಂದಿದೆ. ಹಿಂದಿನ ಕಾನೂನಿನ ಪ್ರಕಾರ ಈ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. 1995ರ ವಕ್ಫ್ ಕಾಯ್ದೆಯಲ್ಲಿ ಆಸ್ತಿಯ ಮಾಲೀಕತ್ವ ನಿರ್ಧರಿಸುವ ಅಧಿಕಾರವನ್ನು ಸರ್ವೇ ಆಯುಕ್ತರು ಮತ್ತು ಹೆಚ್ಚುವರಿ ಆಯುಕ್ತರಿಗೆ ನೀಡಲಾಗಿತ್ತು.

ಪ್ರಸ್ತುತ ಕೇಂದ್ರ ವಕ್ಫ್ ಮಂಡಳಿ ಮತ್ತು ರಾಜ್ಯ ವಕ್ಫ್ ಮಂಡಳಿಗಳಲ್ಲಿ ಇಬ್ಬರು ಮುಸ್ಲಿಮೇತರ ಸದಸ್ಯರನ್ನು ಸೇರಿಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆಯನ್ನೂ ಸಮಿತಿ ಅನುಮೋದಿಸಿದೆ.

ತಿದ್ದುಪಡಿ ಮಸೂದೆಯಲ್ಲಿ 'ಕಡ್ಡಾಯ' ಎಂಬ ಪದವನ್ನು ಕೈಬಿಡಲಾಗಿದ್ದು, ಓರ್ವ ವಿದ್ವಾಂಸ ಸೇರಿದಂತೆ ಮಂಡಳಿಯ ಸದಸ್ಯರ ಸಂಖ್ಯೆಯನ್ನು ಮೂರಕ್ಕೆ ಹೆಚ್ಚಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ವರದಿಗಳ ಪ್ರಕಾರ, ವಕ್ಫ್ ಮಸೂದೆಯಲ್ಲಿ ಒಟ್ಟು 66 ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ. ಇದರಲ್ಲಿ ಆಡಳಿತಾರೂಢ ಬಿಜೆಪಿ ಸಂಸದರು 23 ಮತ್ತು ವಿರೋಧ ಪಕ್ಷದ ಸಂಸದರು 44 ಬದಲಾವಣೆಗಳನ್ನು ಪ್ರಸ್ತಾಪಿಸಿದ್ದರು.

## ಕಾಲ್ತುಳಿತ:

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಜೊತೆ ಮಾತುಕತೆ ನಡೆಸಿದ್ದು, ಶೀಘ್ರಗತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೂ ಕೂಡ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೊಂದಿಗೆ ಮಾತುಕತೆ ನಡೆಸಿದ್ದು, ಕೇಂದ್ರದಿಂದ ಸಂಪೂರ್ಣ ಬೆಂಬಲ ನೀಡುವುದಾಗಿ ಭರವಸೆ ನೀಡಿದ್ದಾರೆಂದು ತಿಳಿದುಬಂದಿದೆ.

ಘಟನೆ ಬೆನ್ನಲ್ಲೇ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಂಗಮಕ್ಕೆ ತೆರಳುವ ಬದಲು ಗಂಗಾನದಿ ಸಮೀಪದಲ್ಲಿರುವ ಘಾಟ್‌ನಲ್ಲಿ ಸ್ನಾನ ಮಾಡುವಂತೆ ಭಕ್ತರಿಗೆ ಮನವಿ ಮಾಡಿಕೊಂಡಿದ್ದಾರೆ. ಭಕ್ತರು ಆಡಳಿತ ಮಂಡಳಿಯ ಸೂಚನೆಗಳನ್ನು ಪಾಲಿಸಬೇಕು ಮತ್ತು ಕಾನೂವು ಸುವ್ಯವಸ್ಥೆ ಕಾಪಾಡಲು ಸಹಕರಿಸಬೇಕು, ಯಾವುದೇ ವದಂತಿಗಳಿಗೆ ಕಿವಿಕೊಡಬಾರದು ಎಂದು ಹೇಳಿದ್ದಾರೆ.

ಮಹಾಕುಂಭ ಮೇಳದಲ್ಲಿ ಕಾಲ್ತುಳಿತದಂತಹ ಪರಿಸ್ಥಿತಿ ಎದುರಾಗರುವ ಹಿನ್ನೆಲೆಯಲ್ಲಿ ಸಂಗಮದಲ್ಲೇ ಸ್ನಾನ ಮಾಡಬೇಕೆಂಬ ಮನೋಭಾವ ಬೇಡ. ಸ್ಥಳದಲ್ಲಿ ಭಾರೀ ಜನಸಂದಣಿ ಇದ್ದು, ಸುರಕ್ಷತಾ ದೃಷ್ಟಿಯಿಂದ ನಿಮ್ಮ ಶಿಬಿರಗಳಿಂದ ಹೊರ ಬರದಿರಿ ಎಂದು ಜಗದ್ಗುರು ಸ್ವಾಮಿ ರಾಮಭದ್ರಾಚಾರ್ಯ ಸ್ವಾಮೀಜಿಗಳು ಮನವಿ ಮಾಡಿದ್ದಾರೆ.

ವಿಶ್ವದ ಅತಿದೊಡ್ಡ ಧಾರ್ಮಿಕ ಉತ್ಸವ "ಮಹಾ ಕುಂಭಮೇಳ" ಉತ್ತರ ಪ್ರದೇಶದ ಪ್ರಯಾಗ್ರಾಜ್ ನಗರದಲ್ಲಿ ನಡೆಯುತ್ತಿದ್ದು, ಈ ಕುಂಭಮೇಳವು ಪ್ರತಿ 12 ವರ್ಷಗಳಿಗೊಮ್ಮೆ ನಡೆಯುವ ಮೇಳವಾಗಿದೆ. ಕುಂಭಮೇಳಕ್ಕೆ ಪ್ರಪಂಚದಾದ್ಯಂತದ ಸಾಧು-ಸಂತರು ಮತ್ತು ಭಕ್ತ ಸಾಗರವೇ ಹರಿದುಬರುತ್ತಿದೆ. ಪುಟ 2

10 ಸಾವಿರ ಎಕರೆಗಳಲ್ಲಿ ಕುಂಭಮೇಳಕ್ಕಾಗಿ ವಿಶೇಷ ವ್ಯವಸ್ಥೆಯನ್ನು ಮಾಡಿರುವ ಉತ್ತರ ಪ್ರದೇಶ ಸರ್ಕಾರ, ಧಾರ್ಮಿಕ ಆಚರಣೆಗೆ ಆಗಮಿಸುವ ಕೋಟ್ಯಂತರ ಭಕ್ತಾಧಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಹಲವು ಕ್ರಮಗಳು ಹಾಗೂ ವಿಶೇಷ ಸೌಲಭ್ಯಗಳನ್ನು ಒದಗಿಸಿದೆ.

## ಮೋದಿ ಸಂತಾಪ

ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಯಾಗ್ರಾಜ್ ಮಹಾಕುಂಭದಲ್ಲಿ ಸಂಭವಿಸಿದ ಕಾಲ್ತುಳಿತ ಅತ್ಯಂತ ನೋವು ತಂದಿದೆ. ದುರಂತದಲ್ಲಿ ತಮ್ಮ ಕುಟುಂಬ ಸದಸ್ಯರನ್ನು ಕಳೆದುಕೊಂಡ ಭಕ್ತರಿಗೆ ತೀವ್ರ ಸಂತಾಪಗಳನ್ನು ಸೂಚಿಸುತ್ತೇನೆಂದು ಹೇಳಿದ್ದಾರೆ. ಎಲ್ಲಾ ಗಾಯಾಳುಗಳು ಶೀಘ್ರ ಗುಣಮುಖರಾಗಲಿ. ಸ್ಥಳೀಯ ಆಡಳಿತವು ಸಂತ್ರಸ್ತರಿಗೆ ಸಾಧ್ಯವಿರುವ ಎಲ್ಲ ನೆರವನ್ನು ಒದಗಿಸುತ್ತಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೊಂದಿಗೂ ಮಾತನಾಡಿದ್ದೇನೆ. ರಾಜ್ಯ ಸರ್ಕಾರದೊಂದಿಗೆ ನಿರಂತರ ಸಂಪರ್ಕದಲ್ಲಿದ್ದೇನೆಂದು ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪೋಸ್ಟ್ ಮಾಡಿ, ಪ್ರಯಾಗ್ರಾಜ್ ಮಹಾಕುಂಭದಲ್ಲಿ ಕಾಲ್ತುಳಿತದ ಘಟನೆಯಿಂದ ಅತ್ಯಂತ ನೋವಾಗಿದೆ. ತಮ್ಮ ಕುಟುಂಬಸ್ಥರನ್ನು ಕಳೆದುಗೊಂಡ ಭಕ್ತಾರಿಗೆ ಸಂತಾಪ ಸೂಚಿಸುತ್ತೇನೆ. ಗಾಯಗೊಂಡವರು ಶೀಘ್ರಗತಿಯಲ್ಲಿ ಗುಣಮುಖರಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆಂದು ಹೇಳಿದ್ದಾರೆ.

## ಭೂಪರಿವರ್ತನೆ ಅನಗತ್ಯ ವಿಳಂಬ ಸಹಿಸಲ್ಲ: ಸಿಎಂ ಎಚ್ಚರಿಕೆ

ನ್ಯಾಯಾಲಯಗಳಲ್ಲಿ ಪ್ರಕರಣಗಳ ವಿಲೇವಾರಿ ವೇಗ ಕುಂಠಿತವಾಗಿ ರುವುದನ್ನು ತಾಂತ್ರಿಕ ಅಂಶಗಳ ಸಮೇತ ಸಚಿವರು ಮುಖ್ಯಮಂತ್ರಿಗಳಿಗೆ ವಿವರಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ಕಾಲಮಿತಿಯೊಳಗೆ ಪ್ರಕರಣಗಳನ್ನು ವಿಲೇವಾರಿ ಮಾಡಬೇಕು. ಉಪ ವಿಭಾಗಾಧಿಕಾರಿ ನ್ಯಾಯಾಲಯಗಳ ಕಾರ್ಯವೈಖರಿ ಇನ್ನಷ್ಟು ಸುಧಾರಿಸಬೇಕು. ಈ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಕೊನೆಯ ಎಚ್ಚರಿಕೆ ಕೊಡುವಂತೆ ಸಚಿವರಿಗೆ ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ 9,947 ಪ್ರಕರಣಗಳು ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ಇತ್ಯರ್ಥವಾಗದೇ ಬಾಕಿ ಉಳಿದಿತ್ತು. ಈಗ ಈ ಪ್ರಕರಣಗಳ ಪ್ರಮಾಣ 6 ಸಾವಿರಕ್ಕೆ ಇಳಿದಿದೆ. ಬೆಂಗಳೂರು ವ್ಯಾಪ್ತಿಯಲ್ಲಿ ಪ್ರಕರಣಗಳ ತ್ವರಿತ ವಿಲೇವಾರಿಗೆ 18 ವಿಶೇಷ ಉಪವಿಭಾಗಾಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದರು.

ಜಮೀನು ಖಾತೆಗೆ ಆಧಾರ್ ಸೀಡಿಂಗ್ ಮಾಡಲಾಗುತ್ತಿದೆ. ರಾಜ್ಯದಲ್ಲಿ ಇದುವರೆಗೆ 2.22 ಕೋಟಿ ಖಾತೆಗಳಿಗೆ ಆಧಾರ್ ಸೀಡಿಂಗ್ ಮಾಡಲಾಗಿದ್ದು, ಇದರಿಂದ ನಕಲಿ ದಾಖಲೆ ಸೃಷ್ಟಿಗೆ ಕಡಿವಾಣ ಹಾಕಲಾಗಿದೆ. ಭೂಪರಿವರ್ತನೆಯಾಗದೆ ವಾಣಿಜ್ಯ ಉದ್ದೇಶಗಳಿಗೆ ಜಮೀನು ಬಳಕೆ ಪ್ರಕರಣಗಳನ್ನು ಪತ್ತೆಹಚ್ಚಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಅನಧೀಕೃತ ಬಡಾವಣೆಗಳಿಗೆ ಖಾತಾ ನೀಡುವುದನ್ನು ಸ್ಥಗಿತಗೊಳಿಸುವಂತೆ ಈಗಾಗಲೇ ಸೂಚನೆ ನೀಡಿದ್ದೇನೆ. ಒಂದು ಅವಧಿಗೆ ಬಿ ಖಾತಾ ನೀಡುವ ಪ್ರಕ್ರಿಯೆ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಿ ಇನ್ನುಮುಂದು ಅನಧಿಕೃತ ಬಡಾವಣೆಗಳು ತಲೆ ಎತ್ತದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ರಾಜ್ಯದಲ್ಲಿ ಹಲವು ಪ್ರಕರಣಗಳಲ್ಲಿ ಜಮೀನುಗಳ ಖಾತೆ ನಿಧನ ಹೊಂದಿದವರ ಹೆಸರಲ್ಲೇ ಇದೆ. ಪೌತಿ ಖಾತೆ ಅಭಿಯಾನದ ಮೂಲಕ ಮಾಲೀಕರ ಹೆಸರಿಗೆ ಜಮೀನು ನೋಂದಣೆ ಮಾಡುವ ಕಾರ್ಯವನ್ನು ತ್ವರಿತಗೊಳಿಸಬೇಕು ಎಂದು ಸಿದ್ದರಾಮಯ್ಯ ಸೂಚಿಸಿದರು.

## ಕಳಪೆ ವ್ಯವಸ್ಥೆ ಕಾಲ್ತುಳಿತಕ್ಕೆ ಕಾರಣ

ಸಂಗಮ್ ಘಾಟ್ನಲ್ಲಿ ಹೆಚ್ಚಿನ ಭಕ್ತರ ಸಂಖ್ಯೆ ಇರುವ ಹಿನ್ನೆಲೆಯಲ್ಲಿ ಅಲ್ಲಿ ಸ್ನಾನ ಮಾಡದಂತೆ ಸಲಹೆ ನೀಡಿದ್ದಾರೆ.

ಇಂದು ಪ್ರಯಾಗ್ರಾಜ್ನಲ್ಲಿ 8ರಿಂದ 10 ಕೋಟಿ ಭಕ್ತರಿದ್ದಾರೆ. ಭಕ್ತರ ಸಂಖ್ಯೆ ಹೆಚ್ಚಿರುವ ಕಾರಣ ಸಂಗಮ್ ದಡದಲ್ಲಿ ಭಕ್ತರ ಚಲನೆ ಹೆಚ್ಚಿದ್ದು, ನಿರಂತರ ಒತ್ತಡ ಇರಲಿದೆ. ಕೆಲವರು ಅಖಾರ ಮಾರ್ಗ್ನ ಬ್ಯಾರಿಕೇಡ್ ಅನ್ನು ದಾಟಲು ಮುಂದಾಗಿರುವುದರಿಂದ ಕೆಲವರು ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ವೈದ್ಯಕೀಯ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದರು. ಮೌನಿ ಅಮಾವಾಸ್ಯೆ ಮುಹೂರ್ತ ಮಂಗಳವಾರ ರಾತ್ರಿಯಿಂದಲೇ ಪ್ರಾರಂಭವಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಸಂಗಮ್ ಘಾಟ್ನಲ್ಲಿ ತಡರಾತ್ರಿ ಅಮೃತ ಸ್ನಾನಕ್ಕೆ ಭಕ್ತರ ಸಂಖ್ಯೆ ಹೆಚ್ಚಾಗಿದೆ.

# ಶಿರಾದಲ್ಲಿ ದ.ಭಾರತದ ಮೊದಲನೆ ಮಾಂಸ ಉತ್ಪಾದನೆ, ಆಧುನಿಕ ಸಂಸ್ಕರಣ ಕೇಂದ್ರ



**ಶಿರಾ:** ತಾಲ್ಲೂಕಿನ ತಾವರೆಕೆರೆ ಗ್ರಾಮದ ಚೀಲನಹಳ್ಳಿಬಳಿ ಕುರಿ ಮತ್ತು ಮೇಕೆ ಮಾಂಸ ಉತ್ಪಾದನೆ ಹಾಗೂ ಆಧುನಿಕ ಸಂಸ್ಕರಣ ಕೇಂದ್ರವನ್ನು ಶೀಘ್ರದಲ್ಲೇ ಮುಖ್ಯಮಂತ್ರಿಗಳು ಉದ್ಘಾಟಿಸಲಿದ್ದಾರೆ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆಸಚಿವರಾದ ಕೆ. ವೆಂಕಟೇಶ್ ಹೇಳಿದ್ದಾರೆ. ಮಂಗಳವಾರಗ್ರಾಮದ ಬಳಿನಿರ್ಮಾಣದ ಅಂತಿಮ ಹಂತದಲ್ಲಿರುವ ಕುರಿ ಮತ್ತು ಮೇಕೆ ಮಾಂಸ ಉತ್ಪಾದನೆ ಹಾಗೂ ಆಧುನಿಕ ಸಂಸ್ಕರಣ ಕೇಂದ್ರವನ್ನು ಪರಿವೀಕ್ಷಿಸಿದರ ನಂತರ ಅವರು ಮಾತನಾಡಿದರು.

ಗ್ರಾಹಕರಿಗೆ ಉತ್ತಮ ಮಾಂಸ ಒದಗಿಸುವುದುಹಾಗೂ ಕುರಿ, ಮೇಕೆ ಸಾಕಣಿಕೆದಾರರಿಗೆ ಉತ್ತಮಮಾರುಕಟ್ಟೆ ಕಲ್ಪಿಸಿ ವೈಜ್ಞಾನಿಕ ಬೆಲೆಯನ್ನುನೀಡುವ ಉದ್ದೇಶದಿಂದ ತಾಲೂಕಿನ ಚೀಲನಹಳಿಗ್ರಾಮದ 20 ಎಕರೆ ಜಮೀನಿನಲ್ಲಿಉತ್ಪಾದನೆ ಮತ್ತುಆಧುನಿಕ ಸಂಸ್ಕರಣ ಕೇಂದ್ರವನ್ನು53 ಕೋಟಿ ರೂ. ಗಳವೆಚ್ಚದಲ್ಲಿ ನಿರ್ಮಾಣವಾಗಿರುವ ಈ ಘಟಕದ ಸಂಪೂರ್ಣಕಾಮಗಾರಿಗಳು ಮುಗಿಯುವ ಹಂತದಲ್ಲಿದ್ದು ಶೀಘ್ರದಲ್ಲೇ ಮುಖ್ಯಮಂತ್ರಿಗಳಿಂದ ಉದ್ಘಾಟಿಸಲಾಗುವುದುಎಂದು ಹೇಳಿದರು.

ಕರ್ನಾಟಕ ಸರ್ಕಾರದ ದೆಹಲಿಯ ವಿಶೇಷಪ್ರತಿನಿಧಿ ಹಾಗೂ ಶಾಸಕ ಟಿ.ಬಿ. ಜಯಚಂದ್ರಮಾತನಾಡಿ ಈ ಘಟಕದಲ್ಲಿ ಪ್ರತಿದಿನಒಂದೂವರೆ ಸಾವಿರದಿಂದ ಎರಡು ಸಾವಿರಕುರಿಗಳ ಮಾಂಸವನ್ನು ಸಂಸ್ಕರಣ ಮಾಡಲಾಗುತ್ತದೆ, ಇದರಿಂದ ಸಿಗುವ ಚರ್ಮವನ್ನುಹದ ಮಾಡಲು, ಕುರಿ ಮೇಕೆಗಳ ಚರ್ಮಸಂಸ್ಕರಣ ಘಟಕವನ್ನು ಪ್ರಾರಂಭಿಸಲಾಗುವುದು ಹಾಗೂ ಕರ್ನಾಟಕದ ಬೇರೆಡೆ ದೊರಕುವ ಕುರಿ ಹಾಗೂಮೇಕೆ ಚರ್ಮವನ್ನು ಕೂಡ ಇಲ್ಲಿ ಸಂಸ್ಕರಿಸಲಾಗುವುದು, ಇದಕ್ಕಾಗಿ ಹೆಚ್ಚಿನ ಜಾಗದ ಅವಶ್ಯಕತೆ ಬಿದ್ದರೆಪಕ್ಕದಲ್ಲಿಯೇ ಇರುವ ಸರ್ಕಾರಿ ಜಾಗವನ್ನು ನೀಡಲಾಗುವುದು, ಇದಕ್ಕಾಗಿ ಈಗಾಗಲೇ ಎರಡುಕೋಟಿ ರೂ. ಅನುದಾನ ಬಿಡುಗಡೆಯಾಗಿದೆ, ಘಟಕಗಳು ಪ್ರಾರಂಭವಾದ ಕೂಡಲೇ ಸ್ಥಳೀಯರಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದು ಎಂದು ಹೇಳಿದರು.



ಈ ಸಂದರ್ಭದಲ್ಲಿ ಉಣ್ಣೆ ನಿಗಮದ ಸುದರ್ಶನ ಗೊ.ಮ.ನಾಗರಾಜ್, ಜಿಲ್ಲಾ ಪಶುಪಾಲನೆ ನಿರ್ದೇಶಕ ಡಾ.ನಾಗೇಶ್, ತಾಲ್ಲೂಕು ಪಶುಪಾಲನೆ ನಿರ್ದೇಶಕ ರಮೇಶ್ ಕುಮಾರ್, ನಗರ ಯೋಜನೆ ಪ್ರಾಧಿಕಾರ ಅಧ್ಯಕ್ಷ ಪಿ.ಅರ್. ಮಂಜುನಾಥ್ ಸೇರಿದಂತೆ ಹಲವರು ಹಾಜರಿದ್ದರು.

# ರಾಜ್ಯದಲ್ಲಿ ಮಿತಿಮೀರಿದ ಮೈಕ್ರೋ ಫೈನಾನ್ಸ್ ಹಾವಳಿ

**ಚಿಕ್ಕಬಳ್ಳಾಪುರ:** ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಮಿತಿಮೀರಿರುವ ನಡುವೆ ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಕೂಡ ಮಂಗಳವಾರ ಶಾಸಕ ಪ್ರದೀಪ್ ಈಶ್ವರ್‌ಗೆ ಇದರ ಬಿಸಿ ತಟ್ಟಿತು, ಕಮ್ಮಗುಟ್ಟಹಳ್ಳಿ ಪಂಚಾಯಿತಿ ದಿನ್ನಹಳ್ಳಿ ಗ್ರಾಮದಲ್ಲಿ ಮಂಗಳವಾರ ಶಾಸಕ ಪ್ರದೀಪ್ ಈಶ್ವ ಹಮ್ಮಿ ಕೊಂಡಿದ್ದ ನಮ್ಮೂರಿಗೆ ನಮ್ಮಶಾಸಕ ಕಾರ್ಯಕ್ರಮದಲ್ಲಿ ಮಂಡಿಕಲ್‌ನ ಅಮಿನ್ ಬಾನು, ಸ್ವಾತಿ, ಮಂಜಮ್ಮ, ನಾಜಿಯಾಭಾನು ಸೇರಿ 18ಕ್ಕೂ ಹೆಚ್ಚು ಮಹಿಳೆಯರು ದಿನ್ನಹಳ್ಳಿ ಗ್ರಾಮಕ್ಕೆ ಆಗಮಿಸಿ ಶಾಸಕ ಪ್ರದೀಪ್ ಈಶ್ವರ್‌ಗೆ ಮೈಕ್ರೋ ಫೈನಾನ್ಸ್ ಕಿರುಕುಳವನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದು ಕಂಡು ಶಾಸಕ ರಾದಿಯಾಗಿ ತಹಸೀಲ್ದಾರ್, ಇಒ, ಇತರೆ ಅಧಿಕಾರಿಗಳೇ ಕೌಹಾರಿದರು. ದಿನಕ್ಕೆ ಒಬ್ಬೊಬ್ಬರಂತೆ ಯಾರು ಯಾರೋ ಬರುತ್ತಾರೆ.

ಮಹಿಳೆಯರು ಮಕ್ಕಳು ಎಂಬುದನ್ನು ನೋಡದೆ ಹಣ ಕೊಡುವವರೆಗೆ ಮನೆ ಬಿಟ್ಟು ಹೋಗುವುದೇ ಇಲ್ಲ.ಗಂಡಸರು ಇಲ್ಲ, ಆಮೇಲೆ ಬನ್ನಿ,ನಮ್ಮ ಬಳಿ ಈಗ ಹಣ ಎಂದರೆ ನೀವಿದ್ದೀರಲ್ಲ ಎಂದು ಅವಮಾನ ಮಾಡುತ್ತಾರೆ. ದಯವಿಟ್ಟು ನಮಗೆ ಇದರಿ0ದ ಮುಕ್ತಿಕೊಡಿಸಿ ಎನ್ನುತ್ತಾ ರಮೀಜಾ ಕಣ್ಣೀರಾದರು.

ಮಹಿಳೆಯ ಅಹವಾಲು ಸ್ವೀಕರಿಸಿ ಮಾತನಾಡಿದ ಶಾಸಕ ಪ್ರದೀಪ್ ಈಶ್ವರ್ ಅಳಬೇಡಿ ಅಮ್ಮ, ಸಾಲಕೊಟ್ಟವರು, ಕಾನೂನಿನಂತೆ ಸಾಲಮರುಪಾವತಿ ಮಾಡಿ ಎಂದು ಕೇಳಬೇಕೇ ವಿನಃ ಬಾಯಿಗೆ ಬಂದಂತೆ ಮಾತನಾಡಬಾರದು.

ಇನ್ನೊಮ್ಮೆ ಅವರು ಹೀಗೆಲ್ಲಾ ಮಾತನಾಡಿದರೆ ಅದನ್ನು ವಿಡಿಯೋ ಮಾಡಿಕೊಂಡು ಪೊಲೀಸರಿಗೆ ದೂರು ನೀಡಿ ನಾನೂ ಕೂಡ ಮಾತನಾಡುತ್ತೇನೆ. ನಮ್ಮ ಸರಕಾರ ಇದಕ್ಕಾಗಿ ವಿಶೇಷ ಕಾಯ್ದೆ ತರಲು ಮುಂದಾಗಿದೆ ಎಂದು ಧೈರ್ಯ ತುಂಬಿದರು. ಇದಕ್ಕೂ ಮೊದಲು ಚಿಕ್ಕನಾರಪ್ಪನಹಳ್ಳಿ,ಕೊಮ್ಮಲಮರಿ ಗ್ರಾಮಕ್ಕೆ ಭೇಟಿ ನೀಡಿದ್ದ ಶಾಸಕ ಪ್ರದೀಪ್ ಈಶ್ವರ್ ಅಕ್ಷರಶಃ ಜನರ ಜತೆ ಅವರಂತೆ ಬೆರೆತು ಸಮಸ್ಯೆ ಆಲಿಸಿದರು. ಮಂಗಳವಾರ ಬೆಳಗ್ಗೆ 8 ಗಂಟೆ ಸುಮಾರಿಗೆ 113ನೇ ಹಳ್ಳಿಯಾದ ತಾಲೂಕಿನ ಚಿಕ್ಕನಾರಪ್ಪನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಶಾಸಕರು,ಅಲ್ಲಿನ ಸಮಸ್ಯೆಗಳನ್ನು ಆಲಿಸಿದರು. ಇದೇ ಗ್ರಾಮದಲ್ಲಿ ಜನರೊಂದಿಗೆ ನಿಂತುಕೊಂಡು ತಿಂಡಿ ತಿಂದ ಶಾಸಕ ತಿಂಡಿ ತಿನ್ನುವಾಗಲೂ ಸಮಸ್ಯ ಗಳನ್ನು ಆಲಿಸಿ ಪರಿಹಾರದ ಬಗ್ಗೆ ಮಾತನಾಡಿದ್ದು ವಿಶೇಷವಾಗಿತ್ತು.

ಗುಡಿಬಂಡೆ, ಚಿಕ್ಕಬಳ್ಳಾಪುರದಿಂದ ನಮ್ಮ ಗ್ರಾಮಕ್ಕೆ ಬಸ್ ವ್ಯವಸ್ಥೆ ಮಾಡಿಕೊಡಿ ಎಂದು ಅಂತಿಮ ಬಿಕಾಂ ವಿದ್ಯಾರ್ಥಿನಿ ಗಂಗೋತ್ರಿ ಶಾಸಕರಿಗೆ ಮನವಿ ಮಾಡಿದರು.

ಬಸ್ ವ್ಯವಸ್ಥೆಗೆ ಭರವಸೆ ನೀಡಿದರು.

**ಸ್ಮಶಾನ ಜಾಗ:** ಸ್ಮಶಾನ ಜಾಗ ಎಲ್ಲಿದೆ ಎಂಬುದೇ ನಮಗೆ ಗೊತ್ತಿಲ್ಲ. ನಮ್ಮ ಹೊಲಗಳಲ್ಲೇ ಶವಸಂಸ್ಕಾರ ಮಾಡಿಕೊಳ್ಳುತ್ತಿದ್ದೇವೆ ಎಂದು ಕೊಮ್ಮಲಮರಿ ಗ್ರಾಮಸ್ಥರು ತಿಳಿಸಿದರು. ಶಾಸಕರ ಪಕ್ಕದಲ್ಲೇ ಕುಳಿತಿದ್ದ ಕಂದಾಯ ಅಧಿಕಾರಿ, ಎರಡು ದಿನಗಳಲ್ಲಿ ಸ್ಥಳ ಪರಿಶೀಲನೆ ನಡೆಸಿ, ಎರಡು ಎಕರೆ ಸ್ಮಶಾನ ಜಾಗ ಗುರುತಿಸುವುದಾಗಿ ಉತ್ತರಿಸಿದರು. ದಿನ್ನಹಳ್ಳಿಗೆ ಭೇಟಿ ನೀಡಿದ ಶಾಸಕರು ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವ ಭರವಸೆ ನೀಡಿದರು.

> ಕ್ಷೇತ್ರದಲ್ಲಿ ಅಪರಾಧ ಪ್ರಕರಣಗಳು ಕಮ್ಮಿ ಆಗಿದೆ. ಜನರಿಗೆ ಸಮಸ್ಯೆ ಆಗಬಾರದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸಣ್ಣಪುಟ್ಟ ಪ್ರಕರಣಗಳಿಗೆ ಕೇಸ್ ದಾಖಲಿಸದೆ ರಾಜಿ ಸಂಧಾನ ಮುಖಾಂತರ ಬಗೆಹರಿಸಲಾಗುತ್ತಿದೆ. ಕ್ಷೇತ್ರದಲ್ಲಿ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಎಲ್ಲಾ ರೀತಿಯ ಕ್ರಮ ವಹಿಸಲಾಗಿದೆ. ಪೊಲೀಸ್ ವ್ಯವಸ್ಥೆ ಸ್ಟ್ರಾಂಗ್ ಇದೆ.
>
> **ಪ್ರದೀಪ್ ಈಶ್ವರ್** । ಶಾಸಕ ಚಿಕ್ಕಬಳ್ಳಾಪುರ

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಅನಿಲ್ ಕುಮಾರ್, ಇ.ಒ.ಮಂಜುನಾಥ್,ತಾಲೂಕು ಸಮಾಜಕಲ್ಯಾಣ ಅಧಿಕಾರಿ ಶೇಷಾದ್ರಿ,ತಾಲೂಕು ಆರೋಗ್ಯಾಧಿಕಾರಿ ಮಂಜುಳ, ಸಮುದಾಯ ಆರೋಗ್ಯಾಧಿಕಾರಿ ಶ್ವೇತ, ಕಮ್ಮಗುಟ್ಟಹಳ್ಳಿ ಗ್ರಾಪಂ ಪಿಡಿಒ, ಆರೂರು ಗ್ರಾಪಂ ಪಿಡಿಒ ಮದ್ದರೆಡ್ಡಿ,ಬೆಸ್ಕಾಂ ಎಇ ಆಶಾ, ಎಸ್.ಪಿ.ಶ್ರೀನಿವಾಸ್, ಚೇತನ್, ಗುಂಡುಮಂದಿಕಲ್ ಶ್ರೀರಾಮರೆಡ್ಡಿ, ಡಿಎಸ್‌ಎಸ್ ಅನಂದ್, ಪೆರೇಸಂದ್ರ ರಾಮೇಶ್, ನಾಗಭೂಷಣ್, ಶಂಕರ, ಅರವಿಂದ್, ಗ್ರಾಮಸ್ಥರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಇದ್ದರು.





# ಬೀದಿಬದಿ ವ್ಯಾಪಾರದಿಂದ ಸಂಚಾರಕ್ಕೆ ಸಂಚಕಾರ

**ಶಿರಾ:** ಭಾರಿ ಸಂಚಾರದಟ್ಟಣೆ ಇರುವ ಕಾರಣ ದಿನನಿತ್ಯ ದೊಡ್ಡ ಮಟ್ಟದಲ್ಲಿ ಪಾರ್ಕಿಂಗ್ ಸಮಸ್ಯೆಯನ್ನು ಎದುರಿಸುತ್ತಿರುವ ನಗರದ ರಸ್ತೆಗಳಲ್ಲೇ ತರಕಾರಿ, ಹಣ್ಣುಹಂಪಲು, ಕೂಲಿಂಗ್ ಗ್ಲಾಸ್, ಮೆಣಸುಗಳ ವ್ಯಾಪಾರವನ್ನು ಬೇರೆ ಊರಿನಿಂದ ಬಂದು ಮಾಡುತ್ತಿರುವುದರಿಂದ ಸಮಸ್ಯೆ ದುಪ್ಪಟ್ಟಾಗಿದೆ. ಹಿಂದೆಲ್ಲ ಮಂಗಳವಾರಗ ಮಾತ್ರ ಕಾಣಸಿಗುತ್ತಿದ್ದ ಬೀದಿ ವ್ಯಾಪಾರಿಗಳ ದರ್ಶನ ಈಗ ನಿತ್ಯವೂ ಆಗುತ್ತಿದೆ. ದೂರು ಬಂದಾಗ ಒಮ್ಮೆ ಅವರ ತೆರವಾಗುತ್ತದೆ. ಕೆಲ ದಿನಗಳ ಬಳಿಕ ಮತ್ತೆ ಅವರು ಅಲ್ಲೇ ಪ್ರತ್ಯಕ್ಷರಾಗುತ್ತಾರೆ. ಹೀಗಾಗಿ ವಾಹನಗಳು ಮಾತ್ರವಲ್ಲದೇ ಪಾದಚಾರಿಗಳು ನಡೆದಾಡಲು ಕೂಡ ಹಿಂಸೆಪಡುವಂತಹ ಸ್ಥಿತಿ ನಿರ್ಮಾಣವಾಗಿದೆ.



ರಸ್ತೆಗಳಲ್ಲಿ ಬೀದಿಬದಿ ವ್ಯಾಪಾರಸ್ಥರಿಗೆ ವಲಯ ನಿರ್ಮಿಸಿಕೊಡುವ ಪ್ರಸ್ತಾವನೆ ಕಾರ್ಯರೂಪಕ್ಕೆ ಬರುವುದು ಗಗನ ಕುಸುಮವಾಗಿದೆ. ಮುಖ್ಯ ರಸ್ತೆ ಬದಿಯಲ್ಲಿ, ದೇವಸ್ಥಾನದ ಪಕ್ಕ ಹೀಗೆ ರಸ್ತೆಗಳ ಅಲ್ಲಲ್ಲಿ ತರಕಾರಿ, ಮೆಣಸು, ದಿನಬಳಕೆಯ ಅಡುಗೆ ಪದಾರ್ಥಗಳನ್ನು ಮಾರಾಟ ಮಾಡುವವರು ಹೆಚ್ಚಾಗಿದ್ದಾರೆ. ಆಗಾಗ್ಗೆ ಅವರನ್ನು ಎಬ್ಬಿಸುವುದು, ವಾರದ ಬಳಿಕ ಮತ್ತೆ ಅದೇ ಜಾಗದಲ್ಲಿ ಕುಳಿತುಕೊಳ್ಳುವುದು ಇದೆಲ್ಲ ಪದೇಪದೇ ನಡೆಯುತ್ತಾ ಬಂದಿದೆ.

ಇದೇ ವೇಳೆ ಸಾಕಷ್ಟು ಬದಲಾವಣೆಗಳೂ ಆಗಿವೆ. ಭರವಸೆಗಳ ಸ್ವರೂಪಗಳೂ ಮಾರ್ಪಾಡಾಗಿವೆ. ಆದರೆ ಬೀದಿಬದಿ ವ್ಯಾಪಾರಿಗಳಿಗೆ ಮಾತ್ರ ಸೂಕ್ತ ಜಾಗದ ಗುರುತು ಇನ್ನೂ ಆಗಿಲ್ಲ. ಮೀಟಿಂಗ್‌ಗಳು ಇನ್ನೂ ಜಾರಿಯಲ್ಲಿದೆ. ಇತ್ತ ಹೊಸ ವ್ಯಾಪಾರಿಗಳ ಪ್ರವೇಶ ದಿನನಿತ್ಯ ಹೆಚ್ಚುತ್ತಿದೆ. ನಗರಸಭೆ ತರಕಾರಿ ಮಾರುಕಟ್ಟೆಗೆ ಜಾಗ ಗುರುತಿಸುವ ಕಾರ್ಯ ಮಾತ್ರ ಹಲವು ದಶಕಗಳಿಂದ ಬರಿ ಹೇಳಿಕೆ ಮತ್ತು ಕಾಗದದ ಮೇಲೆ ಉಳಿದಿದೆ.

ಪ್ರತಿವರ್ಷ ನಗರಸಭೆ ನೆಲಕ್ಕೆ ಕರ ವಸೂಲಿ ಎಂದು ಹರಾಜು ಮೂಲಕ ಲಕ್ಷಾಂತರ ಆದಾಯ ಪಡೆಯುತ್ತಿದೆ ಅದರು ನಗರದಲ್ಲಿ ಬೀದಿ ಬದಿ ಮತ್ತು ತರಕಾರಿ ವ್ಯಾಪಾರಿಗಳಿಗೆ ಸೂಕ್ತವಾದ ಸ್ಥಳ ಗುರುತಿಸಿಲ್ಲ.

ಇದರಿಂದ ದಿನನಿತ್ಯ ಪೊಲೀಸ್ ಇಲಾಖೆಗೆ ತೆರವು ಗೊಳಿಸುವ ಕಾರ್ಯ ಮಾತ್ರ ತಪ್ಪಿಲ್ಲ. ಒಟ್ಟಾರೆ ನಗರಸಭೆ ಆಡಳಿತ ನಿರ್ಲಕ್ಷ್ಯಕ್ಕೆ ಪೊಲೀಸ್ ಇಲಾಖೆ ತಲೆನೋವಾಗಿ ಪರಿಣಮಿಸಿದೆ.

# ಸಂಶಯಾಸ್ಪದ ಮೆಡಿಕಲ್ ಸ್ಟೋರ್‌ಗಳ ತಪಾಸಣೆ

**ಶಿರಾ:** ಮಾತ್ರೆಗಳನ್ನೇ ಮಾದಕ ವಸ್ತುಗಳ ರೀತಿಯಲ್ಲಿ ಬಳಕೆ ಮಾಡುವ ಪರಿಪಾಟ ವ್ಯಸನಿಗಳಲ್ಲಿ ಏರಿಕೆಯಾಗುತ್ತಿದ್ದಂತೆ ಜಿಲ್ಲಾ ಔ?ಧ ನಿಯಂತ್ರಕ ಇಲಾಖೆ ಕೆಲಮಾತ್ರೆಗಳ ಮಾರಾಟ, ಖರೀದಿಯ ಮೇಲೆ ಕಣ್ಣು ಹಾಕಿದೆ. ಇದೇ ಕಾರಣದಿಂದ ನಗರದ ವಿವಿಧ ಕಡೆಯಲ್ಲಿ ದಾಳಿ ನಡೆಸಿದ ಇಲಾಖೆ ಪರಿಶೀಲನೆ ನಡೆಸಿದೆ. ಹಲವು ಒಂದು ತಿಂಗಳಿನಿಂದ ಇಲಾಖೆ ಕೆಲ ಮಾತ್ರೆಗಳ ಮೇಲೆ ನೇರವಾಗಿ ಕಣ್ಣು ನೆಟ್ಟಿದೆ. ಇದರ ಪರಿಣಾಮ ಔ?ಧಂಗಡಿಯಲ್ಲಿ ಬರುವ ಮಂದಿ ವೈದ್ಯರು ನೀಡಿದ ಚೀಟಿ ಇಲ್ಲದೇ ಇದ್ದರೆ ಅವರನ್ನು ವಾಪಾಸು ಕಳುಹಿಸುವ ಕೆಲಸವನ್ನು ಮಾಡಲಾಗಿದೆ.



ಈ ಮಾತ್ರೆಗಳ ರಿಯಲ್ ಟೈಮ್ ಖರೀದಿ ಹಾಗೂ ಮಾರಾಟದ ಮೇಲೆ ನೇರವಾಗಿ ನಿಗಾ ಇಟ್ಟಿರುವುದರಿಂದ ಮಾತ್ರೆಗಳನ್ನು ವ್ಯಸನಿಗಳು ಬದಲಾವಣೆ ಮಾಡುತ್ತಾ ಹೋಗುತ್ತಿರುವುದರಿಂದ ಕೆಲ 'ಾತ್ರೆಗಳ ಖರೀದಿ, ಮಾರಾಟ ವಿಚಾರದಲ್ಲಿ ನಿಗಾ ಇಟ್ಟಿದೆ.

ಔ?ಧ ಅಂಗಡಿಯಲ್ಲಿ ವೈದ್ಯರ ಚೀಟಿ ಇಲ್ಲದೇ ಔ?ಧಗಳನ್ನು ನೀಡಲೇಬಾರದು ಎನ್ನುವ ನಿಯಮ ಇದ್ದರೂ ಕೂಡ ಅದರ ಪಾಲನೆ ಮಾಡುವ ವಿಚಾರದಲ್ಲಿ ಬಹಳ?ು ಲೋಪದೋ?ಗಳು ಕಾಣಿಸಿಕೊಳ್ಳುತ್ತಿತ್ತು. ಆದರೆ ಔ?ಧ ನಿಯಂತ್ರಕ ಇಲಾಖೆ ತನ್ನ ಆನ್‌ಲೈನ್ ಮುಖಪುಟದಲ್ಲಿ ಇದಕ್ಕಾಗಿ ಪ್ರತ್ಯೇಕವಾದ ವಿಶೇ? ಕೊಂಡಿಯನ್ನು ಸೃಷ್ಟಿ ಮಾಡಿದ್ದು, ಇದರಲ್ಲಿ ಕೆಲ ಔ?ಧ ಮಾರಾಟ, ಖರೀದಿಯ ಕುರಿತು ಪ್ರತಿದಿನನೂ ಲೆಕ್ಕ ನೀಡಬೇಕಾಗುತ್ತದೆ.

ಹೆಚ್ಚು ಮಾರಾಟವಾದ ಕಡೆಯಲ್ಲಿ ಇಲಾಖೆ ತನ್ನ ಅಧಿಕಾರಿ ವರ್ಗದವರ ಜತೆಗೂಡಿಕೊಂಡು ತಪಾಸಣೆ ನಡೆಸುವ ಕೆಲಸವನ್ನು ಮಾಡುತ್ತಿದ್ದು, ಈ ನಿಟ್ಟಿನಲ್ಲಿ ಶಿರಾ ನಗರದ ಕೆಲಔ?ಧ ಅಂಗಡಿಗಳಿಗೆ ದಿಡೀರ್ ತಪಾಸಣೆ ಕೆಲಸ ಕೈಗೊಂಡು ಪೊಲೀಸ್ ಇಲಾಖೆಯಿಂದ ಸಾಕ?ು ದೂರುಗಳು ಬಂದ ಕಾರಣದಿಂದ ಔ?ಧ ಅಂಗಡಿಗಳಿಗೆ ಕೆಲ ಮಾತ್ರೆಗಳ ವಿಚಾರದಲ್ಲಿ ವೈದ್ಯರ ಚೀಟಿ ಇಲ್ಲದೇ ಮಾತ್ರೆ ನೀಡಬೇಡಿ ಎಂದಿದ್ದೇವೆ. ಮಾತ್ರೆಗಳ ಮಾರಾಟ ಹಾಗೂ ಖರೀದಿಯ ವಿಚಾರದಲ್ಲೂ ಗಮನ ಇಟ್ಟಿದ್ದೇವೆ " ಎನ್ನುತ್ತಾರೆ ಜಿಲ್ಲಾ ಔ?ಧ ನಿಯಂತ್ರಣ ಇಲಾಖೆಯ ಡ್ರಗ್ಸ್ ಕಂಟ್ರೋಲರ್

ಒಂದು ಔ?ಧ ಅಂಗಡಿಯಲ್ಲಿ ಒಂದು ತಿಂಗಳ ಅಂತರದಲ್ಲಿ ಮಾತ್ರೆಗಳನ್ನು ರೋಗಿ ಖರೀದಿ ಮಾಡಿರಬಹುದು.

ಅದರ ಸಂಖ್ಯೆ ಜಾಸ್ತಿಯಾದಂತೆ ಇಲಾಖೆ ಕೂಡ ಎಚ್ಚರದಿಂದ ನೋಡಿಕೊಳ್ಳುತ್ತದೆ. ಈ ಮಾತ್ರೆಯನ್ನು ಯಾಕೆ ಜಾಸ್ತಿ ಬಳಕೆ ಮಾಡಲಾಗಿದೆ ಇದರ ಜತೆಗೆ ಯಾವ ಪ್ರದೇಶದಲ್ಲಿ ಯಾವ ಔ?ಧ ಅಂಗಡಿಯಿಂದ ಖರೀದಿ ನಡೆದಿದೆ ಎನ್ನುವ ಮಾಹಿತಿ ಅಧರಿಸಿ ತಪಾಸಣೆ ಮಾಡಲಾಗಿದೆ ಎಂದು ತಿಳಿದು ಬಂದಿದೆ.

# ಮೂಲಭೂತ ಸೌಲಭ್ಯಗಳಿಂದ ವಂಚಿತ: ಮನವಿ

ಮಾಲೂರು: ತಾಲ್ಲೂಕಿನ ಲಕ್ಕೂರು ಹೋಬಳಿ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಮೂಲಭೂತ ಸೌಲಭ್ಯಗಳಿಂದ ವಂಚಿತಾಗಿದ್ದು, ಕೂಡಲೇ ಸಂಬಂಧ ಪಟ್ಟ ಅಧಿಕಾರಿಗಳು ಇತ್ತ ಗಮನಹರಿಸುವಂತೆ ಕರ್ನಾಟಕ ದಲಿತ ಸಂಘ?ರ್ ಸಮಿತಿ ಸಂಘಟನೆಯ ಪದಾಧಿಕಾರಿಗಳು ಆಗ್ರಹಿಸಿ ತಹಶೀಲ್ದಾರ್ ಎಂ. ವಿ.ರೂಪ ಅವರಿಗೆ ಮನವಿ ಸಲ್ಲಿಸಿದರು.



ತಾಲ್ಲೂಕಿನ ಲಕ್ಕೂರು ಹೋಬಳಿ ಮಟ್ಟದಲ್ಲಿ ಮೂಲಭೂತ ಸೌಲಭ್ಯಗಳ ಕುರಿತು ಈ ಹಿಂದೆ ಸುಮಾರು ವ?ರ್ಗಳಿಂದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮನವಿಗಳನ್ನು ಮಾಡಿಕೊಂಡರು ಸಹ ಇದುವರೆಗೆ ಯಾವುದೇ ರೀತಿ ಪ್ರಯೋಜನವಾಗಲಿಲ್ಲ ಲಕ್ಕೂರು ಹೋಬಳಿ ಕೇಂದ್ರ ಸ್ಥಾನವಾಗಿದ್ದು ಅನೇಕ ಸರ್ಕಾರಿ ಕಚೇರಿಗಳಿದ್ದು ದಿನನಿತ್ಯ ಹಳ್ಳಿಗಾಡು ಪದೇಶಗಳಿಂದ ಸುಮಾರು ಜನತೆ ತಮ್ಮ ಹಲವು ಕೆಲಸಗಳಿಗೆ ಭೇಟಿ ಕೊಡುತ್ತಾರೆ. ಅವರಿಗೆ ಮೂಲಭೂತ ಸೌಲಭ್ಯಗಳು ಇರುವುದಿಲ್ಲ ಹಾಗೂ ಜನರು ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಅದ್ದುದ್ದರಿಂದ ಬುದ್ಧ ವಿಹಾರಕ್ಕೆ ಒಂದು ಎಕರೆ ಜಮೀನು ಮಂಜೂರು ಲಕ್ಕೂರಿನ ದೊಡ್ಡ ಕೆರೆಯಲ್ಲಿ ಆಳತೆಗೂ ಮೀರಿ ಆಕ್ರಮವಾಗಿ ಮಣ್ಣನ್ನು ತೆಗೆದಿರುತ್ತಾರೆ ಇವರ ವಿರುದ್ಧ ಕಾನೂನು ಕಮ ಜರುಗಿಸಬೇಕು,ನಾಡಕಛೇರಿಯಿಂದ ಮಾಲೂರು ರಸ್ತೆಗೆ ಹಾದುಹೋಗುವ ರಸ್ತೆ ನಿರ್ಮಾಣ ಮಾಡಬೇಕು, ಲಕ್ಕೂರು ಪ್ರಾಥಮಿಕ ಆರೋಗ್ಯ ಇಲಾಖೆಗೆ ತುರ್ತು ವಾಹನ ಅಂಬುಲೆನ್ಸ್ ಒದಗಿಸಿಕೊಡಬೇಕು.

ಲಕ್ಕೂರು ಗ್ರಾಮದಲ್ಲಿ ಸರ್ವೆ ನಂ 273ರಲ್ಲಿ ಸರ್ಕಾರಿ ಕರಾಬಿ ಇದ್ದು, ಅದರಲ್ಲಿ ಈ ಕೂಡಲೆ ನಿರ್ಗತಿಕರಿಗೆ ಖಾಲಿ ನಿವೇಶನಗಳನ್ನು ನೀಡತಕ್ಕದ್ದು. ಗ್ರಾಮದ ಸುತ್ತಮುತ್ತಲು ಹಳ್ಳಿಗಳಿದ್ದು ಜಾನುವಾರುಗಳಿಗೆ ಪಶುವೈದ್ಯರನ್ನು ನೇಮಿಸಬೇಕು.ಲಕ್ಕೂರು ಗ್ರಾಮದ ಶನಿಮಹಾತ್ಮ ಕಾಲೋನಿಯಲ್ಲಿ ಸುಮಾರು 40–45 ವ?ರ್ಗಳಿಂದ ಮನೆ ಕಟ್ಟಿಕೊಂಡು ವಾಸವಾಗಿದ್ದವರಿಗೆ ಹಕ್ಕುಪತ್ರ ನೀಡಬೇಕು, ಬಸ್ ನಿಲ್ದಾಣದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಾಣ ಮಾಡಬೇಕು.

ಚೋಳರ ಕಾಲದ ಶಿವನ ದೇವಸ್ಥಾನದ ಮುಂಬಾಗದಲ್ಲಿದ್ದ ಕಲ್ಯಾಣಿಯನ್ನು ಮರುನಿರ್ಮಾಣ ಮಡಬೇಕು ಮಕ್ಕಳ ಸಶಾನಕ್ಕೆ ಹೋಗಲು ದಾರಿ ಕಲ್ಪಿಸಿಕೊಡಬೇಕು ಇಲ್ಲವಾದಲ್ಲಿ ಕರ್ನಾಟಕ ದಲಿತ ಸಂಘ?ರ್ ಸಮಿತಿ (ಅಂಬೇಡ್ಕರ್‌ವಾದ) ಉಗ್ರವಾದ ಹೋರಾಟ ಮಾಡುವ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕ ಎ.ಕೆ.ವೆಂಕಟೇಶ್, ಲಕ್ಕೂರು ವೆಂಕಟೇಶ್, ಅಗ್ರಹಾರ ಬಾಬು,ಕಲ್ಕೆರೆ ಮುನಿರಾಜು, ಮಡಿವಾಳ ಶ್ರೀನಿವಾಸ್, ಚಂದ್ರಕಲಾ, ಶಶಿಕುಮಾರ್, ಪುರ ವೆಂಕಟೇಶ್ ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

## ಕಾರು ಡಿಕ್ಕಿ: ಮೂವರ ದುರ್ಮರಣ

**ಚಾಮರಾಜನಗರ:** ಚಿಕ್ಕತಾಯಮ್ಮ ದೇವರ ದರ್ಶನ ಪಡೆದು ಸ್ವಗ್ರಾಮಕ್ಕೆ ಮರುಳುವಾಗ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಮೂವರು ದುರ್ಮರಣ ಹೊಂದಿದ ಘಟನೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಸಮೀಪದ ಹಿರಿಕಾಟಿ ಗೇಟ್ ಬಳಿ ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಮಂಗಳವಾರ ರಾತ್ರಿ ನಡೆದಿದೆ.

ಮೃತರನ್ನು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಕೂಡ್ಲಾಪುರ ಗ್ರಾಮದ ಬೈಕ್ ಸವಾರ ಶಶಿಧರ್(28), ಪತ್ನಿ ಶಾಲಿನಿ(22) ಹಾಗೂ ತಾಯಿ ಭಾಗ್ಯಮ್ಮ(50) ಎಂದು ಗುರುತಿಸಲಾಗಿದ್ದು, ಇವರ ಹಿಂದೆ ಬೈಕ್ದನಲ್ಲಿ ಬರುತ್ತಿದ್ದ ನಂಜನಗೂಡು ತಾಲೂಕಿನ ಹೆಮ್ಮರಗಾಲ ಗ್ರಾಮದ ರಾಜಣ್ಣ(40) ಎಂಬಾತನಿಗೂ ಕಾರು ತಗುಲಿ ತೀವ್ರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲ್ಲೂಕಿನ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿ ವಾಪಸ್ ಸ್ವಗ್ರಾಮಕ್ಕೆ ಬೈಕ್ ನಲ್ಲಿ ತೆರಳುತ್ತಿದ್ದಾಗ ನಂಜನಗೂಡು ಕಡೆಯಿಂದ ವೇಗವಾಗಿ ಬಂದ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಅಪಘಾತದ ಮಾಹಿತಿ ಅರಿತ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಮೂವರ ಮೃತದೇಹಗಳನ್ನು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರವಾನಿಸಿದ್ದಾರೆ. ವಾಹನಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ. ಬೇಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಮಾಜಿ ಶಾಸಕ ದಡೇಸಗೂರು ಕೊಪ್ಪಳ ಬಿಜೆಪಿ ನೂತನ ಜಿಲ್ಲಾಧ್ಯಕ್ಷ

**ಕೊಪ್ಪಳ:** ಮಾಜಿ ಶಾಸಕ ಬಸವರಾಜ್ ದಡೇಸಗೂರು ಕೊಪ್ಪಳ ಜಿಲ್ಲಾ ಬಿಜೆಪಿ ನೂತನ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ. ಎಂ ಎಲ್ ಸಿ ಹನುಮಂತ ನಿರಾಣಿ ಅವರ ಉಸ್ತುವಾರಿಯಲ್ಲಿ ಮಂಗಳವಾರ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆದಿದೆ.

ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಎಂಟು ಜನ ಸ್ಪರ್ಧಿಸಿದ್ದರು. ವಿವಿಧ ತಾಲೂಕಿನ ಮುಖಂಡರು, ಪದಾಧಿಕಾರಿಗಳ ಬೆಂಬಲ ದೊಂದಿಗೆ ದಡೇಸಗೂರು ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಮತ್ತೊಂದಡೆ ಹಾಲಿ ಅಧ್ಯಕ್ಷರ ಅವಧಿ ಇನ್ನೂ ಇದ್ದರೂ ಕೂಡಾ ಅವಧಿಗೂ ಮುನ್ನವೇ ಅಧ್ಯಕ್ಷರನ್ನು ಬದಲಾವಣೆ ಮಾಡಿದ್ದು ಪಕ್ಷದಲ್ಲಿ ಮಾಜಿ ಸಚಿವ ಹಾಲಪ್ಪ ಆಚಾರ್ ಬಿಗಿ ಹಿಡಿತಕ್ಕೆ ಸಾಕ್ಷಿಯಾಗಿದೆ ಎನ್ನಲಾಗುತ್ತಿದೆ.

ಲೋಕಸಭೆ ಚುನಾವಣೆ ಅವಧಿಯಲ್ಲಿ ಟಿಕೆಟ್ ಹಂಚಿಕೆ ಗೊಂದಲದಿಂದಾಗಿ ಉಂಟಾದ ನಾಯಕರ ವ್ೈವ್ಂನ್ಸ್ಯದಿಂದಾಗಿ ಸಂಗಣ್ಣ ಕರಡಿ ಬಿಜೆಪಿ ತೊರೆಂಯುುವಂತಾಗಿತ್ತು. ಮುಂದೆ ಅದು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಸವರಾಜ್ ಕ್ಯಾವಿಟರ್ ಸೋಲಿಗೆ ಕಾರಣವೂ ಆಗಿತ್ತು. ಅವಧಿಗೂ ಮುಂಚೆಯೇ ನವೀನ್ ಗುಳಗಣ್ಣನವರ್ ಅವರನ್ನು ಅಧ್ಯಕ್ಷ ಗಾದಿಯಿಂದ ಇಳಿಸಿ ದಡೇಸಗೂರು ಅವರನ್ನು ಕೂರಿಸಿದ್ದು ಜಿಲ್ಲೆಯಲ್ಲಿ ಬಿಜೆಪಿ ಅಧ್ಯಕ್ಷ ಬಸವರಾಜ್ ದಡೇಸಗೂರು ಆಗಿದ್ದರೆ ಸೂಪರ್ ಅಧ್ಯಕ್ಷ ಮಾತ್ರ ಹಾಲಪ್ಪ ಆಚಾರ್ ಎಂದು ವ್ಯಾಖ್ಯಾನಿಸಲಾಗುತ್ತಿದೆ.

# ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಸಿಗುವಂತಾಗಬೇಕು: ಶಶಿಕಲಾ ಅಂಬರೀಷ್

**ಶಿಡ್ಲಘಟ್ಟ:** ಉತ್ತಮ ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರು ಸೇವನೆ ಬಹಳ ಪ್ರಮುಖ ಪಾತ್ರವಹಿಸುತ್ತದೆ ಆದ್ದರಿಂದ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ಸಿಗುವಂತಾಗಬೇಕು ಎಂದು ಗ್ರಾಮ ಪಂಚಾಯಿತಿ ಸದಸ್ಯರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಖಜಾಂಚಿ ಹಾಗೂ ಗ್ರಾ.ಪಂ.ಸದಸ್ಯೆ ಶಶಿಕಲಾ ಅಂಬರೀಷ್ ತಿಳಿಸಿದರು.




ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಜೆ.ವೆಂಕಟಾಪುರ ಗ್ರಾಮ ಪಂಚಾಯಿತಿಯ ಬೈರಸಂದ್ರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಯಾಟರ್ ಫಿಲ್ಲರ್ ಕಂಪನಿಯ ಉದ್ಯೋಗಿ ನೇಹಮಿಶ್ರ ಕುಟುಂಬದವರು ಕೊಡುಗೆಯಾಗಿ ನೀಡಿದ ವಾಟರ್ ಫಿಲ್ಟರ್ ನ್ನು ಸಮರ್ಪಿಸಿ ಅವರು ಮಾತನಾಡಿದರು.

ಅಂತರ್ಜಲ ಮಟ್ಟ ಕುಸಿದು ಅಲ್ಲಿಂದ ಹೊರ ತೆಗೆಯುವ ನೀರು ರಾಸಾಯನಿಕಗಳಿಂದ ಕೂಡಿದ್ದು ಆ ನೀರನ್ನು ಕುಡಿಯುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಅದರಿಂದ ಪಾರಾಗಲು ಶುದ್ಧ ಕುಡಿಯುವ ನೀರು ಸೇವನೆ ಅಗತ್ಯವಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ನನಗೆ ಪರಿಚಯ ಇರುವ ಅಮೃತಹಳ್ಳಿಯಲ್ಲಿ ನೆಲೆಸಿರುವ ಕ್ಯಾಟರ್ ಫಿಲ್ಲರ್ ಕಂಪನಿಯ ಉದ್ಯೋಗಿ ನೇಹಮಿಶ್ರ ಕುಟುಂಬದವರು 80 ಸಾವಿರ ರೂ ಮೌಲ್ಯದ ವಾಟರ್ ಫಿಲ್ಟರ್ ನ್ನು ಕೊಡುಗೆಯಾಗಿ ಶಾಲೆಗೆ ನೀಡಿದ್ದು, ಶಾಲೆಯ ಎಲ್ಲಾ ಮಕ್ಕಳಿಗೂ ಇಂದಿನಿಂದ ಫಿಲ್ಟರ್ ನೀರು ಸಿಗಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಶಾಲೆಗೆ ವಾಟರ್ ಫಿಲ್ಟರ್ ನ್ನು ಕೊಡುಗೆಯಾಗಿ ನೀಡಿದ ನೇಹಮಿಶ್ರ ಅವರನ್ನು ಗ್ರಾಮಸ್ಥರು, ಎಸ್.ಡಿ.ಎಂ.ಸಿ ಸಮಿತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯ ಶಿಕ್ಷಕ ನಾರಾಯಣಸ್ವಾಮಿ, ಶಿಕ್ಷಕಿ ಉಷಾ, ಅಂಗನವಾಡಿ ಶಿಕ್ಷಕಿ ರತ್ನಮ್ಮ, ಸಹಾಯಕಿ ಪ್ರಭ ,ಗ್ರಾಮಸ್ಥರು ಹಾಗು ಶಾಲಾ ಮಕ್ಕಳು ಹಾಜರಿದ್ದರು.

# ಮುಳಬಾಗಿಲಿನಲ್ಲಿ ಭೀಮ ಕೋರೆಗಾಂವ್ ವಿಜಯೋತ್ಸವ



**ಮುಳಬಾಗಿಲು:** ತಾಲೂಕಿನ ನೇತಾಜಿ ಕ್ರೀಡಾಂಗಣದಲ್ಲಿ ಫೆಬ್ರವರಿ 18ರಂದು ಬಹುಜನ ಸಂಘಟನೆಗಳ ಒಕ್ಕೂಟದವತಿಯಿಂದ ಡಾಕ್ಟರ್ ಬಿ. ಆರ್ ಅಂಬೇಡ್ಕರ್ ಅವರು ಸ್ಥಾಪಿಸಿದ ಸಮತಾ ಸೈನಿಕ ದಳಕ್ಕೆ ಶತಮಾನೋತ್ಸವ ಹಾಗೂ ದಲಿತ ಚಳುವಳಿ ಸ್ಥಾಪನೇಯಾಗಿ 50 ವರ್ಷಗಳು ಪೂರ್ಣಗೊಂಡಿದ್ದು ಜೊತೆಗೆ ದಲಿತರ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾದ ಭೀಮ ಕೋರೆಂಗಾವ್ ವಿಜಯೋತ್ಸವಕ್ಕೆ 50 ವರ್ಷಗಳು ಪೂರ್ಣಗೊಂಡಂತ ಹಿನ್ನೆಲೆಯಲ್ಲಿ ಬೃಹತ್ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದು. ಈ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳಿಂದಲೂ ಜನರಿಗೆ ಆಹ್ವಾನ ಪತ್ರಿಕೆಯನ್ನು ನೀಡುವ ನಿಟ್ಟಿನಲ್ಲಿ ಇಂದು ಬಹುಜನ ಸಂಘಟನೆಗಳ ಒಕ್ಕೂಟ ನಗರದ ಪ್ರವಾಸಿ ಮಂದಿರದಲ್ಲಿ ಆಹ್ವಾನ ಪತ್ರಿಕೆಯನ್ನು ಸಂಸ್ಥಾಪಕ ಅಧ್ಯಕ್ಷ ಡಾಕ್ಟರ್ ಸಂಗಸಂದ್ರ ವಿಜಯ್ ಕುಮಾರ್ ಅಧ್ಯಕ್ಷತೆಯಲ್ಲಿ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಪ್ರತಿ ವರ್ಷ ಜನವರಿ 1ರಂದು ದೇಶಾದ್ಯಂತ ಹಬ್ಬದಂತೆ ಆಚರಣೆ ಮಾಡುತ್ತಾರೆ ಆದರೆ ಆ ಆಚರಣೆಯು ದೇವಾಲಯಗಳಿಗೆ ಭೇಟಿ ನೀಡಿ ವಿವಿಧ ಪೂಜೆಗಳನ್ನು ಮಾಡಿಸುವುದು ಹಾಗೂ ವಿವಿಧ ಮನರಂಜನೆ ಕಾರ್ಯಕ್ರಮಗಳನ್ನು ಆಯೋಜಿಸುವುದು ,ಕುಣಿಯುವುದು, ಕುಪ್ಪಳಿಸುವುದು ಇದು ಇಂದಿನ ಜನರ ಚಾಳಿಯಾಗಿದ್ದು. ನಿಜವಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳು ಮಾಡಬೇಕಾದಂತ ಆಚರಣೆ ಇದಲ್ಲ ಏಕೆಂದರೆ ಕೇವಲ 500 ಜನ ಸೈನಿಕರನ್ನು ಒಳಗೊಂಡಂತ ಮೆಹರ್ ತಂಡವು ಸಾವಿರಾರು ಸಂಖ್ಯೆಯ ಮರಾಠ ಪೇಶ್ವೆಗಳ ವಿರುದ್ಧ ಹೋರಾಡಿ ವಿಜಯವನ್ನು ಸಾಧಿಸಿದಂತಹ ದಿನವನ್ನು ಭೀಮ ಕೋರೆಂಗಾವ್ ಗೌರವ ಸೂಚಕ ಆಚರಣೆಯಾಗಿ ಬೇಕಾಗಿದೆ. ಯುವಕರು ,ವಿದ್ಯಾರ್ಥಿಗಳು ತಮ್ಮ ನಿಲುವನ್ನು ಸರಿ ದಾರಿಗೆ ತಂದು ಅವಿದ್ಯಾವಂತರನ್ನು ಸಹ ಮುಂದಿನ ದಿನಗಳಲ್ಲಿ ಏನು ಈ ಹೋರಾಟದ ಇತಿಹಾಸವನ್ನು ಜನರ ಮುಂದೆ ಇಡುವಂತ ಕೆಲಸ ಮಾಡಬೇಕು. ಇಂದು ಸಂವಿಧಾನ ಇಲ್ಲದಿದ್ದರೆ ಈ ದೇಶದ ಸ್ಥಿತಿಗತಿಗಳೇನು ಮತ್ತು ಅಸ್ಪೃಶ್ಯತೆಯು ತಾರಕಕ್ಕೇರಿದಂತ ಸಂದರ್ಭದಲ್ಲಿ ದೇಶದ ಮೂಲ ನಿವಾಸಿಗಳ ಸ್ವಾಭಿಮಾನದ ಕಿಚ್ಚು ಅವರ ಹೋರಾಟ. ಇಂದಿನ ಹಾಗೂ ಮುಂದಿನ ಪೀಳಿಗೆಗೆ ತಿಳಿಯಬೇಕಾದರೆ ನಿಜವಾದ ಆಚರಣೆ ಯಾವುದಾಗಬೇಕೆಂದು ಪ್ರಶ್ನಿಸಿದರು. ತಾಲೂಕಿನಾದ್ಯಂತ ಇರುವಂತಹ ಪ್ರತಿಯೊಬ್ಬ ಬಾಬಾಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳು ಒಂದಾಗಿ ಯಾವುದೇ ರಾಜಕೀಯ ಪಕ್ಷಗಳಗಳಿಗೆ ಸೀಮಿತವಾಗಿರದೆ ಎಲ್ಲಾ ದಲಿತಪರ ಸಂಘಟನೆಗಳುಕಾರ್ಯ ಕ್ರಮದ ಆಯೋಜಕರೆಂದೆ ಭಾವಿಸಿ. ಫೆಬ್ರವರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕೆಂದು ತಾಲೂಕಿನ ಸಮಸ್ತ ಜನತೆಯಲ್ಲಿ ವಿನಂತಿಸಿದರು 18ರಂದು ನಡೆಯುತ್ತಿರುವ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬೇಕೆಂದು ತಾಲೂಕಿನ ಸಮಸ್ತ ಜನತೆಯಲ್ಲಿ ವಿನಂತಿಸಿದರು.

ಈ ಸಂದರ್ಭದಲ್ಲಿ ಬಹುಜನ ಸಂಘಟನೆಗಳ ಒಕ್ಕೂಟ ರಾಜ್ಯ ನಾಯಕ ವೇಮಗಲ್ ಮುರಳಿ, ಜಿಲ್ಲಾ ಮುಖಂಡರು ಛಲವಾದಿ ಶಂಕರ್, ರೆಬೆಲ್ ಜನಾರ್ಧನ್ ,ಕೃಷ್ಣಮೂರ್ತಿ, ಜಮ್ಮನಹಳ್ಳಿ ಜಗನ್, ಮೈನಾರಿಟಿ ಮುಖಂಡ ಕಲೀಮ್, ತಾಲೂಕು ಮುಖಂಡರಾದ ಜೈ ಭೀಮ್ ಗಂಗಾಧರ್, ತಾಯಲೂರು ನಾಗರಾಜ್, ಶಾಮಣ್ಣ, ಪವನ್, ಸುಲ್ತಾನ್, ಪಳನಿ, ಮುದಿಗೆರೆ ರಾಜಪ್ಪ, ಮೇಲೇರಿ ಶ್ರೀನಿವಾಸ್, ಕಮ್ಮದಟ್ಟಿ ಶಿವಣ್ಣ ,ಮಹಿಳಾ ಮುಖಂಡರಾದ ಪುಟ್ಟೇನಹಳ್ಳಿ ಈಶ್ವರಮ್ಮ, ಅಮರಮ್ಮ ,ಕಾಡೇನಹಳ್ಳಿ ಈಶ್ವರಮ್ಮ, ಸೇರಿದಂತೆ ತಾಲೂಕಿನ ಹಲವಾರು ದಲಿತ ಪರ ಮುಖಂಡರು ಹಾಗೂ ಭೋಜನ ಸಂಘಟನೆಗಳ ಒಕ್ಕೂಟದ ಹಲವಾರು ಪದಾಧಿಕಾರಿಗಳು ಭಾಗವಹಿಸಿದ್ದರು

# ಮುಂದುವರಿದ ಧರಣಿ ಸತ್ಯಾಗ್ರಹ



**ಚೇಳೂರು:** ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚೇಳೂರು ಪಟ್ಟಣದ ತಾಲ್ಲೂಕು ಕಚೇರಿಯ ಆವರಣದಲ್ಲಿ ದಲಿತ ಸಂಘರ್ಷ ಸಮಿತಿಯು ಅನಿರ್ಧಿಷ್ಟಾವಧಿ ಧರಣಿ ಸತ್ಯಾಗ್ರಹ ವನ್ನು ಮಂಗಳವಾರ ವು ಸಹ ಮುಂದುವರಿದಿದೆ.

ಈ ಸಂದರ್ಭದಲ್ಲಿ ಧರಣಿ ಸತ್ಯಾಗ್ರಹವನ್ನು ಉದ್ದೇಶಿಸಿ ಮುಖಂಡ ಜಲಪಿಗಾರಿಪಲ್ಲಿ ಜಿ.ನರಸಿಂಹಪ್ಪ ಮಾತನಾಡಿ ಚೇಳೂರು ತಾಲ್ಲೂಕು ರಾಜ್ಯದಲ್ಲಿ ದಸಸಂ ವತಿಯಿಂದ ಒಂಬತ್ತು ದಿನಗಳಿಂದ ಅನಿರ್ದಿಷ್ಟ ದರಣಿ ನಡೆಸುತ್ತಿದ್ದರು ಇದುವರೆಗೂ ಯಾವುದೇ ರೀತಿಯ ಕ್ರಮ ಸರ್ಕಾರ ಕೈಗೊಳ್ಳದೇ ಇರುವುದು ನೋವಿವ ಸಂಗತಿ ಎಂದು ಸರ್ಕಾರದ ವಿರುದ್ಧವಾಗಿ ಬೇಸರ ವ್ಯಕ್ತಪಡಿಸಿದರು

ಚೇಳೂರು ಘೋಷಣೆಯಾಗಿ ಸುಮಾರು ಕಳೆಯುತ್ತಿದೆ.ಆದರೆ ಚೇಳೂರು ತಾಲ್ಲೂಕು ಅಭಿವೃದ್ಧಿಗೆ ಸಂಬಂದಿ ಜಿಲ್ಲಾಡಳಿತ ಮೌನ ವಹಿಸಿದೆ. ಚೇಳೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಎಲ್ಲಾ ತಾಲ್ಲೂಕು ಸಂಕೀರ್ಣ ಕಚೇರಿಗಳು ಕೂಡಲೇ ಪ್ರಾರಂಭಿಸಬೇಕು. ನಾಲ್ಕು ಐದು ವರ್ಷಗಳೇ ಚೇಳೂರು ತಾಲ್ಲೂಕು ವ್ಯಾಪ್ತಿಯಲ್ಲಿ ಇರುವ ದಲಿತರ ಭೂಮಿ ಮತ್ತು ವಸತಿ ವಂಚಿತರಿಗೆ ತಕ್ಷಣವೇ ಭೂಮಿ ಮತ್ತು ವಸತಿ ಕಲ್ಪಿಸಬೇಕು.ದಲಿತ ಜನರು ಸ್ಮಶಾನಗಳನ್ನು ಒತ್ತುವರಿ ಮಾಡಿರುವವರ ವಿರುದ್ಧ ಕ್ರಮ ಕೈಗೊಂಡು ದಲಿತರ ಸ್ಮಶಾನಗಳನ್ನು ಬಿಡಿಸಿಕೊಡಬೇಕು ದಲಿತರ ವಸತಿ ನಿವೇಶನೆಗಳನ್ನು ಸರ್ಕಾರ ಮಂಜೂರು ಮಾಡಿಕೊಡಬೇಕು.

ಚೇಳೂರು ಸರ್ವೆ ನಂಬರ್ ಗಳು ರಿಜಿಸ್ಟರ್ ಆಗಿದೆ ಸುಮಾರು ಎಂಟು ತಿಂಗಳ ಕಳೆದರೂ ಇದುವರೆಗೂ ರಿಜಿಸ್ಟರ್ ಆಗಿದೆ ರೈತಾಪಿ ಜನ ಕಸ್ಟಕ್ಕೆ ಸಿಲುಕಿದ್ದಾರೆ ಶಿಗ್ರ ರಿಜಿಸ್ಟರ್ ಮಾಡಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು

ಚೇಳೂರು ತಾಲ್ಲೂಕಿನ ಪುಲ್ಲಗಲ್ಲು ಗ್ರಾಮದಲ್ಲಿ ಸರ್ವೆ ಈ ಗ್ರಾಮದ ದಲಿತರಿಗೆ ಖಾಲಿ ನಿವೇಶಗಳನ್ನು ಹಂಚಬೇಕು. ಅದೇ ರೀತಿ ದಲಿತರ ಮೇಲೆ ದೌರ್ಜನ್ಯಗಳನ್ನು ತಡೆಯಬೇಕು. ದಲಿತರಿಗೆ ಕಾಲೋನಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂದು ನೂತನ ಚೇಳೂರು ತಾಲ್ಲೂಕು ಸಂಕಿರಣ ಚೇಳೂರಿನ ಪಟ್ಟಣದಲ್ಲೇ ನಿರ್ಮಿಸ ಬೇಕೆಂದು ಒತ್ತಾಯಿಸಿದರು.

ಸತ್ಯಾಗ್ರಹದಲ್ಲಿ ಅನೇಕ ಮುಖಂಡರು ವಿವಿಧ ಗ್ರಾಮಗಳ ಮೂಲ ಸೌಲಭ್ಯಗಳನ್ನು ಈಡೇರಿಸಲು ಬೇಡಿಕೆಗಳನ್ನು ಧರಣಿ ಸತ್ಯಾಗ್ರಹದಲ್ಲಿ ಮುಂದಿಟ್ಟರು. ಧರಣಿ ಸತ್ಯಾಗ್ರಹದಲ್ಲಿ ಅನೇಕ ದಲಿತ ಮುಖಂಡರು ಸರಣಿಯಲ್ಲಿ ಪಾಲ್ಗೊಂಡಿದ್ದರು.

ತಮಟೆ ಹೊಡೆಯುವ ಮೂಲಕ ಅಂಬೇಡ್ಕರ್ ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ದಲಿತ ಟಿ.ಎನ್.ಶ್ರೀನಿವಾಸ್, ಚೇಳೂರು ಗ್ರಾಮ ಪಂಚ್ಯುತಿ ಮಾಜಿ ಅಧ್ಯಕ್ಷ ಎಂ.ವೆಂಕಟರವಣ, ಡಿ.ವಿ.ವೆಂಕ ಟೇಶ್, ಅಂಗಡಿ ವೆಂಕಟರವಣ. ಶ್ರೀನಿವಾಸ್, ಆರ್.ವಿ.ವೆಂಕಟೇಶ್, ಶ್ರೀನಿವಾಸ್, ಆದಿನಾರಾಯಣ, ವೆಂಕಟರಾಯಪ್ಪ ಗೋವಿಂದಪ್ಪ, ಪಾಳ್ಯಕತೆ ವೆಂಕಟರವಣ, ಮಂಜುನಾಥ, ಎಂ.ಈಶ್ವರಪ್ಪ, ಹಲವಾರು ಮುಖಂಡರು ಭಾಗವಹಿಸಿದ್ದರು.

# ಅಧಿಕಾರವಹಿಸಿಕೊಂಡ ತಹಶೀಲ್ದಾರ್



**ಮಾಲೂರು:** ಮಾಲೂರು ತಾಲ್ಲೂಕು ಕಚೇರಿಗೆ ನೂತನವಾಗಿ ಅಧಿಕಾರ ವಹಿಸಿಕೊಂಡಿರುವ ತಹಶೀಲ್ದಾರ್ ಎಂ.ವಿ.ರೂಪ ಅವರಿಗೆ ನಮ್ಮ ಕರ್ನಾಟಕ ಸೇನೆ ಪದಾಧಿಕಾರಿಗಳು ಅಭಿನಂಧಿಸಿದರು.

ನಮ್ಮ ಕರ್ನಾಟಕ ಸೇನೆ ರಾಜ್ಯ ಪ್ರದಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ಅವರ ಮಾರ್ಗದರ್ಶನದಲ್ಲಿ ಜಿಲ್ಲಾ ಸಲಹಾ ಸಮಿತಿಯ ಎಸ್.ಎಂ.ರಾಜು, ತಾಲ್ಲೂಕು ಅಧ್ಯಕ್ಷ ಮಾದನಹಟ್ಟಿ ರವಿಕುಮಾರ್ ಅವರ ನೇತೃತ್ವದಲ್ಲಿ ಬೇಟಿ ನೀಡಿ ತಹಶೀಲ್ದಾರ್ ಎಂ. ವಿ.ರೂಪ ಅವರನ್ನು ಅಭಿನಂದಿಸಿ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ರೈತರಿಗೆ, ಸಾರ್ವಜನಿಕರಿಗೆ ಅಲೆದಾಡಿಸದೇ ಶೀಘ್ರವಾಗಿ ಕೆಲಸಗಳನ್ನು ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ರಾಜ್ಯ ಸಂಚಾಲಕ ಕೋಡೂರು ಗೋಪಾಲ್, ಉಪಾಧ್ಯಕ್ಷ ಆಟೋ ಶ್ರೀನಿವಾಸ್, ತಾಲ್ಲೂಕು ಅಧ್ಯಕ್ಷೆ ಮುನಿರತ್ನಮ್ಮ, ಪ್ರದಾನ ಕಾರ್ಯದರ್ಶಿ ಕೆ.ಎನ್.ಜಗದೀಶ್, ಗೌರವಾಧ್ಯಕ್ಷ ಚನ್ನಕೃ?, ಕಾರ್ಯಾಧ್ಯಕ್ಷ ದ್ಯಾಪಸಂದ್ರ ಅಮರ್, ಖಜಾಂಚಿ ಶ್ಯಾಮ್, ಮಂಗಾಪುರ ಸ್ವಾಮಿ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

# ನಗರದಲ್ಲಿ ಖಾಸಗಿ ಬಸ್ ಕಳವು

ಚಾಮರಾಜನಗರ: ನಗರದ ಎಲ್‌ಐಸಿ ಕಚೇರಿ ಬಳಿ ನಿಲ್ಲಿಸಿದ್ದ ಖಾಸಗಿ ಬಸ್ ಇಂದು ಮುಂಜಾನೆ ಕಳವಾಗಿದೆ.

ಸೋಮವಾರ ರಾತ್ರಿ ಬಸ್ ಅನ್ನು ಎಲ್ ಐಸಿ ಕಚೇಲ ಬಳಿ ನಿಲ್ಲಿಸಿ ತೆರಳಿದ್ದಾರೆ.

ಇದನ್ನು ಗಮನಿಸಿದ್ದ ಬಿದುರು ಇಂದು ಮುಂಜಾನೆ 1 ಗಂಟೆ ಸಮಯದಲ್ಲಿ ಕೆ.ಎ.0 5599 ನಂಬರ್‌ನ ವಜ್ರ ಸಂಸ್ಥೆಯ ಖಾಸಗಿ ಬಸ್ ಅನ್ನು ಕಳವು ಮಾಡಿದ್ದಾರೆ.

ಬಸ್ ಅನ್ನು ಓಡಿಸಿಕೊಂಡು ಹೋಗುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಈ ಸಂಬಂಧ ಬಸ್‌ನ ಮಾಲೀಕರು ಪಟ್ಟಣ ಠಾಣೆಯ ಪೊಲೀಸರಿಗೆ ಮಾಹಿತಿ ಪ್ರಕರಣ ದಾಖಲು ಮಾಡಿದ್ದಾರೆ.



# ಚಾಮುಲ್ ಅಧ್ಯಕ್ಷನಾಗಿ ಉತ್ತಮ ಕೆಲಸ ಮಾಡಿದ್ದೇನೆ:ವೈ.ಸಿ.ನಾಗೇಂದ್ರ

ಚಾಮರಾಜನಗರ.ಜ.28:– ಚಾಮುಲ್ ಅಧ್ಯಕ್ಷನಾಗಿ 2 ವರ್ಷ 2 ತಿಂಗಳ ಅವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದೇನೆ ಎಂದು ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ.ನಾಗೇಂದ್ರ ತಿಳಿಸಿದರು.

ಚಾಮರಾಜನಗರದಲ್ಲಿ ಸುದ್ದೊಘೋಷ್ಠಿಯಲ್ಲಿ ಮಾತನಾಡಿದ ಮಾಜಿ ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ, ಅಧ್ಯಕ್ಷನಾದ ಸಂದರ್ಭದಲ್ಲಿ ಒಂದು ಲೀಟರ್ ಹಾಲಿಗೆ 26 ರೂ. ಇತ್ತು. ಆ ನಂತರ ಪಾಲಿನ ದರವನ್ನು 5 ಬಾರಿ ಏರಿಕೆ ಮಾಡಲಾಗಿದೆ. ಅಲ್ಲದೇ 40 ಸಾವಿರ ಲೀ. ಇದ್ದ ಉತ್ಪಾದನೆಯನ್ನು, 60 ಸಾವಿರ ಶೇ.ಗೆ ಏಕೆ ಮಾಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ತಮ್ಮ ಅಧಿಕಾರವಧಿಯಲ್ಲಿ ಜಿಲ್ಲೆಯ ಪಾಲು ಉತ್ಪಾದಕರ ಧ್ವನಿಯಾಗಿ ಕೆಲಸ ಮಾಡಿದ್ದೇನೆ. ಅಲ್ಲದೇ ಕಾಲ ಕಾಲಕ್ಕೆ ಹಾಲು ಉತ್ಪಾದಕರಿಗೆ ಹಣ ನೀಡಲು ಕ್ರಮವಹಿಸಲಾಗಿತ್ತು. ನಾನು ಚಾಮುಲ್ ಅಧ್ಯಕ್ಷನಾಗಿ ಉತ್ತಮವಾಗಿ ಕೆಲಸ ಮಾಡಲು ಸಹಕರಿಸಿದ ಯಳಂದೂರು ತಾಲೂಕಿನ ಪಾಲು ಉತ್ಪಾದಕರು, ನನ್ನ ಆಯ್ಕೆಗೆ ಕಾರಣೀಭೂತರಾದ ಬಿಜೆಪಿ ಪಕ್ಷದ ವರಿಷ್ಠರಿಗೆ ಕೃತಜನೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ನನ್ನ ವಿರುದ್ಧ ಅವಿಶ್ವಾಸ ವಾತಾವರಣ ಇತ್ತು. ಇಳಿಕೆ ಮಾಡಿದ್ದ । ರೂ. ದರವನ್ನು ಏರಿಕೆ ಮಾಡುವ ನಿಟ್ಟಿನಲ್ಲಿ ಮುಂದಾಗಿದ್ದೆ. ಆದರೆ, ಕೆಲವರು ಸಸ್ಯಂತ್ರ ನಡೆಸಿ ಸಭೆ ನಡೆಸದಂತೆ ಮಾಡಿದರು. ಇದರಿಂದ ರೈತರಿಗೆ ಅನಾನುಕೂಲವಾಗಿದೆ. ಮುಂದಿನ ದಿನಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು ಸಭೆ ಕರೆದು ರೂ, 1–2 ರೂ ಏರಿಕೆ ಮಾಡುವ ನಿರೀಕ್ಷೆ ಇದೆ ಎಂದರು.

ಚಾಮುಲ್‌ಗೆ ಸರ್ಕಾರದಿಂದ ಬರಬೇಕಾದ ಅನುದಾನ ಬಂದಿಲ್ಲ, ಇದರಿಂದಾಗಿ ಸಾಲ ಜಾಸ್ತಿ ಮಾಡಲಾಗಿದ್ದು ಬಡ್ಡಿ ಕಟ್ಟಲಾಗುತ್ತಿದೆ. ಹಾಲು ಮಾರಾಟ ಕೂಡ ಕಡಿಮೆ ಇವೆ, ಹಾಲ ಮಾರಾಟ ಜಾಸ್ತಿಯಾದರೆ ಒಕ್ಕೂಟಕ್ಕೆ ಲಾಭ ಬರುತ್ತದೆ, ಮುಂದಿನ ದಿನಗಳಲ್ಲಿ ಚಾಮುಲ್ ಅಧ್ಯಕ್ಷ ರಾಗುವವರಿಗೆ ಸಂಪೂರ್ಣ ಸಹಕಾರ ನೀಡುತ್ತೇನೆ ಎಂದು ಹೇಳಿದರು.

# ಅಸ್ಪೃಶ್ಯತೆ ತೊಡೆದು ಹಾಕಲು ಮುಂದಾಗಿ: ಸ್ವಾಮೀಜಿ

ಚಾಮರಾಜನಗರ: ಅಸ್ಪಶ್ಯತೆ ಎನ್ನುವುದು ಮಾನಸಿಕ ಕಾಯಿಲೆಯಾಗಿದ್ದು ಇದನ್ನು ತೊಡೆದು ಹಾಕಲು ಮುಂದಾಗಬೇಕು ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ್ ಸ್ವಾಮೀಜಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಕರೆ ನೀಡಿದರು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ನಡೆದ ಅಸ್ಪೃಶ್ಯತಾ ನಿರ್ಮೂಲನ ಜಾಗೃತಿ ಮತ್ತು ವಿಚಾರಗೋಷ್ಠಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಾತಿ ಪದ್ಧತಿಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಬಸವಣ್ಣನವರು 12ನೇ ಶತಮಾನದಲ್ಲಿ ಗರ್ಭಗುಡಿ ಸಂಸ್ಕೃತಿಯನ್ನು ದೇವರು ಪುರೋಹಿತ ಪದ್ಧತಿಯನ್ನು ವಿರೋಧಿಸಿ ಲಿಂಗಪೂಜೆಯನ್ನು ಆರಂಭಿಸಿದರು ಎಂದರು.

ಶಿಕ್ಷಣ ಎಂಬುದು ಆಯುಧವಾಗಿದೆ. ಶಿಕ್ಷಣ ಪಡೆದವರು ಹುಲಿಯ ಹಾಲು ಇದ್ದ ಹಾಗೇ ಇದನ್ನು ಕುಡಿದವರು ಘರ್ಜಿಸಬೇಕು, ಹಾಗಾಗಿ ಉತ್ತಮ ಶಿಕ್ಷಣವನ್ನು ಪಡೆಯಬೇಕು, ನಮಗೆ ಬೇಕಾಗಿರುವುದು ಗರ್ಭಗುಡಿಯಲ್ಲಿ ಗ್ರಂಥಾಲಯ ಸಂಸ್ಕೃತಿ, ಆದ್ದರಿಂದ ಅಂಬೇಡ್ಕರ್ ಅವರ ಸಮಾವಾದ, ಬಸವಣ್ಣ ಮತ್ತು ಕುವೆಂಪು ಅವರ ಮಾನವತವಾಡವನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂಬೇಡ್ಕರ್ ಅವರು ಪರಿಶಿಷ್ಟ ಜಾತಿ ಮತ್ತು ವರ್ಗದ ಹೆಣ್ಣು ಮಕ್ಕಳಿಗೆ ಮಾತ್ರ ಸೌಲಭ್ಯ ಕಲ್ಪಿಸಿಲ್ಲ. ಇಡೀ ಸ್ತ್ರೀ ಕುಲಕ್ಕೆ ಸಂವಿಧಾನದಲ್ಲಿ ಅವಕಾಶ ಸಮಾನ ಹಕ್ಕುಗಳನ್ನು ನೀಡಿರುವುದರಿಂದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಆದ್ದರಿಂದ ಎಲ್ಲ ಮಹಿಳೆಯರು ಅಂಬೇಡ್ಕ ಅವರನ್ನು ಸ್ಮರಣೆ ಮಾಡಬೇಕು ಎಂದರು. ಮುಖ್ಯ ಭಾಷಣಕಾರ ಕೃಷ್ಣಮೂರ್ತಿ ಚಮರಂ ಮಾತನಾಡಿದರು.

ತಹಸೀಲ್ದಾರ್ ಟಿ.ರಮೇಶ್‌ಬಾಬು ಮಾತನಾಡಿದರು. ಕಾರ್ಯಕ್ರಮದಲ್ಲಿ ತಾಪಂ ಇಒ ಷಣ್ಮುಗಂ, ತಾಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಪೊಲೀಸ್ ಇನ್ಸ್‌ಪೆಕ್ಟ ಪರಿಶಿವಮೂರ್ತಿ, ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ, ಸಿಡಿಪಿಒ ಹೇಮಾವತಿ, ಪುರಸಭಾ ಸದಸ್ಯರಾದ ಅಣ್ಣಯ್ಯಸ್ವಾಮಿ, ರಾಜಗೋಪಾಲ್, ಮಾಜಿ ಸದಸ್ಯ ಮಲ್ಲರಾಜು, ಮುಖಂಡರಾದ ಸಿದ್ದಯ್ಯ, ಸುಭಾಷ್ ಮಾಡಹಳ್ಳಿ, ಸೋಮಣ್ಣ, ಮುತ್ತಣ್ಣ, ನಂಜುಂಡಸ್ವಾಮಿ, ರಂಗಸ್ವಾಮಿ, ಎನ್. ಮಲ್ಲೇಶ್ ಸೇರಿದಂತೆ ಇತರರಿದ್ದರು,

# ಮೈಕ್ರೋ ಫೈನಾನ್ಸ್ ಹಾವಳಿ ತಡೆಗೆ ಆಗ್ರಹ




**ಚಾಮರಾಜನಗರ:** ಜಿಲ್ಲೆಯಲ್ಲಿ ಮೈಕೋ ಫೈನಾನ್ಸ್ ಹಾವಳಿ ತಡೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗ ದರ ಸಂಘದ ವತಿಯಿಂದ ಚಾಮರಾಜನಗರದಲ್ಲಿ ಪ್ರಕಟನೆ ನಡೆಯಿತು,

ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾ ರರು ಅಲ್ಲಿಂದ ಮೆರವಣಿಗೆ ಯಲ್ಲಿ ಪಚ್ಚಪ್ಪ ವೃತ್ತ, ಬಿ.ರಾ ಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಸರ್ಕಾರದ ವಿರುದ್ಧ ಪೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜನಗರ ಜಲ್ಲೆಯಲ್ಲಿ ಸಾಕಷ್ಟು ಮೈಕೋ ಫೈನಾನ್ಸಿನ ಹಾವಳಿ ಹೆಚ್ಚಿದ್ದು ಗ್ರಾಮೀಣ ಭಾಗದಲ್ಲಿ ಯುವಕರು ಮತ್ತು ಮಹಿಳೆಯರು ಘನತೆಗೆ ಕುಂದುಂಟಾಗಿ ಮಾನಹಾನಿಯಾಗುವ ಪ್ರಕರಣದಿಂದ ಮನನೊಂದು ಆತ್ಮಹತ್ಯೆಗೆ ಶರಣಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಆದ್ದರಿಂದ ಆತ್ಮಹತ್ಯೆಗೆ ಕಾರಣರಾಗುವ ಮೈಕ್ರೋ ಫೈನಾನ್ಸ್ ರವರ ದಬ್ಬಾಳಿಕೆಗೆ ತಕ್ಷಣ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಚಾಮರಾಜನಗರ ತಾಲ್ಲೂಕಿನ ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಚಿನ್ನ ಬಿಡಿಸಿ ಕೊಡುವಲ್ಲಿ ಕಾನೂನು ಅಡೆತಡೆಗಳನ್ನು ಸರಿಪಡಿಸಿ ತಕ್ಷಣ ಚಿನ್ನ ಕೊಡಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮೀಣ ಭಾಗದಲ್ಲಿ ನಗರ ಪ್ರದೇಶಗಳಲ್ಲಿ ಆನ್‌ಲೈನ್ ಗೆಮ್‌ಗಳು ಯುವಕರನ್ನು ಸಾಲದ ಸೂಲಕ್ಕೆ ತರುತ್ತಿವೆ. ಇದರಿಂದ ಸಾಕಷ್ಟು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ಕೂಡಲೇ ಅನ್‌ಲೈನ್ ಗೇಮ್‌ಗಳನ್ನು ನಿಲ್ಲಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದರು.

ಪ್ರತಿಭಟನೆಯಲ್ಲಿ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು, ಪದಾಧಿಕಾರಿಗಳಾದ ಹರ್ಷ, ಮಂಜು, ಮಹೇಂದ್ರ, ಶಾಂತರಾಜು, ಕುಮಾರ್, ಬಸವರಾಜಪ್ಪ, ಪ್ರಭುಸ್ವಾಮಿ, ಪುಷ್ಪಲತಾ, ಕಮಲಮ್ಮ, ರಾಜಮ್ಮ, ಮಾದಲಾಂಬಿಕೆ, ಜಗದಾಂಬಿಕೆ, ಕರು, ಮಹಿಳೆಯರು ಆತ್ಮಹತ್ಯೆಗೆ ನಾಗರತ್ನ ಸೇರಿದಂತೆ ಇತರರು ಭಾಗವಹಿಸಿದ್ದರು.

# ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಬೇಕು

**ಶಿಡ್ಲಘಟ್ಟ:** ವಿಶೇಷ ಚೇತನ ಮಕ್ಕಳ ಸೇವೆಯ ಮೂಲಕ ನರನ ಸೇವೆಯನ್ನು ಮಾಡಿ ಜೀವನ ಸಾರ್ಥಕತೆ ಪಡೆಯಬೇಕು ವಿಶೇಷಚೇತನರು ತಮ್ಮಲ್ಲಿ ದೈವದತ್ತವಾಗಿ ಇರುವ ಕೌಶಲ ಹಾಗೂ ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಆಕಾಶದೆತ್ತರಕ್ಕೂ ಬೆಳೆಯಬಲ್ಲರು ಎಂದು ಕ್ಷೇತ್ರಶಿಕ್ಷಣಾಧಿಕಾರಿ ಸಿ.ಎ.ನರೇಂದ್ರಕುಮಾರ್ ತಿಳಿಸಿದರು

ನಗರದ ವಾಸವಿ ಕಲ್ಯಾಣಮಂಟಪದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸಮದೃಷ್ಟಿ ಕ್ಷಮತಾ ವಿಕಾಸ ಮತ್ತು ಅನುಸಂಧಾನಮಂಡಲ, ನವ ಜೀವನಸಂಸ್ಥೆ, ಗ್ರಾಮಾಂತರ ಟ್ರಸ್ಟ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರ, ಎರಾ ಸಂಸ್ಥೆ, ರಾಯರಕಿರಣಗಳ ಸಂಯುಕ್ತ ಆಶ್ರಯದಲ್ಲಿ ಸಮನ್ವಯ ಶಿಕ್ಷಣದಡಿ ಹಮ್ಮಿಕೊಳ್ಳಲಾಗಿದ್ದ ಶಾಲಾಮುಖ್ಯಸ್ಥರು, ವಿಕಲಚೇತನ ಮಕ್ಕಳ ಪೋಷಕರು, ಆಡಳಿತವ್ಯವಸ್ಥೆಯ ಅರಿವು ಮತ್ತು ಜಾಗೃತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಲಾಖೆಯು ಸಮನ್ವಯ ಶಿಕ್ಷಣದಡಿ ವಿಕಲಚೇತನರ ಶೈಕ್ಷಣಿಕ ಅಭಿವೃದ್ಧಿಗಾಗಿ ಸಾಕಷ್ಟು ಸವಲತ್ತುಗಳನ್ನು ಒದಗಿಸುತ್ತಿದ್ದು ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕಿದೆ. ಶಿಕ್ಷಕರು, ಸಮುದಾಯವು ವಿಕಲಚೇತನರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಬೇಕು ಎಂದು ಹೇಳಿದರು.

ತಾಲ್ಲೂಕು ಪ್ರೌಢಶಾಲಾ ಸಹಶಿಕ್ಷಕರ ಸಂಘದ ಕಾರ್ಯದರ್ಶಿ ಎಚ್.ಎಸ್.ರುದ್ರೇಶಮೂರ್ತಿ ಮಾತನಾಡಿ, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸಮನ್ವಯ ಶಿಕ್ಷಣದ ಅಗತ್ಯ, ಮಕ್ಕಳಲ್ಲಿನ 21 ವಿವಿಧ ಬಗೆಯ ನ್ಯೂನತೆಗಳನ್ನು ಗುರುತಿಸಿ ಸ್ಯಾಟ್ಸ್ ಮತ್ತು ಯುಡೈಸ್ ಪ್ಲಸ್‌ನಲ್ಲಿ ಅಪ್‌ಡೇಟ್ ಮಾಡುವುದು,ಸರ್ಕಾರ ಮತ್ತು ಸಂಘ ಸಂಸ್ಥೆಗಳಿಂದ ಸಿಗಬಹುದಾದ ಸವಲತ್ತುಗಳು ಮತ್ತು ಭತ್ಯೆಗಳು, ವೈದ್ಯಕೀಯ ಸವಲತ್ತುಗಳು, ಯುಡಿಐಡಿ ಕಾರ್ಡ್ ಮಾಡಿಸುವ ಮಹತ್ವ ಮತ್ತು ವಿಧಾನ, ತಾಲ್ಲೂಕು ಬಿಆರ್‌ಸಿ ಕೇಂದ್ರದಲ್ಲಿ ಲಭ್ಯಸಂಪನ್ಮೂಲಗಳು ಅರಿವು ಶಿಕ್ಷಕರಿಗೆ ಮತ್ತು ವಿಕಲಚೇತನರ ಪೋಷಕರಿಗೆ ಇರಬೇಕು,ಶಾಲೆಗಳಲ್ಲಿ ವಿಕಲಚೇತನರ ಅಗತ್ಯತೆಗಳ ಮ್ಯಾಪಿಂಗ್ ಮಾಡಿ ರ್‍ಯಾಂಪ್, ರೈಲಿಂಗ್ಸ್ ಅಳವಡಿಕೆ, ಶೌಚಾಲಯದ ವಿಶೇಷ ಕ್ರಮ, ಶ್ರವಣದೋಷವುಳ್ಳವರಿಗೆ ಅಗತ್ಯ ವ್ಯವಸ್ಥೆ, ಸಮಾನ ಶಿಕ್ಷಣ ಒದಗಿಸಲಾಗುವುದು,

ವಿಶೇಷಚೇತನ ಮಕ್ಕಳ ಹಿತಕ್ಕಾಗಿ ಶಿಕ್ಷಣ ಇಲಾಖೆ ಮತ್ತು ಇತರೆ ಸರ್ಕಾರಿ ಇಲಾಖೆಗಳ ಸಮನ್ವಯತೆಯಲ್ಲಿ ಹಿತರಕ್ಷಣಾ ಸಮಿತಿ ಅಸ್ತಿತ್ವಗೊಳಿಸಿ ಕಾರ್ಯಗತಗೊಳಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಸಮದೃಷ್ಟಿ ಕ್ಷಮತಾವಿಕಾಸ ಮತ್ತು ಅನು ಸಂಧಾನಮಂಡಲ ಕರ್ನಾಟಕ ಪ್ರಾಂತ ಅಧ್ಯಕ್ಷ ಕೇಶವಮೂರ್ತಿ ಮಾತನಾಡಿ, ಅದೃಢ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ದಿವ್ಯಾಂಗರ ಪಾತ್ರವೂ ಬಹುಮುಖ್ಯವಾದುದು,ತಾಲ್ಲೂಕಿನಲ್ಲಿ ದಿವ್ಯಾಂಗರ ಸೇವಾಕೇಂದ್ರ ಆರಂಭಿಸಿದಲ್ಲಿ ಅಗತ್ಯ ಎಲ್ಲಾ ಸಹಕಾರ ನೀಡಲಾಗುವುದು, ತಾಲ್ಲೂಕಿನಲ್ಲಿ ವಿಕಲಾಂಗ ಮಕ್ಕಳ ಅಭಿವೃದ್ಧಿಗೆ ತೆಗೆದುಕೊಂಡಿರುವ ಕಾರ್ಯಗಳು ಶ್ಲಾಘನೀಯ ಎಂದರು.



ಆರ್ಯವೈಶ್ಯ ಮಂಡಳಿಯ ಕಾರ್ಯದರ್ಶಿ ರೂಪಸಿರಮೇಶ್ ಮಾತನಾಡಿ, ಸೇವೆ ಮತ್ತು ತ್ಯಾಗಗಳು ಭಾರತೀಯ ಸಂಸ್ಕೃತಿಯ ಮೂಲಸಿದ್ಧಾಂತವಾಗಿದ್ದು ಶೋಷಿತರು, ದಲಿತರು, ದಿವ್ಯಾಂಗರ ಏಳಿಗೆಗೆ ಎಲ್ಲರೂ ಶ್ರಮಿಸಬೇಕು ಎಂದರು.

ಬಿಆರ್‌ಸಿ ನಮನ್ವಯಾಧಿಕಾರಿ ಲಕ್ಷ್ಮಿನಾರಾಯಣ್ ಮಾತನಾಡಿ, ಎಲ್ಲಾ ಶಾಲೆಗಳಿಗೂ 21 ವಿವಿಧ ನ್ಯೂನತೆಗಳ ಪಟ್ಟಿ, ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಸಿಗಬಹುದಾದ ಇಲಾಖಾ ಸೌಲಭ್ಯಗಳನ್ನೊಳಗೊಂಡ ಭಿತ್ತಿ ಕಾರ್ಡುಗಳನ್ನು ಪ್ರಕಟಿಸಿ ವಿತರಿಸಿದ್ದು ಎಲ್ಲರೂ ಸೇವಾಮನೋಭಾವನೆಯಿಂದ ಕಾರ್ಯಪ್ರವೃತ್ತರಾಗಬೇಕು ಎಂದರು.

ಇದೇ ವೇಳೆ ವಿಕಲಚೇತನ ಮಕ್ಕಳು ಪ್ರದರ್ಶಿಸಿದ ರಾಷ್ಟ್ರಭಕ್ತಿ ತೋರುವ ನೃತ್ಯ ಎಲ್ಲರ ಗಮನಸೆಳೆಯಿತು.

21 ವಿಕಲತೆಯ ವಿಧಗಳು, ಸರ್ಕಾರಿ ಸೌಲಭ್ಯಗಳ ಸಚಿತ್ರ ಕಾರ್ಡುಗಳನ್ನು ಬಿಡುಗಡೆಗೊಳಿಸಲಾಯಿತು,ನವ ಜೀವನಸಂಸ್ಥೆಯ ಅಧ್ಯಕ್ಷ ಬೆಳ್ಳೂಟಿ ಮುನಿರಾಜು ಅವರನ್ನು ಸನ್ಮಾನಿಸಲಾಯಿತು,

ಸ್ವಾಮಿವಿವೇಕನಂದ, ಲೂಯಿಸ್ ಬ್ರೆಂಲ್ , ಸುಭಾಷ್‌ಚಂದ್ರಬೋಸ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು,ವಿಕಲಾಂಗರಿಗೆ ವಿವಿಧ ಸವಲತ್ತುಯಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಬಿಆರ್‌ಸಿ ಕೇಂದ್ರದ ಬಿ.ಎಂ. ಜಗದೀಶ್, ರಾಧಾ, ಚೀಮಂಗಲ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕ ಶಿವಶಂಕರ್, ನವ ಜೀವನಸಂಸ್ಥೆಯ ಅಧ್ಯಕ್ಷ ಬೆಳ್ಳೂಟಿ ಮುನಿರಾಜು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಆರ್.ನಾರಾಯಣಸ್ವಾಮಿ, ಖಜಾಂಚಿ ಸುಂದರಾಚಾರಿ, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕೆಂಪೇಗೌಡ, ನಿರ್ದೇಶಕ ಮಂಜುನಾಥ್, ಬಿಆರ್‌ಪಿ ಕೆ.ಮಂಜುನಾಥ್, ಚಂದ್ರಕಲಾ, ವೇಣುಮಾಧವಿ, ಸಿಆರ್‌ಪಿ ರಮೇಶ್‌ಕುಮಾರ್, ಎರಾ ಸಂಸ್ಥೆಯ ತೆರಪಿಸ್ಟ್ ಪುಷ್ಪಲತಾ, ಕ್ಲಿನಿಕಲ್ ಸೈಕಲಾಜಿಸ್ಟ್ ವಿಜಯಾ, ಫಿಜಿಯೋತೆರಪಿಸ್ಟ್ ವಿಜ್ಞೇಶ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಂಗವಿಕಲರ ಪುನರ್ವಸತಿಕೇಂದ್ರದ ನೋಡಲ್ ಅಧಿಕಾರಿ ಸುನಿಲ್, ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಕ್ಷಮ ಅಧ್ಯಕ್ಷ ಹಾರೋಹಳ್ಳಿ ಚಂದ್ರಪ್ಪ, ಚಿಕ್ಕಬಳ್ಳಾಪುರ ಡಿಡಿಆರ್‌ಸಿಯ ಮೋಹನ್, ಮತ್ತಿತರರು ಹಾಜರಿದ್ದರು.

# ಡಿಎನ್‌ಎ ಪರೀಕ್ಷೆಯ ಗೌರವಕ್ಕೆ ಧಕ್ಕೆ ತರಬಾರದು: ಸುಪ್ರೀಂ



**ನವದೆಹಲಿ:** ಡಿಎನ್‌ಎ ಪರೀಕ್ಷೆಯು ಯಾವುದೇ ವ್ಯಕ್ತಿಯ ಘನತೆ ಮತ್ತು ಗೌಪ್ಯತೆಗೆ ಧಕ್ಕೆ ತರಬಾರದು. ಇದರಿಂದ ಆತನ ಸಾಮಾಜಿಕ ಗೌರವಕ್ಕೂ ಚ್ಯುತಿ ತಂದಂತಾಗುತ್ತದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ತನ್ನ ತಾಯಿಯ ವಿವಾಹೇತರ ಸಂಬಂಧದಿಂದ ಜನಿಸಿದ್ದೇನೆ. ನನ್ನ ಜೈವಿಕ ತಂದೆ ಯಾರು ಎಂದು ತಿಳಿದುಕೊಳ್ಳಲು ವ್ಯಕ್ತಿಯೊಬ್ಬರ ಡಿಎನ್‌ಎ ಪರೀಕ್ಷೆ ನಡೆಸಬೇಕು ಎಂದು ಕೋರಿ 23 ವರ್ಷದ ಯುವಕನೊಬ್ಬ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಉಜ್ಜಲ್ ಭುಯಾನ್ ಅವರಿದ್ದ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿತು.

ಒಬ್ಬ ವ್ಯಕ್ತಿ ತನ್ನ ತಂದೆಯೇ ಎಂದು ತಿಳಿದುಕೊಳ್ಳುವ ಕಾನೂನುಬದ್ಧ ಆಸಕ್ತಿಯು ಇನ್ನೊಬ್ಬರ ಗೌಪ್ಯತೆ ಮತ್ತು ಘನತೆಯ ಹಕ್ಕನ್ನು ಮೀರಬಾರದು. ಇಂತಹ ಪ್ರಕರಣದಲ್ಲಿ ಡಿಎನ್‌ಎ ನಡೆಸಲು ಕೋರುವುದು ವ್ಯಕ್ತಿಯ ಹಕ್ಕಿನ ಚ್ಯುತಿಯಾಗಲಿದೆ. ಯುವಕನ ಮಾಜಿ ತಂದೆಯೇ ನಿಜವಾದ ಜೈವಿಕ ತಂದೆ ಎಂದು ತೀರ್ಪು ನೀಡಿ, ಎರಡು ದಶಕಗಳಿಂದ ನಡೆಯುತ್ತಿದ್ದ ಕಾನೂನು ಸಮರಕ್ಕೆ ಕೋರ್ಟ್ ಇತಿಶ್ರೀ ಹಾಡಿತು.

ಕೇರಳದ ಯುವಕನೊಬ್ಬ, ತನ್ನ ತಾಯಿಯೊಂದಿಗೆ ವಿವಾಹೇತರ ಸಂಬಂಧ ಹೊಂದಿದ್ದ ವ್ಯಕ್ತಿಯನ್ನು ತನ್ನ ತಂದೆಯೇ ಎಂದು ತಿಳಿದುಕೊಳ್ಳಲು ಡಿಎನ್‌ಎ ಪರೀಕ್ಷೆ ನಡೆಸಬೇಕು ಎಂದು ಕೋರಿದ್ದ. ಆದರೆ, ಹೈಕೋರ್ಟ್ ಇದನ್ನು ನಿರಾಕರಿಸಿತ್ತು. ಇದರ ವಿರುದ್ಧ ಯುವಕ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ. ಇತ್ತ ಪ್ರತಿವಾದಿಯಾದ ವ್ಯಕ್ತಿಯೂ ತಾನು ಯುವಕನ ತಂದೆ ಅಲ್ಲ ಎಂದು ನಿರಾಕರಿಸುತ್ತಲೇ ಬಂದಿದ್ದರು. ಆರೋಪದಿಂದ ನನ್ನ ಸಾಮಾಜಿಕ ಗೌರವಕ್ಕೆ ಧಕ್ಕೆ ತಂದಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು.

ಸುಪ್ರೀಂಕೋರ್ಟ್‌ನಲ್ಲಿ ನಡೆದ ವಿಚಾರಣೆಯಲ್ಲಿ, ಯುವಕನು ತಾನು ದೈಹಿಕವಾಗಿ ಬಹು ಸಮಸ್ಯೆಗಳನ್ನು ಹೊಂದಿದ್ದೇನೆ. ಹೀಗಾಗಿ, ತಾಯಿ ಜೊತೆ ವಿವಾಹೇತರ ಸಂಬಂಧ ಹೊಂದಿದ ವ್ಯಕ್ತಿಯನ್ನು ತಂದೆ ಎಂದು ಘೋಷಿಸಿ, ಆತನಿಂದ ಜೀವನಾಂಶ ಕೊಡಿಸಬೇಕು ಎಂದ ಕೋರಿದರು. ಪ್ರತಿವಾದಿ ವಕೀಲರು, ತಮ್ಮ ಕಕ್ಷಿದಾರರಿಗೂ ಯುವಕನಿಗೂ ಸಂಬಂಧವಿಲ್ಲ. ಆತನ ತಾಯಿ ಮತ್ತು ಮಾಜಿ ತಂದೆಯ ಫಲ ಈತ. ಸದ್ಯ ಪೋಷಕರು ದೂರವಾದರೂ, ಈತ ಜನಿಸುವಾಗ ಒಟ್ಟಿಗೆ ಇದ್ದರು. ಹೀಗಾಗಿ, ಈ ಆರೋಪ ನಿರಾಧಾರ ಎಂದು ವಾದಿಸಿದ್ದರು. ಇದನ್ನೆಲ್ಲಾ ಆಲಿಸಿದ ಸುಪ್ರೀಂಕೋರ್ಟ್, ಯುವಕನ ಕಾನೂನಾತ್ಮಕ ಆಸಕ್ತಿಯಿಂದ ವ್ಯಕ್ತಿಯೊಬ್ಬರ ಡಿಎನ್‌ಎ ಪರೀಕ್ಷೆಗೆ ಸೂಚಿಸಲು ಸಾಧ್ಯವಿಲ್ಲ. ಇದು ವ್ಯಕ್ತಿ ಗೌರವಕ್ಕೆ ಧಕ್ಕೆ ತರಲಿದೆ ಎಂದು ಪ್ರಕರಣವನ್ನು ಮುಕ್ತಾಯ ಮಾಡಿತು.

# ಬಾಂಗ್ಲಾದೇಶದಲ್ಲಿ ಮತ್ತೊಂದು ಬೃಹತ್ ಪ್ರತಿಭಟನೆ



**ಢಾಕಾ:** ರಾಜಕೀಯವಾಗಿ ಅಸ್ಥಿರಗೊಂಡಿರುವ ಬಾಂಗ್ಲಾದೇಶದಲ್ಲಿ ಪ್ರತಿಭಟನೆಗಳು ನಿಲ್ಲುತ್ತಿಲ್ಲ. ಇದೀಗ, ರೈಲ್ವೆ ಸಿಬ್ಬಂದಿ ಮುಷ್ಕರ ಆರಂಭಿಸಿದ್ದು, ದೇಶದೆಲ್ಲೆಡೆ ರೈಲು ಸಂಚಾರ ಸ್ಥಗಿತವಾಗಿದೆ. ಇದರಿಂದ ಸಾರ್ವಜನಿಕರ ಪ್ರಯಾಣ ಮತ್ತು ಸರಕು ಸಾಗಣೆಯ ಮೇಲೆ ಭಾರೀ ಪರಿಣಾಮ ಉಂಟಾಗಿದೆ.

ಮಂಗಳವಾರದಿಂದ ದೇಶಾದ್ಯಂತ ರೈಲು ಸಂಚಾರ ರದ್ದುಗೊಳಿಸಲಾಗಿದೆ. ಪಿಂಚಣಿ ಮತ್ತು ಇತರ ಸವಲತ್ತುಗಳನ್ನು ಒದಗಿಸಲು ಕೋರಿ ರೈಲ್ವೆ ಸಿಬ್ಬಂದಿ ಮುಷ್ಕರ ಆರಂಭಿಸಿದ್ದಾರೆ. ರೈಲ್ವೆ ಸಿಬ್ಬಂದಿಯ ಮುಖಂಡರ ಜೊತೆ ಸರ್ಕಾರ ನಡೆಸಿದ ಮಾತುಕತೆ ವಿಫಲವಾಗಿದೆ.

"ಮೊಹಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರವು ರೈಲ್ವೆ ಸಿಬ್ಬಂದಿ ಜೊತೆ ಸೋಮವಾರ ಸಭೆ ನಡೆಸಿದ್ದು, ಯಾವುದೇ ಫಲ ಕಂಡಿಲ್ಲ. ಇದರಿಂದಾಗಿ ಮುಷ್ಕರಕ್ಕೆ ಕರೆ ನೀಡಲಾಗಿದೆ. ಸರ್ಕಾರ ತಮ್ಮ ಬೇಡಿಕೆಗಳನ್ನು ಪರಿಗಣಿಸದಿದ್ದರೆ, ಮುಷ್ಕರ ಅನಿರ್ದಿಷ್ಟಾವಧಿಗೆ ಮುಂದುವರಿಯುತ್ತದೆ" ಎಂದು ಬಾಂಗ್ಲಾದೇಶ ರೈಲ್ವೆ ರನ್ನಿಂಗ್ ಸ್ಟಾಫ್ ಮತ್ತು ವರ್ಕರ್ಸ್ ಯೂನಿಯನ್‌ನ ಹಂಗಾಮಿ ಅಧ್ಯಕ್ಷ ಸೈದೂರ್ ರೆಹಮಾನ್ ಎಚ್ಚರಿಕೆ ರವಾನಿಸಿದ್ದಾರೆ.

**ಪ್ರಯಾಣಿಕರ ಪರದಾಟ:** ರೈಲ್ವೆ ಸಿಬ್ಬಂದಿಯ ಮುಷ್ಕರದ ಬಗ್ಗೆ ಮಾಹಿತಿ ಇಲ್ಲದ ಪ್ರಯಾಣಿಕರು ರೈಲು ನಿಲ್ದಾಣಗಳಿಗೆ ಆಗಮಿಸುತ್ತಿದ್ದಾರೆ. ರಾಜಧಾನಿ ಢಾಕಾದ ಕಮಲಾಪುರ ರೈಲು ನಿಲ್ದಾಣದಲ್ಲಿ ಸಾವಿರಾರು ಪ್ರಯಾಣಿಕರು ರೈಲಿಗಾಗಿ ಕಾದು ಕುಳಿತಿದ್ದರು. ಬಳಿಕ ಮುಷ್ಕರದ ಬಗ್ಗೆ ತಿಳಿದು ಮನೆಯ ಹಾದಿ ಹಿಡಿದರು. ಈ ವೇಳೆ ರೈಲ್ವೆ ವ್ಯವಹಾರಗಳ ಸಲಹೆಗಾರ ಫೌಜುಲ್ ಕಬೀರ್ ಖಾನ್ ಸ್ಥಳಕ್ಕೆ ಭೇಟಿ ನೀಡಿದಾಗ, ಪ್ರಯಾಣಿಕರು ಅಸಮಾಧಾನ ವ್ಯಕ್ತಪಡಿಸಿ ಘೋಷಣೆಗಳನ್ನು ಕೂಗಿದರು.

ಮಾಧ್ಯಮಗಳ ಜೊತೆ ಮಾತನಾಡಿದ ದೇಶದ ರೈಲ್ವೆ ವ್ಯವಹಾರಗಳ ಸಲಹೆಗಾರರು, ರಾಷ್ಟ್ರವ್ಯಾಪಿ ನಡೆಯುತ್ತಿರುವ ಮುಷ್ಕರವು ವಿಷಾದನೀಯ. ಪ್ರಯಾಣಿಕರಿಗೆ ಸಮಸ್ಯೆ ಉಂಟಾಗಿದ್ದು, ಅದನ್ನು ನಿಭಾಯಿಸಲು ಪ್ರಯತ್ನಿಸಲಾಗುತ್ತಿದೆ. ಪ್ರತಿಭಟನಾಕಾರರು ಮುಷ್ಕರವನ್ನು ಕೊನೆಗೊಳಿಸುವಂತೆ ಒತ್ತಾಯಿಸಿದರು. ಬಿಕ್ಕಟ್ಟು ಪರಿಹಾರಕ್ಕೆ ಸರ್ಕಾರದ ಜೊತೆ ಮಾತುಕತೆಗೆ ಬರಲು ಪ್ರತಿಭಟನಾಕಾರರಿಗೆ ಮನವಿ ಮಾಡಿದರು.

**ಪ್ರಯಾಣಕ್ಕೆ ಬಸ್ ವ್ಯವಸ್ಥೆ:** ರೈಲು ನಿಲ್ದಾಣಗಳಲ್ಲಿ ಜಮಾಯಿಸಿದ ಜನರ ಪ್ರಯಾಣಕ್ಕೆ ಸರ್ಕಾರವು, ಬಸ್‌ಗಳ ವ್ಯವಸ್ಥೆ ಮಾಡಿದೆ. ಆದ್ರೆ ದೂರದ ಪ್ರಯಾಣ ಕೈಗೊಳ್ಳುವವರು ಇದನ್ನು ನಿರಾಕರಿಸಿದ್ದಾರೆ. ತಮ್ಮ ಟಿಕೆಟ್ ಹಣವನ್ನು ಮರುಪಾವತಿಸಲು ಕೋರಿದ್ದಾರೆ. ಇನ್ನೊಂದೆಡೆ, ರಾಜ್‌ಶಾಹಿ ರೈಲು ನಿಲ್ದಾಣದಲ್ಲಿ ಕೋಪಗೊಂಡ ಪ್ರಯಾಣಿಕರು ನಿಲ್ದಾಣದ ಪೀಠೋಪಕರಣಗಳನ್ನು ಒಡೆದುಹಾಕಿದ್ದಾರೆ. ಸಿಬ್ಬಂದಿಯ ಮೇಲೆ ದಾಳಿ ಕೂಡ ನಡೆಸಿದ್ದಾರೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ವಿರುದ್ಧ ಕಳೆದ ವರ್ಷ ನಾಗರಿಕ ದಂಗೆ ನಡೆದು ನೂರಾರು ಜನರ ಪ್ರಾಣಾಹುತಿಯಾಗಿತ್ತು. ಹಸೀನಾ ಅವರು ಪಲಾಯನಗೊಂಡು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಸರ್ಕಾರದ ಪತನದ ಬಳಿಕ ಮೊಹಮದ್ ಯೂನುಸ್ ಅವರು ಮಧ್ಯಂತರ ಸರ್ಕಾರ ರಚನೆ ಮಾಡಿ ಅಧಿಕಾರ ನಡೆಸುತ್ತಿದ್ದಾರೆ. ಈ ಮಧ್ಯೆಯೇ ಮತ್ತೊಂದು ಬೃಹತ್ ಪ್ರತಿಭಟನೆಯನ್ನು ದೇಶ ಎದುರಿಸುವಂತಾಗಿದೆ.

# ಇಸ್ಲಾಂ ಮೂಲಭೂತವಾದಿಗಳಿಂದ ಹಿಂದೂಗಳ ಮೇಲೆ ದಾಳಿ



**ಢಾಕಾ:** ಇಸ್ಲಾ ಮೂಲಭೂತವಾದಿ ಸಂಘಟನೆಗಳ ಸದಸ್ಯರು ಅಲ್ಪಸಂಖ್ಯಾತರ ಮೇಲೆ, ವಿಶೇಷವಾಗಿ ಬಾಂಗ್ಲಾದೇಶದ ಹಿಂದೂ ಮತ್ತು ಅಹ್ಮದೀಯ ಸಮುದಾಯಗಳ ಜನರ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಹ್ಯೂಮನ್ ರೈಟ್ಸ್ ವಾಚ್ ತನ್ನ ಇತ್ತೀಚಿನ ವರದಿಯಲ್ಲಿ ಬಹಿರಂಗಪಡಿಸಿದೆ. ಕಳೆದ ವರ್ಷದ ಆಗಸ್ಟ್?ನಲ್ಲಿ ಪ್ರಧಾನಿ ಶೇಖ್ ಹಸೀನಾ ಅವರ ಸರ್ಕಾರದ ಪತನದ ನಂತರ ದೇಶದಲ್ಲಿ ಅವಾಮಿ ಲೀಗ್ ಬೆಂಬಲಿಗರು ಮತ್ತು ಪತ್ರಕರ್ತರ ಮೇಲೆ ಭದ್ರತಾ ಪಡೆಗಳು ಕೂಡ ದೌರ್ಜನ್ಯವೆಸಗುತ್ತಿರುವ ಆತಂಕಕಾರಿ ಬೆಳವಣಿಗೆಗಳಾಗುತ್ತಿವೆ ಎಂದು ವರದಿ ತಿಳಿಸಿದೆ.

'ಮಾನ್ಸೂನ್ ಕ್ರಾಂತಿಯ ನಂತರ: ಬಾಂಗ್ಲಾದೇಶದಲ್ಲಿ ಶಾಶ್ವತ ಭದ್ರತಾ ವಲಯದ ಸುಧಾರಣೆಗೆ ಮಾರ್ಗಸೂಚಿ' ಎಂಬ ಶೀರ್ಷಿಕೆಯ 50 ಪುಟಗಳ ವರದಿಯು ಮುಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರ್ಕಾರಕ್ಕೆ ವಿವಿಧ ಸಲಹೆಗಳನ್ನು ನೀಡಿದೆ.

ಶಾಶ್ವತ ಸುಧಾರಣೆಗಳನ್ನು ಖಚಿತಪಡಿಸಿಕೊಳ್ಳಲು ಮಾನವ ಹಕ್ಕುಗಳ ಹೈಕಮಿಷನರ್ ಕಚೇರಿ ಮತ್ತು ಇತರ ವಿಶ್ವಸಂಸ್ಥೆ ಹಕ್ಕುಗಳ ತಜ್ಞರಿಂದ ತಾಂತ್ರಿಕ ನೆರವು, ಮೇಲ್ವಿಚಾರಣೆ ಮತ್ತು ವರದಿಯನ್ನು ಪಡೆಯಬೇಕು ಎಂದು ಬಾಂಗ್ಲಾ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಹಿಂದೂಗಳ ಮೇಲೆ ಹೆಚ್ಚಿದ ದಾಳಿ– ವರದಿ: ಹಸೀನಾ ಸರ್ಕಾರದ ಪತನದ ನಂತರ ಹಿಂದೂ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಹೆಚ್ಚಾಗುತ್ತಿರುವುದನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇದು ಅಂತರರಾಷ್ಟ್ರೀಯ ಕಳವಳಕ್ಕೆ ಕಾರಣವಾಗಿದೆ. ಹಿಂದೂಗಳು ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರು ಸಾಂಪ್ರದಾಯಿಕವಾಗಿ ಹಸೀನಾ ಅವರ ಅವಾಮಿ ಲೀಗ್ ಪಕ್ಷವನ್ನು ಬೆಂಬಲಿಸಿದ್ದರಿಂದ ಅವರ ಮೇಲೆ ದಾಳಿ ನಡೆಸಲಾಗಿದೆ ಎಂದು ಹಲವಾರು ವ್ಯಾಖ್ಯಾನಕಾರರು ಎಚ್‌ಆರ್?ಡಬ್ಲ್ಯೂಗೆ ತಿಳಿಸಿದ್ದಾರೆ.

ಹಿಂದೂಗಳು ಮತ್ತು ಇತರ ಅಲ್ಪಸಂಖ್ಯಾತರ ವಿರುದ್ಧ ಹಿಂಸಾತ್ಮಕ ದಾಳಿಗಳು ಪದೇ ಪದೇ ನಡೆಯುತ್ತಿವೆ ಮತ್ತು ಅವರನ್ನು ರಕ್ಷಿಸಲು ಪೊಲೀಸರು ವಿಫಲರಾಗಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಇಂಟರ್ ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಪ್ರಜ್ಞೆಯ (ಇಸ್ಕಾನ್) ಮಾಜಿ ಅಧಿಕಾರಿ, ಹಿಂದೂ ಅರ್ಚಕ ಚಿನ್ಮಯ್ ಕೃಷ್ಣ ದಾಸ್ ಅವರ ಬಂಧನವನ್ನು ಬಾಂಗ್ಲಾದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತಿರುವುದರ ಆತಂಕಕಾರಿ ಸೂಚನೆ ಎಂದು ಅದು ಬಣ್ಣಿಸಿದೆ.

ಹಿಂದೂ ಅಲ್ಪಸಂಖ್ಯಾತರ ಮೇಲಿನ ದಾಳಿಗಳ ಬಗ್ಗೆ ಕಳವಳ ಹೆಚ್ಚುತ್ತಿರುವ ಸಮಯದಲ್ಲಿ ದಾಸ್ ಅವರನ್ನು ಬಂಧಿಸಲಾಗಿದೆ. ಆಗಸ್ಟ್ 5 ಮತ್ತು ಅಕ್ಟೋಬರ್ 22 ರ ನಡುವೆ ಕನಿಷ್ಠ 88 ಕೋಮು ಹಿಂಸಾಚಾರದ ಪ್ರಕರಣಗಳು ದಾಖಲಾಗಿವೆ ಮತ್ತು 70 ಜನರನ್ನು ಬಂಧಿಸಲಾಗಿದೆ ಎಂದು ಮಧ್ಯಂತರ ಸರ್ಕಾರ ದೃಢಪಡಿಸಿದೆ. ಹಿಂದೂಗಳ ಅಂಗಡಿಗಳು, ಮನೆಗಳು ಮತ್ತು ಪೂಜಾ ಸ್ಥಳಗಳನ್ನು ಗುರಿಯಾಗಿಸಿಕೊಂಡು ನೂರಾರು ವಿಧ್ವಂಸಕ ಘಟನೆಗಳು ನಡೆದಿವೆ ಎಂದು ಹಿಂದೂ ಸಂಘಟನೆಗಳು ಹೇಳಿವೆ" ಎಂದು ವರದಿ ಉಲ್ಲೇಖಿಸಿದೆ.

# ಇಂಡಿಗೋ ವಿಮಾನ: ಟೇಕ್ ಆಫ್ ಆಗುವ ಹೊತ್ತಲ್ಲಿ ಎಮರ್ಜೆನ್ಸಿ ಎಕ್ಸಿಟ್ ತೆರೆದ ಪ್ರಯಾಣಿಕ




ಇಂಡಿಗೋ ವಿಮಾನ ಇನ್ನೇನು ಟೇಕ್ ಆಫ್ ಆಗಬೇಕು ಎನ್ನುವ ಹೊತ್ತಲ್ಲಿ ಪ್ರಯಾಣಿಕರೊಬ್ಬರು ಎಮರ್ಜೆನ್ಸಿ ಎಕ್ಸಿಟ್ ತೆರೆದಿರುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ರಾಜಸ್ಥಾನದ ಜೋಧ್‌ಪುರದಿಂದ ಇಂಡಿಗೋ ವಿಮಾನ ಬೆಂಗಳೂರಿಗೆ ಟೇಕ್ ಆಫ್ ಆಗಲು ಸಿದ್ಧವಾಗಿತ್ತು. ಎಲ್ಲಾ ಪ್ರಯಾಣಿಕರು ವಿಮಾನವನ್ನು ಹತ್ತಿದ್ದರು ಮತ್ತು ಕ್ಯಾಬಿನ್ ಸಿಬ್ಬಂದಿ ವಿಮಾನ ಸುರಕ್ಷತಾ ಸೂಚನೆಗಳನ್ನು ಪ್ರಾರಂಭಿಸಿದರು.

ವಿಮಾನವು ಬೆಳಗ್ಗೆ 10.10 ಹಾರಾಟ ಆರಂಭಿಸಬೇಕಿತ್ತು, ಆದರೆ ಇದ್ದಕ್ಕಿದ್ದಂತೆ, ಪ್ರಯಾಣಿಕರೊಬ್ಬರು ಫ್ಲಾಪ್ ಅನ್ನು ಎಳೆದು ತುರ್ತು ನಿರ್ಗಮನ ದ್ವಾರವನ್ನು ತೆರೆದರು. ಈ ಘಟನೆಯ ನಂತರ, ವಿಮಾನದಲ್ಲಿ ಗೊಂದಲ, ಭಯ ಸೃಷ್ಟಿಯಾಗಿತ್ತು. ಪ್ರಯಾಣಿಕನನ್ನು ಬಂಧಿಸಿ ಸಿಐಎಸ್‌ಎಫ್‌ಗೆ ಒಪ್ಪಿಸಲಾಗಿದೆ. ಆಕ್ಸಿಸ್ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿರುವ ಸಿರಾಜ್ ಕಿದ್ವಾಯಿ ಅವರು ತಪ್ಪಾಗಿ ಫ್ಲಾಪ್ ಅನ್ನು ಎಳೆದಿದ್ದಾರೆ ಅವರಿಗೆ ಮಾಹಿತಿ ಇರಲಿಲ್ಲ ಎಂದು ಹೇಳಿಕೊಂಡಿದ್ದಾರೆ.

ತುರ್ತು ನಿರ್ಗಮನ ಗೇಟ್ ತೆರೆದ ನಂತರ, ಪೈಲಟ್‌ಗೆ ನೇರ ಸಂದೇಶವನ್ನು ನೀಡಲಾಯಿತು ಮತ್ತು ನಂತರ ಭದ್ರತಾ ಅಧಿಕಾರಿಗಳು ಪ್ರಯಾಣಿಕರನ್ನು ವಿಮಾನದಿಂದ ಕೆಳಗಿಳಿಸಿದರು. ಈ ಘಟನೆಯನ್ನು ವಿವರಿಸಿರುವ ಇಂಡಿಗೋ ಅಧಿಕಾರಿಗಳು, ಜೋಧ್‌ಪು ರದಿಂದ ಬೆಂಗಳೂರಿಗೆ 6ಇ 6033 ವಿಮಾನವು ಹೊರಡುವ ಮೊದಲು ಸುರಕ್ಷತಾ ಬ್ರೀಫಿಂಗ್ ಸಮಯದಲ್ಲಿ ಯಾಣಿಕರೊಬ್ಬರು ತುರ್ತು ನಿರ್ಗಮನದ ಫ್ಲಾಪ್ ಅನ್ನು ತೆರೆದರು. ಪ್ರಯಾಣಿಕನನ್ನು ಕೆಳಗಿಳಿಸಿ ಕಾನೂನಿಗೆ ಒಪ್ಪಿಸಲಾಯಿತು.

ವಿಮಾನದಲ್ಲಿ ಇತರ ಪ್ರಯಾಣಿಕರಿಗೆ ಉಂಟಾದ ಅನನುಕೂಲತೆಗಾಗಿ ನಾವು ವಿಷಾದಿಸುತ್ತೇವೆ ಮತ್ತು ನಮ್ಮ ಎಲ್ಲಾ ಕಾರ್ಯಾಚರಣೆಗಳಲ್ಲಿ ಸುರಕ್ಷತೆಯ ಅತ್ಯುನ್ನತ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಮ್ಮ ಬದ್ಧತೆಯನ್ನು ಕಾಯ್ದುಕೊಳ್ಳುತ್ತೇವೆ ಎಂದು ಹೇಳಿದೆ.

ಜೋಧ್‌ಪುರ ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ಪ್ರಯಾಣಿಕರನ್ನು ವಿಚಾರಣೆ ನಡೆಸುತ್ತಿದ್ದಾರೆ. ಈ ಘಟನೆಯಿಂದಾಗಿ ಟೇಕ್ ಆಫ್ ಆಗಲು 20 ನಿಮಿಷಗಳ ಕಾಲ ವಿಳಂಬವಾಯಿತು ಮತ್ತು ವಿಮಾನದಲ್ಲಿ ಆತಂಕ ಸೃಷ್ಟಿಯಾಗಿತ್ತು.

# ದೆಹಲಿ ಚುನಾವಣೆ: ಮತದಾರರ ಓಲೈಕೆಗೆ ಪಕ್ಷಗಳ ಭರಪೂರ ಕೊಡುಗೆ

ವಿಧಾನಸಭಾ ಚುನಾವಣೆಗೆ ಕೇವಲ ಒಂದು ವಾರ ಮಾತ್ರ ಬಾಕಿ ಉಳಿದಿದ್ದು, ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಪ್ರಚಾರದ ಕಾವು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. 70 ಸ್ಥಾನಗಳ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ, ಭಾರತೀಯ ಜನತಾ ಪಕ್ಷ ಮತ್ತು ಕಾಂಗ್ರೆಸ್ ನಡುವೆ ತೀವ್ರ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ದೆಹಲಿ ಕಾ ದಿಲ್ ಅನ್ನು ಗೆಲ್ಲುವ ಈ ತುರುಸಿನ ಸ್ಪರ್ಧೆಯಲ್ಲಿ, ರಾಜಕೀಯ ಪಕ್ಷಗಳು ವಿವಿಧ ನಾಗರಿಕ ಮತ್ತು ಅನಾಗರಿಕ ತಂತ್ರಗಳನ್ನು ಬಳಸುತ್ತಿವೆ.

ಬಿಜೆಪಿ 27 ವರ್ಷಗಳ ನಂತರ ಮತ್ತೊಮ್ಮೆ ಚುಕ್ಕಾಣಿ ಹಿಡಿಯಲು ಹವಣಿಸುತ್ತಿದ್ದರೆ (ದೆಹಲಿಯಲ್ಲಿ ಬಿಜೆಪಿ 1998 ರಲ್ಲಿ ಕೊನೆಯ ಬಾರಿಗೆ ಆಡಳಿತ ನಡೆಸಿತ್ತು), ಕಾಂಗ್ರೆಸ್ 1998 ರಿಂದ 2013 ರವರೆಗೆ ಶೀಲಾ ದೀಕ್ಷಿತ್ ಅವರ ಆಡಳಿತದ ಆಧಾರದಲ್ಲಿ ಮತ ಯಾಚನೆ ಮಾಡುತ್ತಿದೆ. ಆಡಳಿತಾರೂಢ ಆಮ್ ಆದ್ಮಿ ಪಕ್ಷವು ತನಗೆ ಸುತ್ತಿಕೊಂಡಿರುವ ಹಲವಾರು ವಿವಾದಗಳು ಮತ್ತು ಸವಾಲುಗಳ ನಡುವೆ, 2014 ರಲ್ಲಿ 48 ದಿನಗಳ ಸಂಕ್ಷಿಪ್ತವಾಗಿ ಆಡಳಿತದ ಚುಕ್ಕಾಣಿ ಹಿಡಿದ ನಂತರ ಈವರೆಗೆ ತನ್ನ ರಾಜಕೀಯ ಸಾಮರ್ಥ್ಯವನ್ನು ಸಾಬೀತುಪಡಿಸಿದೆ.

ಸದ್ದಿಲ್ಲದೇ ಕಾಂಗ್ರೆಸ್ ಅಬ್ಬರ: ದೆಹಲಿಯಲ್ಲಿ ಫೆಬ್ರವರಿ 5 ರಂದು ಮತದಾನ ನಡೆಯಲಿದ್ದು, ಫೆಬ್ರವರಿ 8 ರಂದು ಫಲಿತಾಂಶ ಪ್ರಕಟವಾಗಲಿವೆ. ಮೇಲ್ನೋಟಕ್ಕೆ ಕಾಂಗ್ರೆಸ್???ಗೆ ಹೋಲಿಸಿದರೆ ಬಿಜೆಪಿ ಮತ್ತು ಎಎಪಿಯ ಪ್ರಚಾರ ಹೆಚ್ಚು ತೀವ್ರವಾಗಿದೆ. ಆದಾಗ್ಯೂ, ಈ ಕಡಿಮೆ ಮಟ್ಟದ ಪ್ರಚಾರದ ಹೊರತಾಗಿಯೂ, ಕಾಂಗ್ರೆಸ್ ಆಪ್??ನ ಮತಗಳನ್ನು ತನ್ನತ್ತ ವಾಲಿಸಿಕೊಳ್ಳುವ ಮೂಲಕ ಅಚ್ಚರಿಯ ಫಲಿತಾಂಶಕ್ಕೆ ಕಾರಣವಾಗಬಹುದು.

ಮತದಾರರನ್ನು ಸೆಳೆಯಲು ಪರಸ್ಪರ ಕೆಸರೆರಚಾಟ: ಇತ್ತೀಚಿನ ದಿನಗಳಲ್ಲಿ ಚುನಾವಣಾ ರ್‍ಯಾಲಿಗಳ ಮೂಲಕ ಮತದಾರರನ್ನು ಓಲೈಸುವ ತಂತ್ರವು ವ್ಯಾಪಕವಾಗಿದೆ. ಎದುರಾಳಿಯನ್ನು ಟೀಕಿಸಲು ಮತ್ತು ಮತದಾರರನ್ನು ತಮ್ಮ ಪರವಾಗಿ ಸೆಳೆಯಲು ಪಕ್ಷಗಳು ಪರಸ್ಪರರ ಮೇಲೆ ಕೆಸರೆರಚಾಟ ನಡೆಸುತ್ತಿವೆ. ಬಿಜೆಪಿ, ಕಾಂಗ್ರೆಸ್ ಮತ್ತು ಎಎಪಿಯ ಸ್ಟಾರ್ ಪ್ರಚಾರಕರು ಪರಸ್ಪರರ ವಿರುದ್ಧ ವಾಗ್ದಾಳಿ ನಡೆಸುತ್ತಿದ್ದಾರೆ. ಇನ್ನು ಪಕ್ಷಗಳ ದೊಡ್ಡ ನಾಯಕರು ತಮ್ಮ ಪ್ರತಿಸ್ಪರ್ಧಿಗಳನ್ನು ಮಾತಿನ ಜಾಣ್ಮೆ ಮತ್ತು ನಿರೂಪಣೆಗಳ ಮೂಲಕ ಅವರಿಗೆ ಅಪಖ್ಯಾತಿ ತರುವಲ್ಲಿ ನಿರತರಾಗಿದ್ದಾರೆ. ಆರೋಪ ಪ್ರತ್ಯಾರೋಪಗಳು ಕೆಲ ಬಾರಿ ಸತ್ಯವಾಗಿದ್ದರೆ, ಇನ್ನು ಕೆಲ ಬಾರಿ ಸುಳ್ಳಾಗಿಯೂ ಇರುತ್ತವೆ.

ದಾಖಲೆಗಳ ಸಮೇತ ಎಎಪಿ ವಿರುದ್ಧ ಬಿಜೆಪಿ ಆರೋಪ: ತನಗೆ ಮತ ಹಾಕಿ ಅಧಿಕಾರಕ್ಕೆ ತಂದಲ್ಲಿ ನಿಮ್ಮ ಜೀವನದಲ್ಲಿ ಮಹತ್ತರ ಬದಲಾವಣೆಯಾಗಲಿದೆ ಎಂದು ಬಿಜೆಪಿ ಮತದಾರರಿಗೆ ಮನವರಿಕೆ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ. ಬಿಜೆಪಿ ರಾಜ್ಯ ಮುಖ್ಯಸ್ಥ ವೀರೇಂದ್ರ ಸಚ್ದೇವ್ ಅವರು ಮಾಧ್ಯಮಗಳ ಮುಂದೆ ದಾಖಲೆಗಳನ್ನು ತೋರಿಸಿ ಎಎಪಿ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ಅವರ ವಿರುದ್ಧ ಆರೋಪ ಮಾಡುತ್ತಿದ್ದಾರೆ. ಎಎಪಿ ಸರ್ಕಾರ ನಡೆಸುತ್ತಿರುವ ಮೊಹಲ್ಲಾ ಹೆಲ್ತ್ ಕ್ಲಿನಿಕ್?ಗಳಲ್ಲಿ ಬಹುಕೋಟಿ ಮೊತ್ತದ ಹಗರಣಗಳು ನಡೆದಿರುವುದು ಆರೋಗ್ಯ ಸಚಿವರಾಗಿರುವುದರಿಂದ ತಮಗೆ ತಿಳಿದಿದೆ ಎಂದು ಜೆಪಿ ನಡ್ಡಾ ತಮ್ಮ ಅಧಿಕೃತ ಸ್ಥಾನವನ್ನು ಉಲ್ಲೇಖಿಸಿದ್ದಾರೆ. ಎಎಪಿಗಿಂತಲೂ ಹೆಚ್ಚಿನ ಪ್ರಮಾಣದ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡುವುದಾಗಿ ಚುನಾವಣಾ ಪ್ರಣಾಳಿಕೆ ಬಿಡುಗಡೆ ಸಮಯದಲ್ಲಿ ಸಂಸದ ಅನುರಾಗ್ ಠಾಕೂರ್ ಭರವಸೆ ನೀಡಿದ್ದಾರೆ.

ಶಿಕ್ಷಣ, ಆರೋಗ್ಯ ಮತ್ತು ಮಹಿಳಾ ಹಕ್ಕುಗಳ ಬಗ್ಗೆ ಬಿಜೆಪಿ ಮಾತು: ಈ ಮಧ್ಯೆ, ಹಿಂದುತ್ವವನ್ನು ಸಾಮಾನ್ಯವಾಗಿ ತನ್ನ ಚುನಾವಣಾ ಪ್ರಚಾರದ ಕೇಂದ್ರ ಬಿಂದುವಾಗಿ ಬಳಸುವ ಬಿಜೆಪಿ ಹಿಂದುತ್ವ ಅಜೆಂಡಾವನ್ನು ಅಷ್ಟೊಂದು ತೀವ್ರವಾಗಿ ಬಳಸುತ್ತಿಲ್ಲ. ಕೇಜ್ರಿವಾಲ್ ಮತ್ತು ಅವರ ತಂಡವನ್ನು 'ಚುನಾವಿ ಹಿಂದೂ' (ಚುನಾವಣಾ ಸಮಯದಲ್ಲಿ ಮಾತ್ರ ಹಿಂದೂ) ಎಂದು ಗೇಲಿ ಮಾಡುತ್ತಿದ್ದ ಬಿಜೆಪಿ ಈಗ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಮತ್ತು ಮಹಿಳಾ ಹಕ್ಕುಗಳ ಬಗ್ಗೆ ಹೆಚ್ಚಾಗಿ ಮಾತನಾಡುತ್ತಿದೆ.

ಕ್ಷೇತ್ರ ಬದಲಿಸಿದ ಮನೀಷ್? ಸಿಸೋಡಿಯಾ: ಆಮ್ ಆದ್ಮಿ ಪಕ್ಷದ ಬಗ್ಗೆ ನೋಡುವುದಾದರೆ, ಅದರ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ತಮ್ಮ ಸಾಧನೆಗಳನ್ನು ಜನರ ಮುಂದೆ ಇಟ್ಟು ಅವರಿಂದ ಮೆಚ್ಚುಗೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ. 2020 ರ ವಿಧಾನಸಭಾ ಚುನಾವಣೆಯಲ್ಲಿ ಮನೀಶ್ ಸಿಸೋಡಿಯಾ 3,000 ಮತಗಳ ಅಂತರದಿಂದ ಗೆದ್ದ ಪಟಪರ್?ಗಂಜ್??ನಲ್ಲಿ ನಡೆದ ರ್‍ಯಾಲಿಯಲ್ಲಿ ನೆರೆದಿದ್ದ ಅಗಾಧ ಸಂಖ್ಯೆಯ ಜನ ಸೇರಿದ್ದು ಗಮನಾರ್ಹ. ಸಿಸೋಡಿಯಾ ಈ ಬಾರಿ ಕ್ಷೇತ್ರದಿಂದ ಸ್ಪರ್ಧಿಸದಿದ್ದರೂ, ಈ ಕ್ಷೇತ್ರವನ್ನು ಗೆಲ್ಲಲೇಬೇಕೆಂದು ಕೇಜ್ರಿವಾಲ್ ಹಟ ತೊಟ್ಟಿದ್ದಾರೆ. ಈ ಕ್ಷೇತ್ರದಲ್ಲಿ ಯುಪಿಎಸ್?ಸಿ ಪರೀಕ್ಷೆಗಳ ತರಬೇತುದಾರ ಮತ್ತು ರಾಜಕಾರಣಿ ಅವಧ್ ಓಜಾ ಅವರಿಗೆ ಕೇಜ್ರಿವಾಲ್ ಟಿಕೆಟ್ ನೀಡಿದ್ದಾರೆ.

ಮನೀಷ್ ಸಿಸೋಡಿಯಾ ಈ ಬಾರಿ ಜಂಗ್?ಪುರದಿಂದ ಸ್ಪರ್ಧಿಸುತ್ತಿದ್ದಾರೆ. 2020 ರಲ್ಲಿ ಈ ಕ್ಷೇತ್ರದಲ್ಲಿ ಆಪ್?ನ ಪ್ರವೀಣ ಕುಮಾರ್ ಶೇ 50ಕ್ಕೂ ಹೆಚ್ಚು ಮತಗಳನ್ನು ಪಡೆದು ಗೆದ್ದಿದ್ದರು. ಸಿಸೋಡಿಯಾ ಈ ಬಾರಿ ಇಲ್ಲಿ ಬಿಜೆಪಿಯ ತರ್ವಿಂದರ್ ಮಾರ್ವಾ ಮತ್ತು ಕಾಂಗ್ರೆಸ್?ನ ಮಾಜಿ ಮೇಯರ್ ಫರ್ಹಾದ್ ಸೂರಿ ವಿರುದ್ಧ ಸ್ಪರ್ಧಿಸುತ್ತಿದ್ದಾರೆ. ಕಳೆದ ಮೂರು ಅವಧಿಗಳಿಂದ ಈ ಸ್ಥಾನವು ಎಎಪಿ ಬಳಿಯೇ ಇದೆ.




ಜನರ ಆಶೀರ್ವಾದ ಮತ್ತೊಮ್ಮೆ ಪಡೆಯಲು ಕೇಜ್ರಿ ಪಡೆ ಕಸರತ್ತು: ರ್‍ಯಾಲಿಗಳಲ್ಲಿ ಕೇಜ್ರಿವಾಲ್ ಅವರ ಭಾಷಣಗಳನ್ನೇ ದೆಹಲಿ ಮುಖ್ಯಮಂತ್ರಿ ಅತಿಶಿ ಪುನರಾವರ್ತಿಸುತ್ತಿದ್ದಾರೆ. ದೆಹಲಿ ಜನತೆಗೆ ಉಚಿತ ವಿದ್ಯುತ್ ನೀಡುತ್ತಿರುವುದಾಗಿ ಹೇಳುವ ಕೇಜ್ರಿವಾಲ್ ಅವರ ಮಾತುಗಳನ್ನು ಅತಿಶಿ ಜನರ ಮುಂದಿಡುತ್ತಿದ್ದಾರೆ. "ಕ್ಯಾ ಆಪ್ ಕೋ ಮುಫ್ತ್ ಬಿಜ್ಲಿ ಮಿಲ್ತಿ ಹೈ (ನಿಮಗೆ ಉಚಿತ ವಿದ್ಯುತ್ ಸಿಗುತ್ತಿದೆಯೇ?) ಎಂದು ಕೇಳಿ ಅವರಿಂದ ಹೌದು ಎಂದು ಹೇಳಿಸಿ ಅತಿಶಿ ಜನರನ್ನು ತಮ್ಮತ್ತ ಓಲೈಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ದೊಡ್ಡ ಪ್ರಹಸನದ ನಂತರ ಕೇಜ್ರಿವಾಲ್ ರಾಜೀನಾಮೆ ನೀಡಿದ ನಂತರ ಮುಖ್ಯಮಂತ್ರಿಯಾಗಿ ಆಯ್ಕೆಯಾದ ನಂತರ ಪಕ್ಷದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿರುವ ಅತಿಶಿ, ಆಗ್ನೇಯ ದೆಹಲಿಯ ಕಾಲ್ಕಾಜಿ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ದಕ್ಷಿಣ ದೆಹಲಿಯಿಂದ ಎರಡು ಬಾರಿ ಸಂಸದ ಮತ್ತು ಮೂರು ಬಾರಿ ಶಾಸಕರಾಗಿರುವ ಬಿಜೆಪಿಯ ರಮೇಶ್ ಬಿಧುರಿ ಮತ್ತು 2019 ರಲ್ಲಿ ಕಾಂಗ್ರೆಸ್ ಸೇರುವ ಮೊದಲು 2015 ರಲ್ಲಿ ಚಾಂದನಿ ಚೌಕ್ ಕ್ಷೇತ್ರದಿಂದ ಎಎಪಿ ಟಿಕೆಟ್?ನಲ್ಲಿ ಗೆದ್ದ ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಮುಖ್ಯಸ್ಥೆ ಅಲ್ಕಾ ಲಂಬಾ ಅವರಂತಹ ಪ್ರಮುಖ ನಾಯಕರು ಅತಿಶಿ ವಿರುದ್ಧ ಕಣದಲ್ಲಿದ್ದಾರೆ.

ಈ ಬಾರಿ ಚುನಾವಣೆ ಫಲಿತಾಂಶ ಅನಿರೀಕ್ಷಿತವಾಗಿರಲಿದೆಯಾ?: ರ್‍ಯಾಲಿಗಳಲ್ಲಿ ರಾಜಕಾರಣಿಗಳ ಭಾಷಣಗಳನ್ನು ನೋಡಿದರೆ ಚುನಾವಣಾ ಫಲಿತಾಂಶಗಳು ತೀರಾ ಅನಿರೀಕ್ಷಿತ ಮತ್ತು ರೋಚಕವಾಗಿರಲಿವೆ ಎಂಬುದು ಕಂಡು ಬರುತ್ತಿದೆ. ಬಿಜೆಪಿ ಪ್ರಚಾರಕರು ತಮ್ಮ ಭಾಷಣಗಳಲ್ಲಿ ಮುಖ್ಯವಾಗಿ ಎಎಪಿ ಸರ್ಕಾರದ ಯೋಜನೆಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಬಿಜೆಪಿ ಮುಖಂಡರಾದ ಅನುರಾಗ್ ಠಾಕೂರ್, ಜೆಪಿ ನಡ್ಡಾ ಮತ್ತು ಅಮಿತ್? ಶಾ ಅವರು ಬಿಡುಗಡೆ ಮಾಡಿದ ಬಿಜೆಪಿಯ ಮೂರು ಪ್ರಣಾಳಿಕೆಗಳಲ್ಲಿ ನೀಡಲಾದ ಭರವಸೆಗಳು ಎಎಪಿ ಘೋಷಿಸಿದ ಕಲ್ಯಾಣ ಯೋಜನೆಗಳಂತೆಯೇ ಇವೆ.

ಬಿಜೆಪಿ ಬಂದರೆ ಕಲ್ಯಾಣ ಕಾರ್ಯಕ್ರಮಗಳು ನಿಲ್ಲಲಿವೆ ಎಂದು ಕೇಜ್ರಿವಾಲ್? ಆತಂಕ: ಇನ್ನು ಬಿಜೆಪಿಯ ಚುನಾವಣಾ ಭರವಸೆಗಳ ವಿರುದ್ಧ ರ್‍ಯಾಲಿಗಳಲ್ಲಿ ವಾಗ್ದಾಳಿ ನಡೆಸಿದ ಕೇಜ್ರಿವಾಲ್, ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದಂಥ ರಾಜ್ಯಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದೆ ಎಂದು ಆರೋಪಿಸಿದ್ದಾರೆ. ಅಲ್ಲದೆ ದೆಹಲಿಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಎಎಪಿ ಜಾರಿಗೆ ತಂದಿರುವ ಕಲ್ಯಾಣ ಯೋಜನೆಗಳನ್ನು ರದ್ದು ಮಾಡಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಜನರ ಸಂಶಯ ನಿವಾರಿಸಲು ಪಣ ತೊಟ್ಟ ಬಿಜೆಪಿ: ಕೇಜ್ರಿವಾಲ್ ಅವರ ಹೇಳಿಕೆಯ ನಂತರ ಮತದಾರರ ಮನದಲ್ಲಿ ಹುಟ್ಟಿರಬಹುದಾದ ಭಯವನ್ನು ನಿವಾರಿಸುವ ಪ್ರಯತ್ನವಾಗಿ, ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಈಗ ಜಾರಿಯಲ್ಲಿರುವ ಯೋಜನೆಗಳನ್ನು ಮುಂದುವರೆಸುವುದಾಗಿ ಎಂದು ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ. ಕರೋಲ್ ಬಾಗ್?ನಲ್ಲಿ ನಡೆದ ರ್‍ಯಾಲಿಯಲ್ಲಿ ಯೋಗಿ ಆದಿತ್ಯನಾಥ್ ಕೇಜ್ರಿವಾಲ್ ಅವರನ್ನು "ಸುಳ್ಳುಗಳ ಎಟಿಎಂ" ಎಂದು ಜರಿದರು. ದೆಹಲಿಯ ಕಲುಷಿತವಾಗಿರುವ ಯಮುನಾ ನದಿ ಮತ್ತು ಯುಪಿಯಲ್ಲಿ ಯಾತ್ರಾರ್ಥಿಗಳು ಪವಿತ್ರ ಸ್ನಾನ ಮಾಡುವ ಗಂಗಾ ನದಿಗಳನ್ನು ಅವರು ಹೋಲಿಕೆ ಮಾಡಿದರು.

ಯೋಗಿ ಮಿಂಚಿನ ಸಂಚಲನ: ಎಎಪಿಯ ವಿಶೇಷ್ ರವಿ ಮತ್ತು ಕಾಂಗ್ರೆಸ್ ನ ರಾಹುಲ್ ಧನಕ್ ವಿರುದ್ಧ ಸ್ಪರ್ಧಿಸುತ್ತಿರುವ ಬಿಜೆಪಿ ಅಭ್ಯರ್ಥಿ ದುಶ್ಯಂತ್ ಗೌತಮ್ ಅವರ ಪರವಾಗಿ ಯೋಗಿ ಆದಿತ್ಯನಾಥ್ ಈ ಬಾರಿ ಪ್ರಚಾರ ಮಾಡಿದರು. ಕಳೆದ ಎರಡು ಚುನಾವಣೆಗಳಲ್ಲಿ ವಿಶೇಷ್ ರವಿ ಬಿಜೆಪಿ ಅಭ್ಯರ್ಥಿಯನ್ನು ಗಮನಾರ್ಹ ಅಂತರದಿಂದ ಸೋಲಿಸಿದ್ದರು. ಈ ಬಾರಿ, ದುಶ್ಯಂತ್ ಅವರು ಚುನಾವಣಾ ಆಟವನ್ನು ತಮ್ಮ ಕಡೆಗೆ ತಿರುಗಿಸಿಕೊಳ್ಳಲಿದ್ದಾರೆ ಎಂಬ ಭರವಸೆಯೊಂದಿಗೆ ಬಿಜೆಪಿ ಅವರನ್ನು ಕಣಕ್ಕಿಳಿಸಿದೆ. ಶಕುರ್ ಬಸ್ತಿ ಕ್ಷೇತ್ರದಲ್ಲಿ ಬಿಜೆಪಿ ಕರ್ನೈಲ್ ಸಿಂಗ್ ಅವರನ್ನು ಕಣಕ್ಕಿಳಿಸಿದೆ. ಇವರು ಪಕ್ಷದ ದೇವಸ್ಥಾನ ಘಟಕದ ಮುಖ್ಯಸ್ಥರಾಗಿದ್ದಾರೆ. ಇವರು ಮೂರು ಬಾರಿಯ ಎಎಪಿ ಶಾಸಕ ಸತೇಂದ್ರ ಜೈನ್ ಅವರನ್ನು ಎದುರಿಸುತ್ತಿದ್ದಾರೆ. ದೆಹಲಿಯ ಬ್ರಾಹ್ಮಣರನ್ನು ಒಲಿಸಿಕೊಳ್ಳಲು 2022 ರಲ್ಲಿ ಬಿಜೆಪಿ ದೇವಸ್ಥಾನ ಘಟಕವನ್ನು ರಚಿಸಿದೆ.

ಕರ್ನೈಲ್ ಸಿಂಗ್ ಪರ ನಡ್ಡಾ ಕಸರತ್ತು: ನಡ್ಡಾ ಸ್ವತಃ ಸಿಂಗ್ ಅವರ ಪರವಾಗಿ ಪ್ರಚಾರ ಮಾಡಿದರು. ಇದು ಈ ಕ್ಷೇತ್ರದ ಮಹತ್ವವನ್ನು ಸೂಚಿಸುತ್ತದೆ. ಸಿಂಗ್ ತಮ್ಮನ್ನು ತಾವು ಸನಾತನ ಧರ್ಮದ ಸೇವಕ ಎಂದು ಕರೆದುಕೊಳ್ಳುತ್ತಾರೆ. ಇನ್ನು ಶಕುರ್ ಬಸ್ತಿಯಲ್ಲಿ ನಡ್ಡಾ ನಡೆಸಿದ ಪ್ರಚಾರವು ಹೆಚ್ಚಾಗಿ ಕೇಜ್ರಿವಾಲ್ ಕೇಂದ್ರಿತವಾಗಿತ್ತು.

ಕಾಂಗ್ರೆಸ್ ದುರ್ಬಲವಾಗಿರುವ ಮಧ್ಯೆ, ಬಿಜೆಪಿ ಮತ್ತು ಎಎಪಿ ಮತಗಳನ್ನು ಸೆಳೆಯಲು ಪರಸ್ಪರರ ವಿರುದ್ಧ ಎಷ್ಟು ಸಾಧ್ಯವೋ ಅಷ್ಟು ಕೀಳು ಮಟ್ಟದ ಪ್ರಚಾರ ನಡೆಸಿವೆ. ಫೆಬ್ರವರಿ 5 ರಂದು ಮತದಾರರು ಮತ ಚಲಾಯಿಸಿದ ನಂತರ ಯಾವುದು ಸತ್ಯ ಯಾವುದು ಸುಳ್ಳು ಎಂಬುದು ನಿರ್ಧಾರವಾಗಲಿದೆ. "ನೀವು ಒಂದು ದಿನ ಚಲಾಯಿಸುವ ಮತದ ಪರಿಣಾಮವು ನಿಮ್ಮ ಮೇಲೆ ಐದು ವರ್ಷಗಳವರೆಗೆ ಇರುತ್ತದೆ" ಎಂದು ದಿಯೋಲಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ರ್‍ಯಾಲಿಯಲ್ಲಿ ಅತಿಶಿ ಹೇಳಿದ್ದು ಸರಿಯಾಗಿಯೇ ಇದೆ.

# ಒಂದಲ್ಲ, ಎರಡಲ್ಲ, 8 ಕನ್ನಡ ಚಿತ್ರ ಈ ವಾರ ರಿಲೀಸ್!

ಹೊಸ ವರ್ಷ ಯಾಕೋ ಕನ್ನಡ ಚಿತ್ರರಂಗಕ್ಕೆ ಅದೃಷ್ಟ ತಂದುಕೊಡಲಿಲ್ಲ. ದೊಡ್ಡ ಸಿನಿಮಾಗಳು ಬರದೇ ಇರುವುದು ಅದಕ್ಕೆ ಕಾರಣ ಇರಬಹುದು. ಇದ್ದಿದ್ದರಲ್ಲಿ 'ಛೂ ಮಂತರ್' ಸಿನಿಮಾ ತಕ್ಕ ಮಟ್ಟಿಗೆ ಸದ್ದು ಮಾಡಿ ವರ್ಷದ ಮೊದಲ ಹಿಟ್




ಎನಿಸಿಕೊಂಡಿದೆ. ಬಳಿಕ ಬಂದ ಚಿತ್ರಗಳು ಗೆಲ್ಲಲಿಲ್ಲ. ಅದರೆ ಇದೀಗ ಈ ವಾರ 8 ಚಿತ್ರಗಳು ತೆರೆಗಪ್ಪಳಿಸುತ್ತಿವೆ. ವರ್ಷದ ಮೊದಲ ತಿಂಗಳು ಕಳೆದೇ ಹೋಯ್ತು. ತಿಂಗಳಾಂತ್ಯಕ್ಕೆ ವೀಕೆಂಡ್ ಬರ್ತಿದೆ. ಕೊಂಚ ನಿರೀಕ್ಷೆ ಮೂಡಿಸಿದ್ದ 'ಸಂಜು ವೆಡ್ಸ್ ಗೀತಾ–2' ಹಾಗೂ 'ರಾಯಲ್' ಚಿತ್ರಗಳು ಪ್ರೇಕ್ಷಕರ ಮನ ಗೆಲ್ಲುವಲ್ಲಿ ವಿಫಲವಾಗಿವೆ. ಕೆಲ ಚಿತ್ರಗಳ ಬಗ್ಗೆ ಸರಿಯಾಗಿ ಪ್ರಚಾರ ಮಾಡಲಿಲ್ಲ. ಆ ಚಿತ್ರಗಳು ತೆರೆಗೆ ಬಂದಿದ್ದೇ ಕೆಲವರಿಗೆ ಕೆಲವರಿಗೆ ಗೊತ್ತಾಗಲಿಲ್ಲ. ಈ ವಾರ ಬರ್ತಿರೋ ಸಿನಿಮಾಗಳ ಕಥೆ ಕೂಡ ಅದೇ ರೀತಿ ಇದೆ.

ಈ ವಾರ ಒಟ್ಟು 8 ಕನ್ನಡ ಸಿನಿಮಾಗಳು ತೆರೆಗೆ ಬರ್ತಿವೆ. ಅದರಲ್ಲಿ ಪ್ರಜ್ವಲ್ ದೇವರಾಜ್ ನಟನೆಯ 'ಗಣ' ಹಾಗೂ ನವೀನ್ ಶಂಕರ್ ನಟನೆಯ 'ನೋಡಿದವರು ಏನಂತಾರೆ' ಚಿತ್ರಗಳ ಬಗ್ಗೆ ಮಾತ್ರ ಕೆಲವರಿಗೆ ಮಾಹಿತಿ ಇದೆ. ಇನ್ನುಳಿದ ಯಾವುದೇ ಚಿತ್ರಕ್ಕೆ ಸರಿಯಾದ ಪ್ರಚಾರ ಮಾಡುತ್ತಿಲ್ಲ.

### ಗಣ

ಪ್ರಜ್ವಲ್ ದೇವರಾಜ್ ನಟನೆಯ 6 ಚಿತ್ರಗಳು ಈ ವರ್ಷ ತೆರೆಗೆ ಬರಲಿವೆ. ಅದರಲ್ಲಿ ಮೊದಲ ಸಿನಿಮಾ 'ಗಣ'. ಬಹಳ ಹಿಂದೆ ಶುರುವಾಗಿದ್ದ ಸಿನಿಮಾ ಅಂತೂ ಇಂತೂ ಬಿಡುಗಡೆ ಆಗುತ್ತಿದೆ. ಇದೊಂದು ಟೈಮ್ ಟ್ರಾವೆಲ್ ಥ್ರಿಲ್ಲರ್ ಸಿನಿಮಾ. ಚೆರಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಪಾರ್ಥು ಚಿತ್ರಕ್ಕೆ ಹಣ ಹೂಡಿದ್ದಾರೆ. ಹರಿಪ್ರಸಾದ್ ಜಕ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ.

### ನೋಡಿದವರು ಏನಂತಾರೆ

ಕುಲದೀಪ್ ಕಾರಿಯಪ್ಪ ನಿರ್ದೇಶನದ 'ನೋಡಿದವರು ಏನಂತಾರೆ' ಚಿತ್ರ ಟೈಟಲ್‌ನಿಂದಲೇ ಕುತೂಹಲ ಮೂಡಿಸಿದೆ. ನವೀನ್ ಶಂಕರ್ ಜೊತೆ ಅಪೂರ್ವ ಭಾರದ್ವಾಜ್ ನಾಯಕಿಯಾಗಿ ಮಿಂಚಿದ್ದಾರೆ. ಮಿಡ್ಲ್ ಕ್ಲಾಸ್ ಮನಸ್ಥಿತಿಯ ಬಗ್ಗೆ ಇಡೀ ಸಿನಿಮಾ ಕತೆ ಸುತ್ತುತ್ತದೆ. ನಾಗೇಶ್ ಗೋಪಾಲ್ ಚಿತ್ರಕ್ಕೆ ಹಣ ಹೂಡಿದ್ದಾರೆ.

### ಬೇಗೂರು ಕಾಲೋನಿ




ಹಳಬರು ಹಾಗೂ ಹೊಸಬರು ಸೇರಿ ಮಾಡಿರುವ ಸಿನಿಮಾ 'ಬೇಗೂರು ಕಾಲೋನಿ'. ಟೈಟಲ್ ಹೇಳುವಂತೆ ಇದೊಂದು ಕಾಲೋನಿ ಜನ ನೋವು ನಲಿವಿನ ಕಥಾಹಂದರದ ಸಿನಿಮಾ. ರಾಜೀವ್ ಹನು ಮತ್ತು ಪಲ್ಲವಿ ಪರ್ವ ಚಿತ್ರ ಪ್ರದಾನ ಭೂಮಿಕೆಯಲ್ಲಿದ್ದಾರೆ. ಬೊಮ್ಮನಹಳ್ಳಿ, ಬೇಗೂರು, ಸರ್ಜಾಪುರ, ಅತ್ತಿಬೆಲೆ ಸುತ್ತಮುತ್ತ ಚಿತ್ರದ ಚಿತ್ರೀಕರಣ




ನಡೆದಿದೆ. ಫ್ಲೈಯಿಂಗ್ ಕಿಂಗ್ ಮಂಜು ಚಿತ್ರಕ್ಕೆ ಆಕ್ಷನ್ ಕಟ್ ಹೇಳುವ ಜೊತೆಗೆ ಮುಖ್ಯವಾದ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ.


### ಅಲ್ಲೇ ಡ್ರಾ ಅಲ್ಲೇ ಬಹುಮಾನ

ರಿಷಿ ಮತ್ತು ಋಷಿಕರಾಜ್ ಅಭಿನಯದ 'ಅಲ್ಲೇ ಡ್ರಾ ಅಲ್ಲೇ ಬಹುಮಾನ' ಈ ವಾರ ತೆರೆಗೆ ಬರುತ್ತಿರುವ ಮತ್ತೊಂದು ಸಿನಿಮಾ. ರತ್ನತೀರ್ಥ ಕಥೆ, ಚಿತ್ರಕಥೆ ಬರೆದು ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಜನನಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಪ್ರಶಾಂತ್ ಬಿ.ಜೆ. ಚಿತ್ರವನ್ನು ನಿರ್ಮಿಸಿದ್ದಾರೆ.

### ಪಾರು ಪಾರ್ವತಿ

ರೋಹಿತ್ ಕೀರ್ತಿ ನಿರ್ದೇಶನದ ಸಿನಿಮಾ 'ಪಾರು ಪಾರ್ವತಿ'. ಬಿಗ್‌ಬಾಸ್ ಖ್ಯಾತಿಯ ದೀಪಿಕಾ ದಾಸ್ ಈ ಚಿತ್ರದ ಲೀಡ್ ರೋಲ್‌ನಲ್ಲಿ ನಟಿಸಿದ್ದಾರೆ. ಕಾರ್ ಒಂದು ಚಿತ್ರದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಟ್ರಾವೆಲ್, ಅಡ್ವೆಂಚರ್ಸ್ ಡ್ರಾಮಾ ಸಿನಿಮಾ ಇದು. 3 ಪಾತ್ರಗಳ ಸುತ್ತಾ ಇಡೀ ಸಿನಿಮಾ ಕಥೆ ಸಾಗಲಿದೆ. ಈ 5 ಸಿನಿಮಾಗಳ ಜೊತೆಗೆ 'ಹೈನ', 'ರಾವುತ' ಹಾಗೂ 'ಕಾಡುಮಳೆ' ಎಂಬ 3 ಹೊಸಬರ ಸಿನಿಮಾಗಳು ಈ ವಾರ ಪ್ರೇಕ್ಷಕರ ಮುಂದೆ ಬರ್ತಿವೆ. ಆದರೆ ಹೆಚ್ಚು ಪ್ರಚಾರ ಇಲ್ಲದೇ ಸಿನಿಮಾಗಳು ಸೊರಗಿವೆ.

# ಎರಡನೇ ಮದುವೆ ಆಗಲಿದ್ದಾರೆ ನಟಿ ಚೈತ್ರಾ ವಾಸುದೇವನ್



ಖ್ಯಾತ ಟಿವಿ ನಿರೂಪಕಕಿ, ಮಾಜಿ ಬಿಗ್‌ಬಾಸ್ ಸ್ಪರ್ಧಿಯೂ ಆಗಿರುವ ಚೈತ್ರಾ ವಾಸುದೇವನ್ ಎರಡನೇ ಮದುವೆಗೆ ಸಜ್ಜಾಗಿದ್ದಾರೆ. ಮೊದಲ ಮದುವೆ ಬಳಿಕ ದಂಪತಿಗಳು ವಿಚ್ಛೇದನ ಪಡೆದುಕೊಂಡಿದ್ದರು. ಇದೀಗ ಚೈತ್ರಾ ವಾಸುದೇವನ್ ಎರಡನೇ ಮದುವೆ ಆಗಲಿದ್ದು, ಈ ವಿಷಯವನ್ನು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಖಾತ್ರಿ ಪಡಿಸಿದ್ದಾರೆ. ಚೈತ್ರಾ ವಾಸುದೇವನ್ ಹಾಗೂ ಭಾವಿ ಪತಿ ಪ್ಯಾರಿಸ್?ನಲ್ಲಿ ಪರಸ್ಪರ ಉಂಗುರ ಬದಲಿಸಿಕೊಂಡು ಪ್ರೀತಿಯನ್ನು ವ್ಯಕ್ತಪಡಿಸಿದ್ದಾರೆ.

ಚೈತ್ರಾ ವಾಸುದೇವನ್ ಹಾಗೂ ಅವರ ಭಾವಿ ಪತಿ ಹೃದಯದಾಕಾರದ ಉಂಗುರಗಳನ್ನು ತೊಟ್ಟು ಪ್ಯಾರಿಸ್‌ನಲ್ಲಿ ಓಡಾಡುತ್ತಾ ಎಂಜಾಯ್ ಮಾಡುತ್ತಿದ್ದಾರೆ. ಇದರ ವಿಡಿಯೋ ಅನ್ನು ಚೈತ್ರಾ ವಾಸುದೇವನ್ ಹಂಚಿಕೊಂಡಿದ್ದಾರೆ. ಆದರೆ ಚೈತ್ರಾ, ತಾವು ಮದುವೆ ಆಗುತ್ತಿರುವ ಯುವಕನ ಮುಖವನ್ನು ವಿಡಿಯೋದಲ್ಲಿ ತೋರಿಸಿಲ್ಲ. ಚೈತ್ರಾ ಅವರನ್ನು ಮದುವೆ ಆಗುತ್ತಿರುವ ಯುವಕ ಯಾರೆಂಬುದು ಗುಟ್ಟಾಗಿಯೇ ಇದೆ. ಎರಡನೇ ಮದುವೆ ಘೋಷಣೆಗೆ ಶಾಸ್ವಿ ಶ್ರೀವತ್ಸ, ಹರ್ಷಿಕಾ ಪೂಣಚ್ಚ, ದಿವ್ಯಾ ಉರುಡುಗ, ಶ್ವೇತಾ ಚೆಂಗಪ್ಪ, ಕಾವ್ಯಾ ಗೌಡ, ಕಾವ್ಯಾ ಶೆಟ್ಟಿ ಇನ್ನೂ ಅನೇಕ ಟಿವಿ ಮತ್ತು ಸಿನಿಮಾ ಸೆಲೆಬ್ರಿಟಿಗಳು ಶುಭ ಹಾರೈಸಿದ್ದಾರೆ.

ಚೈತ್ರಾ ವಾಸುದೇವನ್ ಈ ಹಿಂದೆ ಮದುವೆ ಆಗಿದ್ದರು. ಆದರೆ ದಾಂಪತ್ಯದಲ್ಲಿ ವಿರಸ ಮೂಡಿದ ಕಾರಣ ವಿಚ್ಛೇದನ ಪಡೆದುಕೊಂಡಿದ್ದರು. ಬಿಗ್‌ಬಾಸ್ 7ರ ಸ್ಪರ್ಧಿ ಆಗಿದ್ದ ಚೈತ್ರಾ ವಾಸುದೇವನ್, ಜನಪ್ರಿಯ ಟಿವಿ ನಿರೂಪಕಿಯೂ ಹೌದು. ಜೊತೆಗೆ ಉದ್ಯಮಿಯೂ ಆಗಿರುವ ಚೈತ್ರಾ ವಾಸುದೇವನ್ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಯೊಂದನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಇದೀಗ ಎರಡನೇ ಮದುವೆ ಆಗುವ ಮೂಲಕ ಬಾಳಿನಲ್ಲಿ ಮತ್ತೆ ಜಂಟಿಯಾಗಲು ಚೈತ್ರಾ ಮುಂದಾಗಿದ್ದಾರೆ.

ಕಳೆದ ಕೆಲ ದಿನಗಳಿಂದಲೂ ಪ್ಯಾರಿಸ್‌ನಲ್ಲಿರುವ ಚೈತ್ರಾ ವಾಸುದೇವನ್ ಅವರು ಅಲ್ಲಿ ಕೆಲ ಫೋಟೊಶೂಟ್‌ಗಳನ್ನು ಮಾಡಿಸಿದ್ದಾರೆ. ಕೊನೆಗೆ ಐಫೆಲ್ ಟವರ್ ಎದುರು ನಿಂತು ತಾವು ಮದುವೆ ಆಗಲಿರುವ ವಿಷಯವ ಘೋಷಿಸಿದ್ದಾರೆ. ಇನ್‌ಸ್ಟಾಗ್ರಾಂ ಸ್ಟೋರಿಯಲ್ಲಿಯೂ ಈ ವಿಷಯ ಹಂಚಿಕೊಂಡಿರುವ ನಟಿ, ವಿವಿಧ ಆರೋಗ್ಯಕರ ಆಹಾರದ ಚಿತ್ರಗಳನ್ನು ಹಂಚಿಕೊಂಡು ವಧು ಆಗುತ್ತಿದ್ದೇನೆ. ತ್ವಚೆಯನ್ನು ಸುಂದರವಾಗಿಟ್ಟುಕೊಳ್ಳಲು ಇದೆಲ್ಲ ಮಾಡಬೇಕಿದೆ ಎಂದಿದ್ದಾರೆ.

# ಪ್ರೀತಿ ಖಚಿತಪಡಿಸಿದ ರಶ್ಮಿಕಾ



ದಕ್ಷಿಣ ಚಿತ್ರರಂಗದ ಜನಪ್ರಿಯ ನಟ ವಿಜಯ್ ದೇವರಕೊಂಡ ಜೊತೆ ಡೇಟಿಂಗ್‌ನಲ್ಲಿದ್ದಾರೆ ಎಂಬ ವದಂತಿ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಅವರನ್ನು ಸುತ್ತುವರೆದಿರುವಂತೆಯೇ ಇದೀಗ ತಾವು ರಿಲೇಶನ್‌ಶಿಪ್‌ನಲ್ಲಿರುವುದಾಗಿ ರಶ್ಮಿಕಾ ದೃಢಪಡಿಸಿದ್ದಾರೆ. ಅದಾಗ್ಯೂ, ತಮ್ಮ ಪಾರ್ಟ್ನರ್ ಹೆಸರನ್ನು ಬಹಿರಂಗಪಡಿಸಿಲ್ಲ.

ಇತ್ತೀಚೆಗೆ ಮಾಧ್ಯಮದವರೊಂದಿಗೆ ಮಾತನಾಡುವ ವೇಳೆ, ರಶ್ಮಿಕಾ ತಮ್ಮ ಜೀವನದ ಬಗ್ಗೆ ಹಂಚಿಕೊಂಡರು. ಸಂಗಾತಿಯಲ್ಲಿ ತಾವು ಇಷ್ಟಪಡುವ ಗುಣಗಳು ಮತ್ತು ವೈಯಕ್ತಿಕ ಸಂಬಂಧಗಳೊಂದಿಗೆ ವೃತ್ತಿಜೀವನದ ಖ್ಯಾತಿಯನ್ನು ಬ್ಯಾಲೆನ್ಸ್ ಮಾಡುವ ಬಗ್ಗೆಯೂ ಮಾತನಾಡಿದ್ದಾರೆ.

ತಮ್ಮ "ಹ್ಯಾಪಿ ಪ್ಲೇಸ್" ಬಗ್ಗೆ ಮಾತನಾಡಿದ ರಶ್ಮಿಕಾ, "ಮನೆ ನನ್ನ ಸಂತೋಷದ ಸ್ಥಳ. ಯಶಸ್ಸು ಬರಬಹುದು, ಹಾಗೇ ಹೋಗಬಹುದು. ಆದ್ರೆ ಮನೆ ಶಾಶ್ವತ. ನಾನು ಆ ಸ್ಥಳದಿಂದ ಕೆಲಸ ಮಾಡುತ್ತೇನೆ. ನನಗೆ ಸಿಗುವ ಖ್ಯಾತಿಯ ಹೊರತಾಗಿಯೂ, ನಾನಿನ್ನೂ ಓರ್ವ ಮಗಳು, ಸಹೋದರಿ ಮತ್ತು ಸಂಗಾತಿ. ನನ್ನ ಆ ವೈಯಕ್ತಿಕ ಜೀವನವನ್ನು ನಿಜವಾಗಿಯೂ ಗೌರವಿಸುತ್ತೇನೆ. ನಾನೀಗ ಎರಡೂ ಪ್ರಪಂಚಗಳಲ್ಲಿ ಅತ್ಯುತ್ತಮವಾಗಿ ಜೀವಿಸುತ್ತಿದ್ದೇನೆ. ನಾನು ನನ್ನ ಸ್ವಂತ ಜೀವನದೊಂದಿಗೆ ಈ ವೈಯಕ್ತಿಕ ಜೀವನವನ್ನೂ ಕಾಪಾಡಿಕೊಳ್ಳುವ ವ್ಯಕ್ತಿ ಎಂದು ಹೇಳಲಿಚ್ಛಿಸುತ್ತೇನೆ" ಎಂದರು.

ಪುರುಷನಲ್ಲಿ ಯಾವ ಗುಣಗಳು ಆಕರ್ಷಕ ಎಂದೆನಿಸುತ್ತವೆ ಎಂಬ ಪ್ರಶ್ನೆಗೆ, "ಕಣ್ಣುಗಳು ಆತ್ಮಕ್ಕೆ ಕಿಟಕಿ. ನಾನದರಲ್ಲಿ ನಂಬಿಕೆ ಇಡುತ್ತೇನೆ. ನಗುಮುಖ ಹೊಂದಿರುವ ಜನರು ನನಗೆ ಹಿಡಿಸುತ್ತಾರೆ. ಸಹಜವಾಗಿ, ಯಾರೇ ಇರಲಿ ತಮ್ಮ ಸುತ್ತಲಿನ ಜನರನ್ನು ಗೌರವಿಸುವ ವ್ಯಕ್ತಿ ನನಗೆ ಇಷ್ಟ ಆಗುತ್ತಾರೆ" ಎಂದು ತಿಳಿಸಿದರು.

ರಶ್ಮಿಕಾ ಮಂದಣ್ಣ ಹಾಗೂ ವಿಜಯ್ ದೇವರಕೊಂಡ ವಿವಿಧ ಕಾರ್ಯಕ್ರಮಗಳಲ್ಲಿ ಒಟ್ಟಿಗೆ ಕಾಣಿಸಿಕೊಳ್ಳುವ ಮೂಲಕ ಡೇಟಿಂಗ್ ಊಹಾಪೋಹಗಳಿಗೆ ಕಾರಣರಾಗಿದ್ದಾರೆ. ಕಳೆದ ವರ್ಷ ವಿಜಯ್ ಅವರ ಕುಟುಂಬದೊಂದಿಗೆ ರಶ್ಮಿಕಾ ದೀಪಾವಳಿ ಆಚರಿಸಿದರು. ಹಾಗೇ ಅವರೊಂದಿಗೆ ಪುಷ್ಪ 2: ದಿ ರೂಲ್ ವೀಕ್ಷಿಸಿದ್ದು ಕಂಡುಬಂದಿದೆ.

ಹಿಂದಿನ ಸಂದರ್ಶನವೊಂದರಲ್ಲಿ, "ನನಗೆ 35 ವರ್ಷ. ನಾನಿನ್ನು ಸಿಂಗಲ್ ಆಗಿರುತ್ತೇನೆ ಎಂದು ನೀವು ಭಾವಿಸುತ್ತೀರಾ" ಎಂದು ವಿಜಯ್ ತಿಳಿಸಿದ್ದರು. ಸೂಕ್ತ ಸಮಯ ಬರುವವರೆಗೂ ತಮ್ಮ ಲವ್ ಲೈಫ್ ಬಗ್ಗೆ ಮಾತನಾಡಲು ಇಚ್ಛಿಸೋದಿಲ್ಲ ಎಂದು ತಿಳಿಸಿದ್ದರು.

ಸಿನಿಮಾ ಬಗ್ಗೆ ಗಮನಿಸೋದಾದರೆ, ರಶ್ಮಿಕಾ ಮಂದಣ್ಣ ಲಕ್ಷ್ಮಣ್ ಉಟೇಕರ್ ನಿರ್ದೇಶನದ ಐತಿಹಾಸಿಕ ಕ್ವೀನ್ ಸಿನಿಮಾ 'ಛಾವಾ'ದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಛತ್ರಪತಿ ಸಂಭಾಜಿ ಮಹಾರಾಜ್ ಅವರ ಜೀವನವನ್ನು ಆಧರಿಸಿದ ಈ ಚಿತ್ರದಲ್ಲಿ ವಿಕ್ಕಿ ಕೌಶಲ್ ಮುಖ್ಯ ಪಾತ್ರದಲ್ಲಿ ಮತ್ತು ಅಕ್ಷಯ್ ಖನ್ನಾ ಚಕ್ರವರ್ತಿ ಔರಂಗಜೇಬ್ ಪಾತ್ರದಲ್ಲಿ ನಟಿಸಿದ್ದಾರೆ. ಛಾವಾ ಫೆಬ್ರವರಿ 14ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

# ಅಧಿಪತ್ರ ಚಿತ್ರದಲ್ಲಿ ಕಥೆಯೇ ಹೀರೋ: ರೂಪೇಶ್



ಚಂದನವನದ ಭರವಸೆಯ ನಟ ರೂಪೇಶ್ ಶೆಟ್ಟಿ ಮುಖ್ಯಭೂಮಿಕೆಯ 'ಅಧಿಪತ್ರ' ಚಿತ್ರ ತನ್ನ ಪ್ರಚಾರ ಪ್ರಾರಂಭಿಸಿದೆ. ಫೆಬ್ರವರಿ 7ಕ್ಕೆ ರಾಜ್ಯಾದ್ಯಂತ ತೆರೆ ಕಾಣಲಿರುವ 'ಅಧಿಪತ್ರ'ದಲ್ಲಿ ಕರಾವಳಿ ಭಾಗದ ಕಥೆ ಕಟ್ಟಿಕೊಡಲಾಗಿದೆ. ಬಿಡುಗಡೆ ಹೊಸ್ತಿಲಲ್ಲಿರುವ ಚಿತ್ರದ ಟ್ರೇಲರ್ ಅನಾವರಣಗೊಂಡಿದ್ದು, ಸಿನಿಮಾ ನೋಡುವ ಪ್ರೇಕ್ಷಕರ ಕುತೂಹಲ ಹೆಚ್ಚಿದೆ.

ಶಿವಮೊಗ್ಗದ ಶುಭಂ ಹೋಟೆಲ್‌ನಲ್ಲಿ ಬಿಗ್ ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ಹಾಗೂ ನಾಯಕ ನಟಿ ಜಾಹ್ನವಿ ಶೆಟ್ಟಿ ಅಭಿಯನದ 'ಅಧಿಪತ್ರ' ಟ್ರೇಲರ್ ಅನಾವರಣಗೊಳಿಸಲಾಯಿತು. ಶಿವಮೊಗ್ಗ ನಾಡವರ ಯಾನೆ ಬಂಟರ ಸಂಘದ ಅಧ್ಯಕ್ಷ ಸತೀಶ್ ಶೆಟ್ಟಿ ಟ್ರೇಲರ್ ಬಿಡುಗಡೆಗೊಳಿಸಿದ್ರು.

ಟ್ರೇಲರ್ ರಿಲೀಸ್ ಬಳಿಕ ಮಾತನಾಡಿದ ನಟ ರೂಪೇಶ್ ಶೆಟ್ಟಿ, ಅಧಿಪತ್ರ ಸಿನಿಮಾದಲ್ಲಿ ಕಥೆಯೇ ಹೀರೋ. ಕಥೆಗೆ ಏನು ಬೇಕೋ ಅದನ್ನು ಚಿತ್ರದಲ್ಲಿ ಯಾವುದೇ ರಾಜಿ ಇಲ್ಲದೇ ಮಾಡಲಾಗಿದೆ. ಶಯನ್ ಶೆಟ್ಟಿ ಚಿತ್ರವನ್ನು ಚೆನ್ನಾಗಿ ಚಿತ್ರಿಸಿದ್ದಾರೆ. ಬೆಂಗಳೂರಿನಲ್ಲಿ ಎಲ್ಲರೂ ತಮ್ಮ ಚಿತ್ರದ ಟ್ರೇಲರ್ ಬಿಡುಗಡೆ ಮಾಡುತ್ತಾರೆ. ಮಲೆನಾಡಿನಲ್ಲೂ ಸಹ ಚಿತ್ರ ಪ್ರೇಮಿಗಳಿದ್ದು, ಅವರ ಎದರು ನಮ್ಮ ಚಿತ್ರದ ಟ್ರೇಲರ್ ಅನಾವರಣಗೊಳಿಸಿರುವುದು ಖುಷಿ ಕೊಟ್ಟಿದೆ ಎಂದು ತಿಳಿಸಿದರು.

ಕರಾವಳಿ ಭಾಗದಲ್ಲಿ ನಡೆಯುವ ಕಥೆಯನ್ನು ಸಸ್ಪೆನ್ಸ್ ಹಾಗೂ ಹಾರರ್ ಮೂಲಕ ಹೇಳಲು ಚಿತ್ರದ ನಿರ್ದೇಶಕ ಶಯನ್ ಶೆಟ್ಟಿ ಹೊರಟಿದ್ದಾರೆ. ಸಿನಿಮಾ ಫೆಬ್ರವರಿ 7ರಂದು ಬಿಡುಗಡೆ ಆಗಲಿದೆ. ನಾಯಕ ರೂಪೇಶ್ ಶೆಟ್ಟಿ ಅವರು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಜಾಹ್ನವಿ ಅವರು ಇದೇ ಮೊದಲ ಬಾರಿ ನಾಯಕ ನಟಿಯಾಗಿ ನಟಿಸಿದ್ದಾರೆ.

# ಪ್ಲಾಸ್ಟಿಕ್ ಸರ್ಜರಿ ಕೆಟ್ಟದಲ್ಲ ಎಂದ ಶ್ರೀದೇವಿ ಮಗಳು

ಕಲಾಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಅಂದವಾಗಿ ಕಾಣುವುದು ಎಷ್ಟು ಮುಖ್ಯ ಎಂಬುದು ಎಲ್ಲರಿಗೂ ಗೊತ್ತು. ಇದಕ್ಕಾಗಿ ಅನೇಕ ನಟಿಯರು ಪ್ಲಾಸ್ಟಿಕ್ ಸರ್ಜರಿಯ ಮೊರೆ ಹೋಗಿದ್ದಾರೆ. ಪ್ರಿಯಾಂಕಾ ಚೋಪ್ರಾರಿಂದ ಹಿಡಿದು ಈಗ ಜಾನ್ವಿ ಮತ್ತು ಖುಷಿ ಕಪೂರ್‌ವರೆಗೆ ಅನೇಕರು ತಮ್ಮ ಲುಕ್ ಬದಲಾಯಿಸಲು ಕಾಸ್ಮೆಟಿಕ್ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ದಿವಂಗತ ನಟಿ ಶ್ರೀದೇವಿ ಮತ್ತು ನಿರ್ಮಾಪಕ ಬೋನಿ ಕಪೂರ್ ಅವರ ಕಿರಿಯ ಪುತ್ರಿ ಖುಷಿ ಕಪೂರ್ ಕಳೆದ ವರ್ಷ ಸಂದರ್ಶನವೊಂದರಲ್ಲಿ ಮೂಗಿನ ಶಸ್ತ್ರಚಿಕಿತ್ಸೆಗೆ ಒಳಗಾಗಿರುವುದನ್ನು ಒಪ್ಪಿಕೊಂಡರು. ಆದರೆ ಈ ಕಾರಣದಿಂದಾಗಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಟ್ರೋಲ್‌ಗೆ ಒಳಗಾಗಬೇಕಾಯಿತು. ಅವರನ್ನು ಪ್ಲಾಸ್ಟಿಕ್ ಎಂದು ಕರೆದರು. ಅವರು ಇದು ದೊಡ್ಡ ವಿಷಯವಲ್ಲ ಎಂದಿದ್ದಾರೆ.

'ಕೆಲವು ದಿನಗಳ ಹಿಂದೆ, ನನ್ನ ಹುಬ್ಬುಗಳ ಮೇಲೆ ನ್ಯಾನೋ–ಬ್ಲೇಡ್ ಕಾರ್ಯವಿಧಾನವನ್ನು ಮಾಡಿಸಿದ್ದೇನೆ. ನ್ಯಾನೊ–ಬ್ಲೇಡ್ ಚಿಕಿತ್ಸೆಯಿಂದ ಹುಬ್ಬು ಉತ್ತಮವಾಯಿತು. ಇದಾದ ಬಳಿಕ 10 ದಿನಗಳವರೆಗೆ ನೀವು ಹುಬ್ಬುಗಳಿಗೆ ನೀರು ತಾಗಿಸುವಂತಿರಲಿಲ್ಲ. ಅವರು ನಿಮಗೆ ಒಂದು ರೀತಿಯ ಕವಚವನ್ನು ನೀಡುತ್ತಾರೆ, ಅದನ್ನು ಹಣೆಯ ಮೇಲೆ ಹಚ್ಚಿದರೆ ಸ್ನಾನ



ಮಾಡುವಾಗ ಹುಬ್ಬುಗಳ ಮೇಲೆ ನೀರು ಬರುವುದಿಲ್ಲ. ಇದು ಬಹಳ ಹಾಸ್ಯಾಸ್ಪದವಾಗಿ ಕಾಣುತ್ತದೆ. ಆ ಶೀಲ್ಡ್ ಅನ್ನು ನನ್ನ ಮುಖಕ್ಕೆ ಅನ್ವಯಿಸಿದ ನಂತರ, ನಾನು ನನ್ನ ಕ್ಲೋಸ್ ಅಪ್ ಫೋಟೋವನ್ನು ನನ್ನ ಸ್ನೇಹಿತರಿಗೆ ಕಳುಹಿಸಿದೆ. ನಾನು ಅದರ ಮೇಲೆ ಏನನ್ನೂ ಬರೆದಿಲ್ಲ. ಆದರೆ, ಅವರು ನನ್ನನ್ನು ಪ್ರಶ್ನಿಸಲಿಲ್ಲ. ಏಕೆಂದರೆ ಈಗ ಎಲ್ಲವೂ ಸಾಮಾನ್ಯವಾಗಿದೆ' ಎಂದಿದ್ದಾರೆ ಅವರು.


ಕಾಸ್ಮೆಟಿಕ್ ಸರ್ಜರಿ ಬಗ್ಗೆ ಮಾತನಾಡಿದ ಖುಷಿ, 'ಜನರಿಗೆ ಸತ್ಯವನ್ನು ಹೇಳಿದರೆ ಅವರು ಟ್ರೋಲ್ ಮಾಡುತ್ತಾರೆ ಮತ್ತು ದ್ವೇಷಿಸುತ್ತಾರೆ ಎಂದು ಅನೇಕ ಜನರು ಭಯಪಡುತ್ತಾರೆ. ಪ್ಲಾಸ್ಟಿಕ್ ಸರ್ಜರಿ, ಕಾಸ್ಮೆಟಿಕ್ ಸರ್ಜರಿ ಮಾಡುವುದರಲ್ಲಿ ಕೆಟ್ಟದ್ದೂ ತಪ್ಪೂ ಇಲ್ಲ ಎಂದು ನನಗನ್ನಿಸುತ್ತಿದೆ' ಎಂದಿದ್ದಾರೆ ಅವರು.

'ಕೆಲವರು ಕಾಸ್ಮೆಟಿಕ್ ಸರ್ಜರಿ ಮಾಡುತ್ತಾರೆ ಮತ್ತು ನಾನು ನೈಸರ್ಗಿಕವಾಗಿ ಎಷ್ಟು ಸುಂದರವಾಗಿ ಕಾಣುತ್ತೇನೆ ಎಂದು ಹೇಳುತ್ತಾರೆ, ಇದು ತಪ್ಪು. ಕಲಾವಿದರು ತಮ್ಮ ಅಭಿಮಾನಿಗಳೊಂದಿಗೆ ಪ್ರಾಮಾಣಿಕವಾಗಿರಬೇಕು. ನೀವು ನಿಮ್ಮ ಅಭಿಮಾನಿಗಳೊಂದಿಗೆ ಪ್ರಾಮಾಣಿಕವಾಗಿರಬೇಕು. ಏಕೆಂದರೆ ಕೆಲವರು ನಿಮ್ಮನ್ನು ಒಂದಲ್ಲ ಒಂದು ಕಾರಣಕ್ಕೆ ಇಷ್ಟಪಡುವುದಿಲ್ಲ. ಈಗ ಎಲ್ಲರ ಮುಂದೆ ಸತ್ಯ ಹೇಳಿದ್ದಾಳೆ ಎಂದು ಹೇಳಲು ಇಷ್ಟಪಡುವುದಿಲ್ಲ. ಅದಕ್ಕಾಗಿಯೇ ನಾನು ಯಾವುದೇ ಕಾಮೆಂಟ್‌ಗೆ ಉತ್ತರಿಸಿದೆ ಮತ್ತು ಇದು (ಪ್ಲಾಸ್ಟಿಕ್ ಸರ್ಜರಿ) ನನಗೆ ದೊಡ್ಡ ವಿಷಯವಲ್ಲ ಎಂದು ಹೇಳಿದೆ' ಎಂದಿದ್ದಾರೆ ಅವರು.

ಖುಷಿ ಕಪೂರ್ 'ದಿ ಆರ್ಚೀಸ್' ಚಿತ್ರದ ಮೂಲಕ ಬಾಲಿವುಡ್‌ಗೆ ಪಾದಾರ್ಪಣೆ ಮಾಡಿದರು. ಅವರು ಶೀಘ್ರದಲ್ಲೇ ಅದ್ವೈತ್ ಚಂದನ್ ಅವರ ಸಿನಿಮಾದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದರಲ್ಲಿ ಅವರು ಆಮಿರ್ ಖಾನ್ ಅವರ ಮಗ ಜುನೈದ್ ಖಾನ್ ಅವರೊಂದಿಗೆ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ ಮತ್ತು ಈ ಚಿತ್ರವು ಫೆಬ್ರವರಿ 7 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

# ವೀರ ಸಿಂಧೂರ ಲಕ್ಷ್ಮಣ ದಅಪ್‌ಡೇಟ್ ಕೊಟ್ಟ ಸುಧೀರ್

ಕೊನೆಗೂ ದರ್ಶನ್ ಅಭಿಮಾನಿಗಳಿಗೆ ತರುಣ್ ಸುಧೀರ್ 'ವೀರ ಸಿಂಧೂರ ಲಕ್ಷ್ಮಣ'ದ ಬಗ್ಗೆ ಅಪ್‌ಡೇಟ್ ಕೊಟ್ಟಿದ್ದಾರೆ. ಅವರು ನಿರ್ದೇಶಿಸುತ್ತಿರುವ ಈ ಸಿನಿಮಾದ ಬಗ್ಗೆ ಮಾತಾಡಿರುವ ವಿಡಿಯೋ ಒಂದನ್ನು ದರ್ಶನ್ ಫ್ಯಾನ್ಸ್ ಸೋಶಿಯಲ್ ಮೀಡಿಯಾದಲ್ಲಿ ಶೇರ್ ಮಾಡುತ್ತಿದ್ದಾರೆ. ಆ ವಿಡಿಯೋದಲ್ಲಿ ತರುಣ್ 'ವೀರ ಸಿಂಧೂರ ಲಕ್ಷ್ಮಣ' ಸಿನಿಮಾ ಬಗ್ಗೆ ಕೆಲವು ಸೂಕ್ಷ್ಮ ಸುಳಿವುಗಳನ್ನು ಕೊಟ್ಟಿದ್ದಾರೆ. 'ಸಂಗೊಳ್ಳಿರಾಯಣ್ಣ' ಸಿನಿಮಾ ಬಳಿಕ ಮತ್ತೆ ದೇಶಭಕ್ತಿಯನ್ನು ಸಾರುವ ಸಿನಿಮಾದಲ್ಲಿ ದರ್ಶನ್ ನಟಿಸಿರಲಿಲ್ಲ. ಮತ್ತೆ ಅಂತಹದ್ದೊಂದು ಸಿನಿಮಾದಲ್ಲಿ ನಟಿಸಬೇಕು ಅನ್ನೋದು ಬಹಳ ದಿನಗಳ ಆಸೆಯಾಗಿತ್ತು. ಹಾಗಾಗಿ 'ವೀರ ಸಿಂಧೂರ ಲಕ್ಷ್ಮಣ' ಸಿನಿಮಾ ಮಾಡುವ ನಿರ್ಧಾರಕ್ಕೆ ಬಂದಿದ್ದರು. ಅದು 'ಕಾಟೇರ' ಸಿನಿಮಾದ ರಿಲೀಸ್‌ಗೂ ಮುನ್ನವೇ ಅನೌನ್ಸ್ ಆಗಿತ್ತು. 'ಯಜಮಾನ' ಸಿನಿಮಾದ ನಿರ್ಮಾಪಕಿ ಶೈಲಜಾ ನಾಗ್ ನಿರ್ಮಾಣ ಮಾಡುವುದಕ್ಕೆ ಮುಂದೆ ಬಂದಿದ್ದರು. ಆಗ ತರುಣ್ ಸುಧೀರ್ ಈ ಸಿನಿಮಾದ ನಿರ್ದೇಶಕರು ಅಂತ ಘೋಷಣೆಯಾಗಿತ್ತು. ಅಲ್ಲಿಂದ ಈ ಸಿನಿಮಾ ಬಗ್ಗೆ ತರುಣ್ ಸುಧೀರ್ ಹೆಚ್ಚಿನ ಮಾಹಿತಿಯನ್ನು ಬಿಟ್ಟುಕೊಟ್ಟಿರಲಿಲ್ಲ. ಈಗ ವೇದಿಕೆಯೊಂದರ ಮೇಲೆ ಮಾತಾಡಿರುವ ವಿಡಿಯೋವನ್ನು




ಫ್ಯಾನ್ಸ್ ಶೇರ್ ಮಾಡುತ್ತಿದ್ದಾರೆ. "ಮುಂದೆ ನಾನು ಮಾಡುತ್ತಿರುವ ಸಿನಿಮಾ ಬಂದು ಈ ಮಣ್ಣಿನ ಗಂಡು. ಈ ಮಣ್ಣಿನ ಹೆಮ್ಮೆ ವೀರ ಸಿಂಧೂರ ಲಕ್ಷ್ಮಣ ಅಂತ. ನಮ್ಮ ಚಾಲೆಂಜಿಂಗ್ ಸ್ಟಾರ್ ದರ್ಶನ್ ಸರ್ ಅವರ ಅಭಿನಯದಲ್ಲಿ ಮಾಡುತ್ತಿದ್ದೇವೆ." ಎಂದು ತರುಣ್ ಸುಧೀರ್ ಈ ಪ್ರಾಜೆಕ್ಟ್ ಇನ್ನೂ ಜೀವಂತವಾಗಿದೆ ಅನ್ನೋದನ್ನು ಕನ್ಫರ್ಮ್ ಮಾಡಿದ್ದಾರೆ. ಹಾಗೇ ಆದಷ್ಟು ಬೇಗ 'ವೀರ ಸಿಂಧೂರ ಲಕ್ಷ್ಮಣ' ಶುರು ಮಾಡುವ ಸುಳಿವನ್ನು ಇದೇ ವಿಡಿಯೋದಲ್ಲಿ ನೀಡಿದ್ದಾರೆ. "ಅವರು ಆದಷ್ಟು ಬೇಗ ಗುಣಮುಖರಾಗಿ, ಆದಷ್ಟು ಬೇಗ ಚಿತ್ರರಂಗಕ್ಕೆ ಬರಬೇಕು. ಅದಕ್ಕೋಸ್ಕರ ನಾವೆಲ್ಲರೂ ಕಾಯುತ್ತಿದ್ದೇವೆ" ಎಂದು ಹೇಳುವ ಮೂಲಕ 'ವೀರ ಸಿಂಧೂರ ಲಕ್ಷ್ಮಣ' ಶೀಘ್ರವೇ ಶುರುವಾಗಲಿದೆ ಎನ್ನುವ ಸುಳಿವನ್ನು ನೀಡಿದ್ದಾರೆ. ಇನ್ನು ಈ ಸಿನಿಮಾ 'ರಾಬರ್ಟ್' ರಿಲೀಸ್ ಸಮಯದಲ್ಲೇ ಸುದ್ದಿಯಲ್ಲಿತ್ತು. ಅದನ್ನು ನಿರ್ಮಾಪಕ ಉಮಾಪತಿ ನಿರ್ಮಾಣ ಮಾಡುತ್ತಾರೆ ಎನ್ನಲಾಗಿತ್ತು. ಇಬ್ಬರ ಕಿತ್ತಾಟದಲ್ಲಿ ಪ್ರಾಜೆಕ್ಟ್ ಡ್ರಾಪ್ ಆಗಿತ್ತು. ಈಗ ಶೈಲಾಜಾ ನಾಗ್ ಈ ಸಿನಿಮಾವನ್ನು ನಿರ್ಮಾಣ ಮಾಡುತ್ತಿದ್ದಾರೆ. ಆದರೆ, 'ವೀರ ಸಿಂಧೂರ ಲಕ್ಷ್ಮಣ' ಸೆಟ್ಟೇರುವುದಕ್ಕೂ ಮುನ್ನ ದರ್ಶನ್ 'ಡೆವಿಲ್' ಮುಗಿಸಬೇಕಿದೆ. ಅದು ಮುಗಿದ ನಂತರ ದರ್ಶನ್ 'ವೀರ ಸಿಂಧೂರ ಲಕ್ಷ್ಮಣ' ಕ್ಕೆ ಗ್ರೀನ್ ಸಿಗ್ನಲ್ ಕೊಡಬಹುದು ಎಂಬ ನಿರೀಕ್ಷೆಯಿದೆ.

ಪ್ರಕಾಶಕ– ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು–560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು–562123 ಇಲ್ಲಿ ಮುದ್ರಿಸಲ್ಪಟ್ಟಿದೆ. RNI.KAR/KAN/2009/31934, ದೂರವಾಣಿ: 9448074878
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
RNI.KAR/KAN/2009/31934.VOLUME-16/ISSUE-62 Email-mussanje2010@gmail.com, Phone: 9448074878